ಅಧ್ಯಕ್ಷರು.—ಸೋಮವಾರ ಅದನ್ನು ಮುಗಿಸಿಕೊಡುತ್ತೀರಾ? ಆಯಿತು. ಈಗ ಶ್ರೀಮಾನ್ ಬಿ. ಎಸ್. ಯಡಿಯೂರಪ್ಪನವರು, ತಾವು ೧೫ ನಿಮಿಷ ಮಾತನಾಡಿ.

ಅಲ್ಪಕಾಲಾವಧಿಯ ಚರ್ಚೆ

ಹತ್ತಿ ಗಿರಣಿ ಎಂ. ಸಿ. ಎಫ್. ಹಾಗೂ ಇತರೆ ಕೈಗಾರಿಕೆಗಳಲ್ಲಿ ತಲೆದೋರಿರುವ ಮುಗ್ಗಟ್ಟಿನ ಬಗ್ಗೆ

ಶ್ರೀ ಬಿ. ಎಸ್. ಯಡಿಯೂರಪ್ಪ (ಶಿಕಾರಿಪುರ).—ಸನ್ಮಾನ್ಯ ಅಧ್ಯಕ್ಷರೆ, ಸಾರ್ವಜನಿಕ ಮಹತ್ವವಾಗಿ ರಾಜ್ಯದಲ್ಲಿರುವ ಕೈಗಾರಿಕೆಗಳು ಮುಚ್ಚಿರುವುದರಿಂದ ಅಲ್ಲಿರುವಂತಹ ಕಾರ್ಮಿಕರಿಗೆ ಉಂಟಾಗಿರುವ ತೊಂದರೆಯ ಬಗ್ಗೆ ಅನೇಕ ಹಿರಿಯ ಸದಸ್ಯರು ಬೆಳಕನ್ನು ಚೆಲ್ಲಿದ್ದಾರೆ. ಬಹುಶಃ ಈ ಒಂದು ಸಂದರ್ಭದಲ್ಲಿ ಎಲ್ಲಾ ಸಾರ್ವಜನಿಕ ಉದ್ದಿಮೆಗಳ ಬಗ್ಗೆ ಸನ್ಮಾನ್ಯ ಸಚಿವರು ಅಲ್ಲಿರುವ ಸಮಸ್ಯೆಯ ಬಗ್ಗೆ ಗಮನಹರಿಸಿದ್ದಾರೆಯೋ ಎನ್ನುವ ಒಂದು ವಿಷಯ ಸಹ ನಮಗೆಲ್ಲರಿಗೂ ತಿಳಿಯಬೇಕಾಗಿದೆ. ಇವತ್ತು ಕೈಗಾರಿಕೆಯ ಅಭಿವೃದ್ಧಿ ಅಗತ್ಯ. ಇರುವ ಕೈಗಾರಿಕೆಗಳು ಉಳಿಯಬೇಕಾಗಿದೆ. ಹೊಸ ಕೈಗಾರಿಕೆಗಳು ಪ್ರಾರಂಭವಾಗಿ ಆಯಾ ಕ್ಷೇತ್ರಗಳಲ್ಲಿ

(ಶ್ರೀ ಎಸ್. ಎಸ್. ಕಡಪಟ್ಟಿಯವರು—ಅಧ್ಯಕ್ಷರ ಸ್ಥಾನವನ್ನಲಂಕರಿಸಿದರು)

ಇರುವಂತಹ ಕೈಗಾರಿಕೆಗಳ ಒಳ್ಳೆಯ ಉತ್ಪಾದನೆಯಿಂದ ಈ ರಾಜ್ಯಕ್ಕೆ ಹೆಚ್ಚಿನ ಹಣಕಾಸಿನ ಅನುಕೂಲವಾಗಿ, ಜನ ನೆಮ್ಮದಿಯಿಂದ ಜೀವನ ಮಾಡುವ ಒಂದು ಹೊಸ ವ್ಯವಸ್ಥೆಯನ್ನು ಈ ಸರ್ಕಾರ ಮಾಡಬೇಕಾಗಿದೆ. ದುರಾದೃಷ್ಟವಶಾತ್ ಈ ರೀತಿಯಾದ ಒಂದು ಒಳ್ಳೆಯ ಸ್ಥಿತಿಗೆ ಕಾರ್ಖಾನೆಗಳನ್ನು ತರುವುದರ ಬದಲಾಗಿ ಇವತ್ತು ಸರ್ಕಾರಿ ಸ್ವಾಮ್ಯದಲ್ಲಿರತಕ್ಕ ಎಲ್ಲಾ ಉದ್ದಿಮೆಗಳಲ್ಲಿ, ಅನೇಕ ಉದ್ದಿಮೆಗಳಲ್ಲಿ ಕೋಟ್ಯಾಂತರ ರೂಪಾಯಿಗಳು ಲಾಸಾಗುತ್ತಿದೆ. ಅದನ್ನು ತಪ್ಪಿಸುವ ಒಂದು ಪ್ರಾಮಾಣಿಕ ಪ್ರಯತ್ನವಾಗುತ್ತಿಲ್ಲ ಎನ್ನುವುದು ತುಂಬಾ ಕಳವಳಕಾರಿಯಾದ ವಿಷಯ, ನೋವಿನ ವಿಷಯ. ಮಿಸ್ ಮ್ಯಾನೇಜ್‌ಮೆಂಟ್‌ನಿಂದ, ಪವರ್ ಷಾರ್ಟೇಜ್‌ನಿಂದ ಹಾಗೂ ಹಣಕಾಸಿನ ಸವಲತ್ತುಗಳನ್ನು ಸರ್ಕಾರ ಕೊಡದೇ ಇರುವುದರಿಂದ, ಇವತ್ತು ಸರ್ಕಾರಿ ಸ್ವಾಮ್ಯಕ್ಕೆ ಸೇರಿರತಕ್ಕ ಅನೇಕ ಉದ್ದಿಮೆಗಳು ಮುಚ್ಚುವ ಸ್ಥಿತಿಗೆ ಬಂದು ತಲುಪಿವೆ. ಆ ಒಂದು ಸಂಗತಿ ಸನ್ಮಾನ್ಯ ಸಚಿವರಿಗೆ ಗೊತ್ತಿಲ್ಲ ಎಂದಲ್ಲ. ಆದರೆ ಈ ರಾಜ್ಯದಲ್ಲಿರುವ ೬೧ ಸರ್ಕಾರಿ ಸ್ವಾಮ್ಯದಲ್ಲಿರತಕ್ಕ ಉದ್ದಿಮೆಗಳಲ್ಲಿ ೫೪ ನಡೆಯುತ್ತಿವೆ. ಅದರಲ್ಲಿ ೨೦ ಉದ್ದಿಮೆಗಳು ತುಂಬಾ ಲಾಸಾಗಿವೆ. ಲಾಸ್ ಅಂದರೆ ಯಾವ ರೀತಿ ಅಂದರೆ ಪೇಡ್‌ಅಪ್ ಕ್ಯಾಪಿಟಲ್ ಬಂಡವಾಳ ಏನು ಕೊಟ್ಟಿದ್ದೇವೆಯೋ ಅದಕ್ಕಿಂತ ಅಕ್ಯುಮುಲೇಟೆಡ್ ಲಾಸೇ ಜಾಸ್ತಿಯಾಗಿರುವಂತಹ ಉದ್ದಿಮೆಗಳು ೧೨ ಇವೆ. ಒಂದೆರಡು ಉದಾಹರಣೆಗಳನ್ನು ಕೊಟ್ಟರೆ ತಮಗೆ ಆಶ್ಚರ್ಯವಾಗಬಹುದು. ಮಾನ್ಯ ಸಚಿವರು ಅದರ ಬಗ್ಗೆ ಗಮನ ಹರಿಸುತ್ತಾರೆಂಬ ಉದ್ದೇಶದಿಂದ ಅವನ್ನು ಹೇಳುತ್ತೇನೆ. ಮೈಸೂರು ಟೊಬ್ಯಾಕೋ ಕಂಪನಿಗೆ ಪೇಡ್‌ಆಪ್ ಕ್ಯಾಪಿಟಲ್ ೧೮ ಲಕ್ಷ ೮೬, (೧೮,೮೬,೦೦೦) ಇದ್ದರೆ ೧೯೮೫–೮೬ನೇ ಸಾಲಿನಲ್ಲಿ ಅಕ್ಯೂಮ್ಯುಲೇಟೆಡ್ ಲಾಸ್ ೪೮ ಲಕ್ಷ ರೂಪಾಯಿಗಳು. ಅದೇ ರೀತಿ ಕರ್ನಾಟಕ ಇಂಪ್ಲಿಮೆಂಟ್ಸ್ ಅನ್ ಮೆಷಿನರೀಸ್‌ನಲ್ಲಿ ಪೇಡ್‌ಆಪ್ ಕ್ಯಾಪಿಟಲ್ ೧,೨೩,೦೦,೦೦೦ ಇದ್ದರೆ, ೧೯೮೫–೮೬ನೇ ಸಾಲಿನಲ್ಲಿ ಅಕ್ಯುಮ್ಯುಲೇಟೆಡ್ ಲಾಸ್ ೮,೭೩,೦೦,೦೦೦ ರೂಪಾಯಿಗಳು, ಮತ್ತೆ ಕರ್ನಾಟಕ ವಿದ್ಯುತ್ ಕಾರ್ಖಾನೆಯಲ್ಲಿ ಪೇಡ್‌ಅಪ್ ಕ್ಯಾಪಿಟಲ್ (ಬಂಡವಾಳ) ೧,೪೫,೩೬,೦೦೦ ರೂಪಾಯಿಗಳು ಇದ್ದರೆ, ೧೯೮೫–೮೬ನೇ ಸಾಲಿನಲ್ಲಿ ಅಕ್ಯುಮ್ಯುಲೇಟೆಡ್ ಲಾಸ್ ೩,೪೦,೯೯,೦೦೦ ರೂಪಾಯಿಗಳು. ನಂತರ ವಿಶ್ವೇಶ್ವರಯ್ಯ ಉಕ್ಕಿನ ಕಾರ್ಖಾನೆಯಲ್ಲಿ ಪೇಡ್‌ಆಪ್ ಕ್ಯಾಪಿಟಲ್ ೪೮ ಕೋಟಿ ಇದ್ದರೆ, ಅಕ್ಯುಮ್ಯುಲೇಟೆಡ್ ಲಾಸ್ ೧೯೮೫–೮೬ನೇ ಸಾಲಿನವರೆಗೆ ೧೧೩ ಕೋಟಿ ರೂಪಾಯಿಗಳು ಕರ್ನಾಟಕ ಸೋಪ್ ಅಂಡ್ ಡಿಟರ್ಜೆಂಟ್ ಲಿಮಿಟೆಡ್‌ನಲ್ಲಿ ಪೇಡ್‌ಆಪ್ ಕ್ಯಾಪಿಟಲ್ ೧೭,೬೩,೦೦೦ ರೂಪಾಯಿಗಳು ಇದ್ದರೆ, ೧೯೮೫–೮೬ನೇ ಸಾಲಿನವರೆಗೆ ಅಕ್ಯುಮ್ಯುಲೇಟೆಡ್ ಲಾಸ್ ೨೦,೪೯,೦೦,೦೦೦ ರೂಪಾಯಿಗಳು. ಆಗ್ರೋ ಪ್ರೋಟೀನ್ ಕಾರ್ಪೊರೇಷನ್‌ನಲ್ಲಿ ಪೇಡ್‌ಆಪ್ ಕ್ಯಾಪಿಟಲ್ ೬೦,೯೩,೦೦೦ ರೂಪಾಯಿಗಳು ಇದ್ದರೆ, ೧೯೮೫–೮೬ನೇ ಸಾಲಿನವರೆಗೆ ಅಕ್ಯುಮ್ಯುಲೇಟೆಡ್ ಲಾಸ್ ೩,೬೧,೦೦,೦೦೦ ರೂಪಾಯಿಗಳು. ಈ ಒಂದು ಸಂಗತಿಯಲ್ಲಿ ತಮಗೆ ಹೇಳುವಂತಹ ಉದ್ದೇಶವೇನೆಂದರೆ ತಾವು ಅಧಿಕಾರಕ್ಕೆ ಬಂದಮೇಲೆ ಈ ಒಂದು ಕೈಗಾರಿಕಾ ಇಲಾಖೆಯ ಜವಾಬ್ದಾರಿ

ಯನ್ನು ತಾವು ತೆಗೆದುಕೊಂಡ ಮೇಲೆ ಈ ರೀತಿ ಬಂಡವಾಳಕ್ಕಿಂತ ಹೆಚ್ಚು ಲಾಸಾಗಿರುವಂಥ ಈ ಕಾರ್ಖಾನೆಗಳನ್ನು ಸರಿಯಾದ ರೀತಿಯಲ್ಲಿ ನಡೆಸುವುದಕ್ಕೆ, ಲಾಭದಾಯಕವಾಗಿ ಮಾಡುವುದಕ್ಕೆ ಏನು ಪ್ರಾಮಾಣಿಕ ಪ್ರಯತ್ನ ಮಾಡಿದ್ದೀರಿ ಎನ್ನುವುದರ ಬಗ್ಗೆ ಸಹ ಯೋಚನೆ ಮಾಡಬೇಕಾಗಿದೆ. ಈಗಿರತಕ್ಕ ಐ.ಎ.ಎಸ್. ಅಧಿಕಾರಿಗಳು ಉಪಾಯ ಮಾಡಿಕೊಂಡು ಅವರ ಬುದ್ಧಿವಂತಿಕೆಯ ಪ್ರದರ್ಶನದ ಮೂಲಕ ಲಾಭದಾಯಕ ಕೈಗಾರಿಕೆಗಳನ್ನು ಇವತ್ತು ಸಿಕ್ ಮಾಡಿಸಿ ಅದನ್ನು ಯಾರಿಗೋ ಪ್ರೈವೇಟ್ ಮಾಲೀಕರುಗಳಿಗೆ ನೀಡುವ ಬಗ್ಗೆ ಸಂಚು ಮಾಡುತ್ತಿದ್ದಾರೆಂದು ಅನುಮಾನ ಇದೆ. ಈ ಬಗ್ಗೆ ಧೀರ್ಘವಾಗಿ ಚರ್ಚೆ ಮಾಡುವುದಕ್ಕೆ ಅವಕಾಶವಿಲ್ಲ. ಎನ್. ಜಿ. ಇ. ಎಫ್. ನ ಸುಮಾರು ೧ ಕೋಟಿ ರೂಪಾಯಿಗಳ ಷೇರ್‌ನ್ನು ಜರ್ಮನ್‌ನವರಿಗೆ ಕೊಟ್ಟಿದ್ದೇ ಇದಕ್ಕೆ ಸಾಕ್ಷಿ. ೧೦ ರೂಪಾಯಿಗಳ ಒಂದು ಷೇರನ್ನು ಅಲ್ಲಿನ ಕಾರ್ಮಿಕರೇ ೩೦ ರೂಪಾಯಿಗಳಿಗೆ ಪಡೆದುಕೊಳ್ಳುವುದಕ್ಕೆ ಸಿದ್ಧರಿದ್ದರು. ಆ ಷೇರುಗಳನ್ನು ಕಾರ್ಮಿಕರಿಗೆ ಕೊಟ್ಟಿದ್ದರೆ ೧ ಕೋಟಿ ಬದಲು ೩ ಕೋಟಿ ರೂಪಾಯಿಗಳ ಲಾಭ ಬರುತ್ತಾ ಇತ್ತು. ಈಗ ಸಹಕಾರಿ ಸಕ್ಕರೆ ಕಾರ್ಖಾನೆ ಖೋಡೇಸ್ ಮಾರುವ ಪ್ರಯತ್ನ ನಡೆಯುತ್ತಿದೆ. ಇದರ ಬಗ್ಗೆ ನಾವು ಯೋಚನೆ ಮಾಡಬೇಕು. ಪಣಂಬೂರಿನ ಎಂ. ಸಿ. ಎಫ್. ನಲ್ಲಿ ಕೋಟ್ಯಾಂತರ ರೂಪಾಯಿಗಳ ಲುಕ್ಸಾನು ಆದರ ಬಗ್ಗೆ ಮಾನ್ಯ ವೀರಪ್ಪ ಮೊಯಿಲಿಯವರು ಇಲ್ಲಿ ಮಾತನಾಡಿದರು. ನಿನ್ನೆ ಮೊಯಿಲಿಯವರು ಕಾರ್ಮಿಕ ಸಮಸ್ಯೆಗಳ ಬಗ್ಗೆ ಚರ್ಚೆ ಮಾಡಿದರು. ಈ ಸ್ಥಿತಿಗೆ ಕಾರಣ ಯಾರು? ಯೂನಿಯನ್ ಜನತಾ ಪಕ್ಷದ್ದೇ ಇರಬಹುದು ಅಥವಾ ಕಾಂಗ್ರೆಸ್ ಪಕ್ಷದ್ದೇ ಇರಬಹುದು. ಅಲ್ಲಿ ೭೨೫ ಜನ ರೆಗ್ಯುಲರ್ ಎಂಪ್ಲಾಯಿಸ್‌ನಲ್ಲಿ ೪೩೫ ಜನ ಇಂಟೆಕ್‌ನವರು ಮತ್ತು ಕಾಂಟ್ರಾಕ್ಟ್ ಎಂಪ್ಲಾಯೀಸ್ ಮೂರು ನೂರು ಜನ ಇದ್ದಾರೆ. ಅಲ್ಲಿ ಸರ್ಕಾರದ ಬಂಡವಾಳ ೫೧ ಪರ್ಸೆಂಟ್ ಇರುವಾಗ ತಕ್ಷಣ ಸರ್ಕಾರ ಕನ್ಸಿಲಿಯೇಷನ್‌ಗೆ ಕರೆದು ಸಮಸ್ಯೆಯನ್ನು ಬಗೆಹರಿಸುವುದಕ್ಕೆ ಪ್ರಯತ್ನ ಮಾಡಿದ್ದರೆ ಕೋಟ್ಯಾಂತರ ರೂಪಾಯಿಗಳ ಲುಕ್ಸಾನು ಎಂ. ಸಿ. ಎಫ್. ನಲ್ಲಿ ಆಗುತ್ತಿತ್ತೇ? ಲೇಬರ್ ಆಕ್ಟಿವಿಟೀಸ್‌ಗೆ ವಿರುದ್ಧವಾಗಿ ನಡೆದುಕೊಂಡ ರೀತಿ ಏನು? ಸ್ಟಾಫ್ ಇಲ್ಲದೇ ಅಲ್ಲಿ ಕೆಲಸ ಮಾಡಿಸಲಾಯಿತು. ಬಾಯ್ಲರ್ ವಿಭಾಗದಲ್ಲಿ ೭ ಜನ ತಾಂತ್ರಿಕ ವರ್ಗದವರಲ್ಲಿ ೬ ಜನ ಸ್ಟ್ರೈಕ್‌ನಲ್ಲಿ ಪಾಲ್ಗೊಂಡಿದ್ದರು. ಯೂರಿಯಾ ಪ್ಲಾಂಟ್‌ನಲ್ಲಿ ಟೆಕ್ನಿಕಲ್ ಸ್ಟ್ರೆಂತ್ ೨೪ ಇದ್ದು ಅದರಲ್ಲಿ ಒಬ್ಬರೂ ಕೆಲಸಕ್ಕೆ ಹಾಜರಾಗಿರಲಿಲ್ಲ. ಕ್ಯಾಪ್ಟೀವ್ ಪವರ್ ಪ್ಲಾಂಟ್‌ನಲ್ಲಿ ೨೪ ಜನರಲ್ಲಿ ೩ ಜನ ಕೆಲಸ ಮಾಡುತ್ತಿದ್ದರು, ಅಮೋನಿಯಂ ಪ್ಲಾಂಟ್‌ನಲ್ಲಿ ೫೬ ಜನರಲ್ಲಿ ಕೇವಲ ೫ ಜನ ಕೆಲಸ ಮಾಡುತ್ತಿದ್ದರು. ಟೆಕ್ನಿಕಲ್ ಸ್ಟಾಫ್ ಇಲ್ಲದೇ ಕಾರ್ಯ ನಿರ್ವಹಿಸಿದುದರ ಪ್ರಯುಕ್ತ ಕೋಟ್ಯಾಂತರ ರೂಪಾಯಿ ಲಾಸ್ ಆಯಿತು. ಲೇಬರ್ ಆಕ್ಟ್‌ಗೆ ವಿರುದ್ಧವಾಗಿ ಕೆಲಸ ನಡೆದಿದೆ. ನಾನು ಸಚಿವರಲ್ಲಿ ಮನವಿ ಮಾಡಿಕೊಳ್ಳುತ್ತೇನೆ. ಈ ರೀತಿ ಸಮಸ್ಯೆ ಇದ್ದಾಗ ಸರ್ಕಾರ ಮಧ್ಯೆ ಪ್ರವೇಶ ಮಾಡಿ, ಒಂದೂವರೆ ತಿಂಗಳ ಹಿಂದೆಯೇ ಧರಣಿ ಪ್ರಾರಂಭ ಮಾಡಿದಾಗಲೇ ಇದನ್ನು ಇತ್ಯರ್ಥ ಮಾಡಿದ್ದರೆ ಈಗ ಆದ ೩೫–೪೦ ಕೋಟಿ ರೂಪಾಯಿ ಲುಕ್ಸಾನು ಆಗಿದೆ ಅದನ್ನು ತಡೆಯುವುದಕ್ಕಾಗುತ್ತಾ ಇರಲಿಲ್ಲವೇ? ಇದನ್ನು ಗಂಭೀರವಾಗಿ ಯೋಚನೆ ಮಾಡಬೇಕು. ವಿರೋಧ ಪಕ್ಷದಲ್ಲಿ ಅನೇಕ ವರ್ಷಗಳ ಕಾಲ ಇದ್ದು ಬಹಳ ಅನುಭವವನ್ನು ಪಡೆದಿರತಕ್ಕಂತಹ ಮಾನ್ಯ ಮಂತ್ರಿಗಳು ಈ ಕೈಗಾರಿಕೆಗಳ ಬಗ್ಗೆ ತಮ್ಮ ಗಮನಹರಿಸಬೇಕು. ಎಂ.ಇ.ಐ. ಕಾಂಗ್ರೆಸ್ ಸರ್ಕಾರ ಇದ್ದಾಗ ಮತ್ತು ತಮ್ಮ ಸರ್ಕಾರ ಬಂದಮೇಲೆ ೧೦–೧೨ ವರ್ಷಗಳಿಂದ ಸಿಕ್ ಆಗಿದೆ. ಬಿ.ಎಚ್.ಇ.ಎಲ್. ನವರು ಇದನ್ನು ತೆಗೆದುಕೊಳ್ಳುವುದಕ್ಕೆ ಸಿದ್ಧರಿದ್ದಾರೆಂದು ಅಲ್ಲಿಯ ಜನ ಹೇಳುತ್ತಿದ್ದಾರೆ.

ಶ್ರೀ ಜೆ. ಎಚ್. ಪಟೇಲ್.—ಎಂ.ಇ.ಐ. ಈಗ ಲಾಭದಲ್ಲಿ ಇದೆ.

† ಶ್ರೀ ಬಿ. ಎಸ್. ಯಡಿಯೂರಪ್ಪ.—ಲಾಸ್‌ನಲ್ಲಿ ಇದ್ದ ರೆಂಕೋವನ್ನು ಬಿ.ಎಚ್.ಇ.ಎಲ್. ತೆಗೆದುಕೊಂಡು ನಡೆಸಲಿಲ್ಲವೇ? ಈ ರೀತಿ ಯಾವುದಾದರೂ ಲಾಸ್‌ನಲ್ಲಿ ನಡೆಯುತ್ತಿದ್ದರೆ ಅವನ್ನು ಸರಿಯಾದ ರೀತಿಯಲ್ಲಿ ಬೆಳೆಸುವುದಕ್ಕೆ ಪ್ರಯತ್ನ ಮಾಡಬೇಕು. ಹಿಂದುಳಿದ ಜಿಲ್ಲೆಗಳು ಅಭಿವೃದ್ಧಿಯಾಗಲೆಂಬ ಬಗ್ಗೆ ಅಲ್ಲಿ ಕೈಗಾರಿಕೆ ತೆರೆಯಲು ಸಬ್ಸಿಡಿ ಕೊಟ್ಟು ಪ್ರಾಮಾಣಿಕ ಪ್ರಯತ್ನ ಮಾಡುತ್ತಿದ್ದೀರಿ. ಉದಾಹರಣೆಗೆ ಬೀದರ್ ಜಿಲ್ಲೆಗೆ ಸಾಕಷ್ಟು ಸಬ್ಸಿಡಿ ಕೊಡುತ್ತಿದ್ದೀರಿ. ಅಲ್ಲಿಯ ಜನರೇ ಕೈಗಾರಿಕೆಗಳನ್ನು ಹೂಡಬೇಕು, ಅಲ್ಲಿಯ ಜನರಿಗೇ ಕೆಲಸ ಹೆಚ್ಚು ಪ್ರಮಾಣದಲ್ಲಿ ದೊರೆಯಬೇಕೆಂದು ತಾವು ಪ್ರಯತ್ನ ಮಾಡುತ್ತಿದ್ದೀರಿ. ಆದರೆ ಇವತ್ತು ಅಲ್ಲಿ ಅನೇಕ ಕಾರ್ಖಾನೆಗಳನ್ನು ಹೈದರಾಬಾದ್‌ನಿಂದ ಬಂದಿರುವವರೇ ಪ್ರಾರಂಭ ಮಾಡಿರುವುದರ ಜೊತೆಗೆ ಕಾರ್ಮಿಕರು ಹೆಚ್ಚು ಬೇಕಾಗದಂತಹ

---

† ಈ ಚಿಹ್ನೆ ಮಾನ್ಯ ಸದಸ್ಯರು ಟಿಪ್ಪಣಿ ಅಥವಾ ಭಾಷಣವನ್ನು ಪರಿಷ್ಕರಿಸಿಲ್ಲ ಎಂದು ಸೂಚಿಸುತ್ತದೆ.

ಮೀಷಿನರಿಗಳನ್ನು ಅಳವಡಿಸಿ ಹೆಚ್ಚು ಲಾಭ ಮಾಡುತ್ತಿರುವುದನ್ನು ನೋಡುತ್ತಿದ್ದೇವೆ ತಾವು ಈ ಬಗ್ಗೆ ಹೆಚ್ಚು ಗಮನ ಹರಿಸಿ ಅಲ್ಲಿಯ ಜನರೇ ಹೆಚ್ಚು ಹೆಚ್ಚು ಜನರಿಗೆ ಕೆಲಸ ಸಿಗುವಂತಹ ಕೈಗಾರಿಕೆ ಸ್ಥಾಪನೆ ಮಾಡುವ ಬಗ್ಗೆ ಹೆಚ್ಚು ಗಮನಹರಿಸಿದ್ದರೆ ತಮ್ಮ ಉದ್ದೇಶ ಸಫಲ ಆಗುತ್ತಾ ಇತ್ತು. ಕರ್ನಾಟಕ ಸಿಲ್ಕ್ ಇಂಡಸ್ಟ್ರೀಸ್ ಇದೆ. ಇದು ೧೯೮೫-೮೬ ರಲ್ಲಿ ೧೨ ಕೋಟಿ ಹಾಗೂ ೧೯೮೬-೮೭ ರಲ್ಲಿ ೧೬ ಕೋಟಿಯಂತೆ ಒಟ್ಟು ಸುಮಾರು ೩೫ ಕೋಟಿ ರೂಪಾಯಿಗಳ ಟರ್ನ್ ಓವರ್ ಮಾಡುವಂತಹ ಶಕ್ತಿಯನ್ನು ಪಡೆದಿದೆ.

೧-೩೦ ಪಿ. ಎಂ.

ಏತಕ್ಕೆ ಹೆಚ್ಚು ಟರ್ನ್‌ಓವರ್ ಮಾಡಲಿಲ್ಲವೆಂದು ಅವರನ್ನು ಪ್ರಶ್ನೆ ಮಾಡಿದರೆ ಅವರು ಏನು ಹೇಳುತ್ತಾರೆಂದರೆ ೬ ಕೋಟಿ ರೂಪಾಯಿ ಬಂಡವಾಳ ಇರುವಂತಹ ಜಾಗದಲ್ಲಿ ಈಗಿರತಕ್ಕದ್ದು ಒಂದೂವರೆ ಕೋಟಿ ರೂಪಾಯಿಗಳು ಸರ್ಕಾರ ಮೂರೂವರೆ ಕೋಟಿ ರೂಪಾಯಿಗಳನ್ನು ರೀಇಂಬರ್ಸ್‌ಮೆಂಟ್ ಮಾಡಿಲ್ಲ, ಬಂಡವಾಳ ಇಲ್ಲ. ಹೀಗಾಗಿರುವುದರಿಂದ ನಿಮ್ಮ ಅಪೇಕ್ಷೆಯ ಮಟ್ಟಕ್ಕೆ ಕೆಲಸ ಮಾಡುವುದಕ್ಕೆ ಆಗುತ್ತಿಲ್ಲವೆಂದು ಹೇಳುತ್ತಿದ್ದಾರೆ. ವಿ.ಎಸ್.ಐ.ಎಲ್‌ನಲ್ಲಿ ಕೋಟ್ಯಾಂತರ ರೂಪಾಯಿಗಳು ಲಾಸ್ ಆಗುತ್ತಾ ಇದೆ. ಭಾರತದ ಉಕ್ಕು ಪ್ರಾಧಿಕಾರದವರಿಗೆ ಇದನ್ನು ಕೊಡಬೇಕೆಂದು ಪ್ರಯತ್ನ ನಡೆಯುತ್ತಾ ಇದೆ. ಕೊಡುವುದಕ್ಕೆ ಮುಂಚೆ ತಿಂಗಳಿಗೆ ಕೋಟ್ಯಾಂತರ ರೂಪಾಯಿಗಳ ಲಾಸ್ ಆಗುವುದನ್ನು ತಡೆಯುವ ಪ್ರಯತ್ನ ಆಗಬೇಕು. ಭಾರತೀಯ ಉಕ್ಕು ಪ್ರಾಧಿಕಾರದವರು ಇದನ್ನು ತೆಗೆದುಕೊಳ್ಳುವುದಕ್ಕೆ ಮೊದಲು ಕಂಡೀಷನ್‌ಗಳನ್ನು ಹಾಕಿದ್ದಾರೆ. ಅದೇನೆಂದರೆ ಅದಕ್ಕೆ ಬೇಕಾಗಿರತಕ್ಕ ವಿದ್ಯುತ್ ಅನ್ನು ಕೊಡುವುದಾದರೆ ಅದನ್ನು ವಹಿಸಿಕೊಳ್ಳುತ್ತೇವೆಂದು ಹೇಳುತ್ತಿದ್ದಾರೆ. ನಾಳೆ ಆಗುವುದನ್ನು ಒಂದು ವರ್ಷ ಮುಂಚೆ ಮಾಡಿದರೆ ತಿಂಗಳಿಗೆ ಕೋಟ್ಯಾಂತರ ರೂಪಾಯಿಗಳ ಲಾಸ್ ಅನ್ನು ಉಳಿಸಿಕೊಳ್ಳುವುದಕ್ಕೆ ಸಾಧ್ಯವಾಗುವುದಿಲ್ಲವೇ ? ಈ ದಿಕ್ಕಿನಲ್ಲಿ ಪ್ರಾಮಾಣಿಕ ಪ್ರಯತ್ನವನ್ನು ಮಾಡಬೇಕೆಂದೂ ಬೇರೆಯವರಿಗೆ ಕೊಡತಕ್ಕದ್ದನ್ನು ಮುಂದುವರಿಸಬಾರದೆಂದೂ ಹೇಳುತ್ತೇನೆ. ವಿದ್ಯುತ್ ಕೊರತೆಯ ಬಗ್ಗೆ ನಾನು ಹಿಂದೆಯೇ ಪ್ರಸ್ತಾಪ ಮಾಡಿದ್ದೇನೆ. ಕೆಲವು ಉದಾಹರಣೆಗಳನ್ನು ಸಹ ಕೊಟ್ಟು ಕಾರ್ಮಿಕರಿಗೆ ಆಗುತ್ತಿರುವ ಅನ್ಯಾಯದ ಬಗ್ಗೆ ಪ್ರಸ್ತಾಪ ಮಾಡಲಾಗಿದೆ. ಬೆಳಗಾರನಲ್ಲಿರತಕ್ಕ ಇಂಡಾಲ್ ಕಾರ್ಖಾನೆಯ ಬಗ್ಗೆ ಪ್ರಸ್ತಾಪ ಮಾಡಿದ್ದೇನೆ. ಇಡೀ ರಾಜ್ಯದಲ್ಲಿ ಕೈಗಾರಿಕೆಗಳಿಗೆ ಏನು ವಿದ್ಯುತ್ ಅನ್ನು ಕೊಡುತ್ತೀರೋ ಅದರ ಅರ್ಧದಷ್ಟು ವಿದ್ಯುತ್ ಅನ್ನು ಅವರೊಬ್ಬರಿಗೆ ಅರ್ಧ ಬೆಲೆಯಲ್ಲಿ ಕೊಡಲಾಗುತ್ತಿದೆ. ಆ ಕಾರ್ಖಾನೆಯಲ್ಲಿ ಕೆಲಸ ಮಾಡತಕ್ಕ ಕಾರ್ಮಿಕರ ಸಂಖ್ಯೆ ಕೇವಲ ೮೦೦ ಅಥವಾ ೧೦೦೦ ಇರಬಹುದು. ೧೨೦ ಮೆಗಾವಾಟ್ ವಿದ್ಯುತ್ ಅನ್ನು ಅಲ್ಲಿಗೆ ಕೊಡಲಾಗುತ್ತಿದೆ. ಅಲ್ಲಿ ಕೆಲಸ ಮಾಡತಕ್ಕ ಕಾರ್ಮಿಕರ ಸಂಖ್ಯೆ ಕೇವಲ ೮೦೦-೧೦೦೦ ಮಾತ್ರ ವಿ. ಎಸ್. ಐ. ಎಲ್ ನಲ್ಲಿ ೮-೯ ಸಾವಿರ ಜನ ಕಾರ್ಮಿಕರು ಕೆಲಸ ಮಾಡುತ್ತಿದ್ದಾರೆ ಅಲ್ಲಿಗೆ ವಿದ್ಯುತ್ ಕೊರತೆ ಪ್ರೈವೇಟ್‌ನವರಿಗೆ ಸಾಕಷ್ಟು ವಿದ್ಯುತ್ ಕೊಡುತ್ತಿದ್ದೀರಿ. ಹಿಂದೆ ಈ ಬಗ್ಗೆ ಪ್ರಸ್ತಾಪ ಮಾಡಿದ್ದರೂ ಕೂಡ ಅಲ್ಲಿಗೆ ಲೀಲಾಜಾಲವಾಗಿ ವಿದ್ಯುಚ್ಛಕ್ತಿ ಸರಬರಾಜು ಮಾಡುತ್ತಿದ್ದಾರೆ. ಈ ಸರ್ಕಾರದ ನಿಲುವು ಏನು ? ಕೆಲಸ ಮಾಡುವುದಕ್ಕೆ ಆಗುವುದಿಲ್ಲವೇ ? ಈಗ ಕಾರ್ಮಿಕರ ಬಗ್ಗೆ ಚರ್ಚೆಯಾಗುತ್ತಾ ಇದೆ. ಈ ಸರ್ಕಾರ ಅಧಿಕಾರಕ್ಕೆ ಬಂದ ಮೇಲೆ ಖೋಡೆಸ್‌ನವರಿಗೆ ನೀವು ನಿಮ್ಮ ಅಸ್ತಿತ್ವವನ್ನು ಕಳೆದುಕೊಂಡು ಅವರಿಗೆ ಶರಣಾಗಿದ್ದೀರಿ. ಒಂದು ಸತ್ಯಸಂಗತಿಯನ್ನು ಹೇಳುವುದಕ್ಕೆ ಇಚ್ಛೆಪಡುತ್ತೇನೆ. ಖೋಡೆಸ್ ಡಿಸ್ಟಿಲರೀಸ್‌ನವರು ಅಲ್ಲಿರತಕ್ಕ ಕಾರ್ಮಿಕರಿಗೆ ಬಹಳ ಅನ್ಯಾಯ ಮಾಡುತ್ತಿದ್ದಾರೆ. ಕಾನೂನಿನ ಪ್ರಕಾರ ಅಲ್ಲಿ ಯಾರು ಕೆಲಸ ಮಾಡುತ್ತಾರೆ ಅಂತವರಿಗೆ ಪಿ. ಎಫ್. ಕೊಡಬೇಕು. ೬ ತಿಂಗಳು ಯಾರು ಕೆಲಸ ಮಾಡಿರುತ್ತಾರೆ ಅಂತಹವರಿಗೆ ಪಿ.ಎಫ್. ಸಿಗುತ್ತದೆನ್ನುವ ಕಾನೂನು ಇತ್ತು. ತಾವು ಬಂದ ಮೇಲೆ ೧೨೦ ದಿವಸ ಯಾರು ಕೆಲಸ ಮಾಡಿರುತ್ತಾರೆ ಅಂತಹವರಿಗೆ ಪಿ.ಎಫ್. ಕೊಡಬೇಕೆಂದು ಮಾಡಿದ್ದೀರಿ. ಒಂದು ಒಳ್ಳೆಯ ಕೆಲಸವನ್ನು ಮಾಡಿದ್ದೀರಿ. ಅಲ್ಲಿ ೭೦೦-೮೦೦ ಜನ ಕಾರ್ಮಿಕರು ಕೆಲಸ ಮಾಡುತ್ತಿದ್ದಾರೆ. ಅಲ್ಲಿ ಈ ಕಾನೂನು ಜಾರಿಗೆ ಬಂದ ಮೇಲೆ ೧೨೦ ದಿವಸ ಕೆಲಸ ಮಾಡಿದವರಿಗೆ ಪಿ.ಎಫ್. ಕೊಡಬೇಕೆಂದು ಹೇಳಿದಾಗ, ಅಲ್ಲಿರತಕ್ಕವರು ಅವರಾಗಿಯೇ ಕೆಲಸ ಬಿಟ್ಟು ಹೋಗುತ್ತಿದ್ದಾರೆ. ಕಾರಣ ಏನೆಂದರೆ ಅವರು ಯಾರನ್ನೂ ೩ ತಿಂಗಳವರೆಗೆ ಕೆಲಸದಲ್ಲಿ ಇಟ್ಟುಕೊಳ್ಳುವುದಿಲ್ಲ. ಎರಡು ತಿಂಗಳು ಎರಡೂವರೆ ತಿಂಗಳು ತೆಗೆದುಕೊಂಡು ೩ ತಿಂಗಳಿಗೆ ಒಂದೆರಡು ದಿವಸ ಇರುವಾಗಲೇ ತೆಗೆದುಹಾಕಿ ಪುನಃ ಅಪಾಯಿಂಟ್‌ಮೆಂಟ್ ಮಾಡಿಕೊಳ್ಳುತ್ತಿದ್ದಾರೆ, ಅವರ ಮೇಲೆ ಲೇಬರ್ ಡಿಪಾರ್ಟ್‌ಮೆಂಟ್‌ನವರ ಯಾವುದೇ ಕಂಟ್ರೋಲ್ ಇಲ್ಲ. ಕೆಲಸ ಮಾಡತಕ್ಕ ಕಾರ್ಮಿಕರಿಗೆ ಯಾವುದೇ ಸೌಲಭ್ಯಗಳು ಸಿಗುತ್ತಿಲ್ಲ. ಇ.ಎಸ್.ಐ. ಕವರ್ ಆಗಿಲ್ಲ. ಈ ತರಹ ವ್ಯವಸ್ಥಿತವಾದ ದೊಡ್ಡ ದೊಡ್ಡ ಮಾಲೀಕರು ಕಾರ್ಮಿಕರಿಗೆ ಅನ್ಯಾಯ ಮಾಡುತ್ತಿದ್ದಾರೆ. ಸರ್ಕಾರದವರು ಇದರ ಬಗ್ಗೆ ಕಣ್ಣು ಮುಚ್ಚಿಕೊಂಡು ಕುಳಿತುಕೊಂಡಿದ್ದಾರೆ. ಅವರನ್ನು ಕಂಟ್ರೋಲ್‌ನಲ್ಲಿಟ್ಟುಕೊಳ್ಳುವುದಕ್ಕೆ ಸಾಧ್ಯ

ವಿಲ್ಲವೆ ? ಅದನ್ನು ಸರಿಮಾಡಬೇಕೆಂದು ವಿನಂತಿ ಮಾಡಿಕೊಳ್ಳುತ್ತೇನೆ. ಕೊನೆಯದಾಗಿ ಹೇಳುವುದಾದರೆ ಎನ್.ಜಿ.ಇ.ಎಫ್‌ನ ಬಗ್ಗೆ ದೂರದರ್ಶನದಲ್ಲಿ ಪ್ರಚಾರ ಮಾಡಲಾಯಿತು. ೧೯೮೬–೮೭ನೇ ಸಾಲಿನಲ್ಲಿ ೪ ಕೋಟಿ ೧೮ ಲಕ್ಷ ಲಾಭವಾಯಿತು ಎಂದು ಘೋಷಣೆಯನ್ನು ಅವರು ಮಾಡಿದ್ದಾರೆ. ಗ್ರಾಸ್ ಸೇಲ್ ೧೧೦ ಕೋಟಿ ರೂಪಾಯಿಗಳು ನಾನು ತಮ್ಮನ್ನು ಕೇಳುವುದೇನೆಂದರೆ ೧೯೭೬–೭೭, ೧೯೭೭–೭೮, ೧೯೭೮–೭೯ನೇ ಸಾಲಿನಲ್ಲಿ ಲಾಭವಾಗಿ ಅಲ್ಲಿರತಕ್ಕ ನೌಕರರುಗಳಿಗೆ ಶೇಕಡ ೨೦ರಷ್ಟು ಬೋನಸ್ ಕೊಡುತ್ತಿದ್ದರು, ತಾವು ಇದರ ಬಗ್ಗೆ ಅಂಕಿ ಅಂಶಗಳನ್ನು ನೋಡಿದಾಗ ತಮಗೆ ಆಶ್ಚರ್ಯ ಆಗಬಹುದು. ಎನ್.ಜಿ.ಇ.ಎಫ್‌ನಲ್ಲಿ ೧೯೭೬–೭೭ರಲ್ಲಿ ೩೯ ಕೋಟಿ ೯೬ ಲಕ್ಷ ರೂಪಾಯಿಗಳು ಉತ್ಪಾದನೆಯಾಗಿ ೪ ಕೋಟಿ ೪೮ ಲಕ್ಷ ರೂಪಾಯಿ ಲಾಭ ಆಗಿದೆ ಅವತ್ತು ಬೋನಸ್ ಶೇಕಡಾ ೨೦ರಷ್ಟು ಕೊಟ್ಟರೆ ೧೯೭೭-೭೮ರಲ್ಲಿ ೩ ಕೋಟಿ ೫೪ ಲಕ್ಷ ಲಾಭವಾದರೆ ಶೇಕಡ ೨೦ ಬೋನಸ ಕೊಟ್ಟರೆ ೧೯೭೮–೭೯ರಲ್ಲಿ ೨ ಕೋಟಿ ೧೬ ಲಕ್ಷ ಲಾಭವಾದರೆ ಶೇಕಡ ೨೦ ಬೋನಸ್ ಕೊಟ್ಟಿರುವುದು? ಈ ಎರಡೂವರೆ ವರ್ಷಗಳಲ್ಲಿ ಟರ್ನ್‌ಓವರ್, ವ್ಯಾಪಾರ ಎಷ್ಟು ಮಾಡಿದರು ಎಂದರೆ ೭೬–೭೭ರಲ್ಲಿ ೫೩ ಕೋಟಿ, ೭೭–೭೮ರಲ್ಲಿ ೩೪ಕೋಟಿ. ೭೮–೭೯ರಲ್ಲಿ ೩೦ ಕೋಟಿ. ಈ ರೀತಿಯಾಗಿ ವ್ಯಾಪಾರ ಮಾಡತಕ್ಕಂಥ ಸಂದರ್ಭದಲ್ಲಿ ೨೦ ಪರ್ಸೆಂಟ್ ಬೋನಸ್ ಕೊಟ್ಟಿರುವುದಾದರೆ ೮೬–೮೭ರಲ್ಲಿ ತಾವು ೧೧೦ ಕೋಟಿ ವ್ಯವಹಾರ ಮಾಡಿ. ಲಾಭ ೪ ಕೋಟಿ ೧೮ ಲಕ್ಷ ಇದ್ದರೆ ಬೋನಸ್ ಕೊಟ್ಟಿರುವುದು ಶೇಕಡ ೮.೫ ರಷ್ಟು. ನಾನು ಇಲ್ಲಿ ಕೇಳುವಂಥಾದ್ದು ೫೩ ಕೋಟಿ ರೂಪಾಯಿಗಳ ವ್ಯಾಪಾರ ಆದಾಗ ೨೦ ಪರ್ಸೆಂಟ್‌ನಷ್ಟು ಬೋನಸ್ ಅನ್ನು ಕೊಟ್ಟಿರುವಾಗ, ೧೧೦ ಕೋಟಿ ವ್ಯವಹಾರ ಮಾಡಿದಂಥ ಸಂದರ್ಭದಲ್ಲಿ ಅಲ್ಲಿಯ ಕಾರ್ಮಿಕರಿಗೆ ೮.೫ ಪರ್ಸೆಂಟ್‌ನಷ್ಟು ಬೋನಸ್ ಕೊಡುವುದಾದರೆ ಅಲ್ಲಿಯ ಕಾರ್ಮಿಕರು ಉತ್ಪಾದನೆ ಬಗ್ಗೆ ಆಸಕ್ತಿ ವಹಿಸುತ್ತಾರೆಯೆ ? ಮೇಲ್ನೋಟಕ್ಕೆ ಪ್ರಚಾರ ಪಡೆಯುವ ಪ್ರಯತ್ನ ಮಾಡಿದರೂ ಕೂಡ ಅಲ್ಲಿ ಅವ್ಯವಹಾರ ನಡೆಯುತ್ತಿದೆ ಎಂಬುದು ಎಲ್ಲರಿಗೂ ಗೊತ್ತಿರುವಂಥ ಸಂಗತಿ ಎನ್.ಜಿ.ಇ.ಎಫ್.ನ ಕಾರ್ಮಿಕ ಸಂಯುಕ್ತ ರಂಗದವರು ಸರ್ಕಾರಕ್ಕೆ ಒಂದು ಮನವಿಯನ್ನು ಕೊಟ್ಟಿದ್ದಾರೆ. ನಾನು ಈ ಸಂದರ್ಭದಲ್ಲಿ ವಿನಂತಿ ಮಾಡಿಕೊಳ್ಳುವುದೇನೆಂದರೆ ಸಾವಿರಾರು ಜನ ಈ ರೀತಿಯಾಗಿ ಲಿಖಿತ ಮೂಲಕ ಎಲ್ಲಾ ಶಾಸಕರಿಗೆ ಸರ್ಕಾರಕ್ಕೆ ಒತ್ತಾಯ ತಂದು ಇಲ್ಲಿ ಅವ್ಯವಹಾರ ನಡೆಯುತ್ತಿದೆ, ಇದರ ಬಗ್ಗೆ ತನಿಖೆ ಆಗಬೇಕು. ಇಲ್ಲದೇ ಹೋದರೆ ಈ ಫ್ಯಾಕ್ಟರಿ ಉಳಿಯುವುದಿಲ್ಲ, ಇದೂ ಕೂಡ ಮತ್ತೊಂದು ವಿಶ್ವೇಶ್ವರಯ್ಯ ಕಾರ್ಖಾನೆಯಂತೆ ಆಗಬಾರದು ಎಂದು ಹೇಳುವಂಥ ಸಂದರ್ಭದಲ್ಲಿ ಅವರನ್ನು ರಕ್ಷಣೆ ಮಾಡತಕ್ಕಂಥ ಪ್ರಯತ್ನ ಏಕೆ ಮಾಡುತ್ತಿಲ್ಲ ಎಂದು ನನಗೆ ಅರ್ಥವಾಗುವುದಿಲ್ಲ. ಜನತಾಪಕ್ಷಕ್ಕೆ ಸೇರಿದ ೧೮ ಮಂದಿ ಶಾಸಕರು ಕೂಡ ಇದರ ಬಗ್ಗೆ ಮನವಿಯನ್ನು ಕೊಟ್ಟು ತನಿಖೆ ಆಗಬೇಕೆಂದು ಹೇಳಿದ್ದಾರೆ. ಆದರೂ ಕೂಡ ತನಿಖೆ ಮಾಡದೇ ಇರುವುದಕ್ಕೆ ಕಾರಣ ಏನು ಎಂದು ನನಗೆ ಅರ್ಥವಾಗುತ್ತಿಲ್ಲ. ಇದೇ ರೀತಿ ತಾವು ಅಧಿಕಾರಕ್ಕೆ ಬಂದಮೇಲೆ ಬೇರೆ ಬೇರೆ ಸರ್ಕಾರಿ ಸ್ವಾಮ್ಯದಲ್ಲಿರುವ ೫೩ ಜನ ಎಂ. ಡಿ. ಗಳನ್ನು ಬದಲಾಯಿಸಿದಿರಿ. ಆದರೆ ಅಲ್ಲಿರುವಂಥ ಎಂ.ಡಿ. ಮೇಲೆ ಆರೋಪಗಳು ಇದ್ದಂಥ ಸಂದರ್ಭದಲ್ಲೂ ಕೂಡ, ಲಿಖಿತ ಮೂಲಕ ಕಾರ್ಮಿಕ ಸಂಘದವರು ಸ್ವಜನಪಕ್ಷಪಾತದಿಂದ ಹಿಡಿದು ಅನೇಕ ಆರೋಪಗಳನ್ನು ಮಾಡಿರುವಂಥ ಸಂದರ್ಭದಲ್ಲಿ ಇವತ್ತಿನವರೆಗೂ ಸಹ ಅವರನ್ನು ಉಳಿಸಿಕೊಳುವಂಥ ಪ್ರಯತ್ನ ಏಕೆ ಮಾಡುತ್ತಿದ್ದಾರೆ ಎಂಬುದು ನನಗೆ ಅರ್ಥವಾಗದ ಸಂಗತಿಯಾಗಿದೆ. ಆದ್ದರಿಂದ ಇವತ್ತು ನಿಮ್ಮ ಸರ್ಕಾರ ಆಡಳಿತಕ್ಕೆ ಬಂದಮೇಲೆ ಕಾರ್ಖಾನೆಗಳನ್ನು ಉಳಿಸುವಂಥ ಪ್ರಾಮಾಣಿಕ ಪ್ರಯತ್ನ ಮಾಡಿಲ್ಲ, ಈ ರಾಜ್ಯದಲ್ಲಿ ಕೆಲಸ ಮಾಡತಕ್ಕಂಥ ಕಾರ್ಮಿಕರಿಗೆ ಸರಿಯಾದ ರಕ್ಷಣೆ ಸಿಕ್ಕಿಲ್ಲ. ಅವರಿಗೆ ಸರಿಯಾದ ಸವಲತ್ತುಗಳನ್ನು ಒದಗಿಸತಕ್ಕಂಥ ಪ್ರಯತ್ನ ಮಾಡಿಲ್ಲ. ಅದರ ಬದಲಾಗಿ ಒಂದೊಂದಾಗಿ ನಿಮ್ಮ ಅಧಿಕಾರಿಗಳು ಏನು ಈ ಥಿಂಕ್‌ಟ್ಯಾಂಕ್ ಮೂಲಕ ತಜ್ಞರ ಅಭಿಪ್ರಾಯ ಪಡೆದು ಒಳ್ಳೆಯ ಇಂಡಸ್ಟ್ರಿಗಳು ಸಿಕ್ ಇಂಡಸ್ಟ್ರಿಗಳಾಗಿವೆ ಎಂದು ಹೇಳಿ ಟಾಟಾ ಬಿರ್ಲಾರಿಗೆ ಮಾರುವಂಥ ಹೊಸ ತಂತ್ರವನ್ನು ಅಧಿಕಾರಿಗಳು ಮಾಡುತ್ತಿದ್ದಾರೆ ಎನ್ನುವ ಅನುಮಾನ ನನಗೆ ಇದೆ. ರಾಜ್ಯದಲ್ಲಿ ಭೀಕರ ಬರಗಾಲವಿದ್ದು ಹಣಕಾಸಿನ ತೊಂದರೆ ಇರತಕ್ಕಂಥ ಪರಿಸ್ಥಿತಿಯಲ್ಲಿ ಸರ್ಕಾರದ ಸ್ವಾಮ್ಯಕ್ಕೆ ಒಳಪಟ್ಟಂಥ, ಕೋಟ್ಯಂತರ ರೂಪಾಯಿಗಳನ್ನು ಪ್ರತಿವರ್ಷ ಲಾಭ ಮಾಡುವಂಥ ಕಾರ್ಖಾನೆಗಳಲ್ಲಿ ನಷ್ಟವಾಗುತ್ತಿದೆ ಎಂದರೆ ಇದರಿಂದ ಈ ರಾಜ್ಯದ ಹಿತ ಕಾಪಾಡುವುದಕ್ಕೆ ಸಾಧ್ಯವಿಲ್ಲ. ಈ ರಾಜ್ಯದ ರೈತರು ಕಣ್ಣೀರಲ್ಲಿ ಕೈತೊಳೆದು ಸಂಕಟಪಡುತ್ತಿರುವ ಸಂಧರ್ಭದಲ್ಲಿ, ಕಾರ್ಮಿಕರು ಕಣ್ಣೀರು ಹಾಕತಕ್ಕಂಥ ಸಂದರ್ಭದಲ್ಲಿ ಇವರು ಅಧಿಕಾರಕ್ಕೆ ಬಂದು ನಾಲ್ಕು ವರ್ಷಗಳಾಗಿದೆ. ನ್ಯೂನತೆಗಳನ್ನು ಹೇಗೆ ಸರಿಮಾಡಬೇಕೆಂಬ ಪ್ರಯತ್ನ ಮಾಡದೆ, ಹೇಳುವವರು ಕೇಳುವವರು ಇಲ್ಲದೆ ಇರುವಂಥ ಅಧಿಕಾರಿಗಳು ಈ ಇಂಡಸ್ಟ್ರಿಗಳ ಉಪಯೋಗ ಮಾಡಿಕೊಳ್ಳುತ್ತಿದ್ದಾರೆ. ಹೆಚ್ಚಿನ ವಿವರಕ್ಕೆ ನಾನು ಹೋಗುವುದಿಲ್ಲ, ಅದರ ಅಗತ್ಯವೂ ಇಲ್ಲ. ಆದರೆ ನಾನು ಮಾನ್ಯ ಜೆ. ಹೆಚ್. ಪಟೇಲರನ್ನು ವಿನಂತಿ ಮಾಡಿಕೊಳ್ಳುತ್ತೇನೆ, ಏನೆಂದರೆ ದಯಮಾಡಿ ಈ ಇಂಡಸ್ಟ್ರಿ

ಗಳಿಗೆ ಭೇಟಿ ಕೊಟ್ಟು, ಕಾರ್ಮಿಕ ಮಂತ್ರಿಗಳನ್ನು ಜೊತೆಯಲ್ಲಿ ಕರೆದುಕೊಂಡು ಹೋಗಿ ಏತಕ್ಕೋಸ್ಕರ ಅಲ್ಲಿ ಲಾಸ್ ಆಗುತ್ತಿದೆ. ಇದರ ಹಿನ್ನೆಲೆ ಏನು ಎಂಬುದನ್ನು ಪತ್ತೆಹಚ್ಚಿ ಇನ್ನು ಮುಂದಾದರೂ ಇವುಗಳು ಲಾಭದಾಯಕವಾಗಿ ನಡೆಯುವಂತೆ ಪ್ರಯತ್ನ ಮಾಡಬೇಕು. ನಿಮ್ಮ ಸರ್ಕಾರದ ನೀತಿ ಏನಿದೆ ಎಂಬುದನ್ನು ಸ್ಪಷ್ಟಪಡಿಸಿ. ಏಕೆಂದರೆ ಮುಖ್ಯ ಮಂತ್ರಿಗಳು ಹೇಳಿದರು ಸಿಕ್ ಇಂಡಸ್ಟ್ರಿಗಳನ್ನು ತಲೆ ಮೇಲೆ ಹೊತ್ತುಕೊಂಡು ಭಾರ ಹೊರುವುದಕ್ಕೆ ಸಾಧ್ಯವಿಲ್ಲವೆಂದು ನಾನು ತಮ್ಮ ಮೂಲಕ ಮಾನ್ಯ ಮಂತ್ರಿಗಳನ್ನು ಕಳಕಳಿಯಿಂದ ಕೇಳಿಕೊಳ್ಳುವುದಕ್ಕೆ ಇಷ್ಟಪಡುತ್ತೇನೆ ಏನೆಂದರೆ, ಬೇರೆ ರಾಜ್ಯದಿಂದ ಬಂದಿರುವಂಥ ಯಾವನೋ ಒಬ್ಬ ಕಾರ್ಖಾನೆಯ ಮಾಲೀಕ ಅಥವಾ ಇಲ್ಲಿರುವಂಥ ಟಾಟಾ, ಬಿರ್ಲಾ ಅಥವಾ ಖೊಡೇಸ್ ಅಂಥವರು ಇದನ್ನು ತೆಗೆದುಕೊಂಡು ಕೋಟ್ಯಾಂತರ ರೂಪಾಯಿಗಳು ಲಾಭಕ್ಕೆ ನಡೆಸುವುದಕ್ಕೆ ಅವರು ಸಿದ್ಧರಿದ್ದರೆ, ನಿಮ್ಮ ಸರ್ಕಾರ ಬಂಡವಾಳ ಹೂಡಿ ಬುದ್ಧಿವಂತ ಅಧಿಕಾರಿಗಳನ್ನು ಉಪಯೋಗ ಮಾಡಿಕೊಂಡು ನಡೆಸುವುದಕ್ಕೆ ಆಗುವುದಿಲ್ಲ ಎಂದರೆ ನಿಜವಾಗಿಯೂ ಇದು ನಾಚಿಕೆಗೇಡಿನ ಸಂಗತಿ.

ಇದರ ಬಗ್ಗೆ ಸರಿಯಾಗಿ ಗಮನಹರಿಸಿ, ಪ್ರಾಮಾಣಿಕ ಪ್ರಯತ್ನ ಮಾಡಿದರೆ, ಈ ಇಂಡಸ್ಟ್ರಿಗಳನ್ನು ಲಾಭದಾಯಕವಾಗಿ ಮಾಡಬಹುದು. ಈಗ ನಮ್ಮ ಸಿಕ್ ಇಂಡಸ್ಟ್ರೀಸ್‌ಗಳಿಂದ ೫೦ ಕೋಟಿ ರೂಪಾಯಿಗಳು ಲಾಸ್ ಆಗುತ್ತಿದೆ. ಇವುಗಳನ್ನು ಹೀಗೆಯೇ ಬಿಟ್ಟರೆ ಮುಂದೆ ೧೫೦-೨೦೦ ಕೋಟಿ ರೂಪಾಯಿಗಳು ನಷ್ಟ ಆಗಬಹುದು. ಆದುದರಿಂದ ತಾವು ತಕ್ಷಣ ಸರಿಯಾದ ಕ್ರಮ ತೆಗೆದುಕೊಳ್ಳಬೇಕು.

ಮಂಗಳೂರು ಗೊಬ್ಬರದ ಕಾರ್ಖಾನೆಯಲ್ಲೂ ಅನ್ಯಾಯವಾಯಿತು, ಅಲ್ಲಿನ ಕಾರ್ಮಿಕರು ಈಗ್ಗೆ ಎರಡೂವರೆ ತಿಂಗಳಿಂದ ಸತ್ಯಾಗ್ರಹ ಮುಗಿಸಿ, ಅಮರಣಾಂತ ಮುಷ್ಕರ ಮಾಡುತ್ತಿರುವ ಬಗ್ಗೆ ಸರ್ಕಾರದವರು ಕಾರ್ಮಿಕರ ಹಿತದೃಷ್ಟಿಯಿಂದ, ಪರಿಹಾರ ಹುಡುಕುತ್ತೇವೆಂಬ ಮಾತನ್ನು ಹೇಳಿ, ಪ್ರಾಮಾಣಿಕ ಪ್ರಯತ್ನ ಮಾಡಿದ್ದರೆ, ಈಗ್ಗೆ ಎರಡೂವರೆ ತಿಂಗಳಿಂದ ಆಗುತ್ತಿರುವ ನಷ್ಟವನ್ನು ನಿಲ್ಲಿಸಬಹುದಿತ್ತು. ಏತಕ್ಕೆ ಸರ್ಕಾರ ಇದರ ಬಗ್ಗೆ ಗಮನಹರಿಸಲಿಲ್ಲವೋ ? ಈ ರಾಜ್ಯದ ಜನತೆಗೆ ಇದರಿಂದ ಅನ್ಯಾಯ ಆಗಿಲ್ಲವೇ. ಯಾವುದೇ ಒಂದು ಪಕ್ಷಕ್ಕ ಸೇರಿದವರ ಕೈಯಲ್ಲಿ ಇರತಕ್ಕ ಇಂಡಸ್ಟ್ರೀಸ್‌ಗಳಾದರೂ ಇವುಗಳ ಬಗ್ಗೆ ಸರ್ಕಾರ ನಿಗಾ ಕೊಡಬೇಕು. ಇಲ್ಲದೇ ಹೋದರೆ, ಇವು ಬೇರೆಯವರ ಕೈಗೆ ಹೋಗುತ್ತವೆ. ಅಲ್ಲಿ ಕಾರ್ಮಿಕರಿಗೆ ತೊಂದರೆ ಕೊಟ್ಟಿದ್ದುದು ಸರಿಯಾದ ನೀತಿ ಅಲ್ಲ. ಮುಂದೆ ಆದರೂ ಇಂತಹ ನೀತಿಯನ್ನು ಅನುಸರಿಸದೆ, ಕಾರ್ಮಿಕರ ಹಿತಕ್ಕೋಸ್ಕರ ಸರ್ಕಾರ ಕೆಲಸ ಮಾಡುತ್ತದೆ ಎಂದು ಹೇಳುತ್ತಾ, ಈ ಸಂದರ್ಭದಲ್ಲಿ ನನ್ನ ಎರಡು ಅಭಿಪ್ರಾಯಗಳನ್ನು ಹೇಳುವುದಕ್ಕೆ ಅವಕಾಶ ಮಾಡಿಕೊಟ್ಟ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಯು. ಭೂಪತಿ.—ಮಾನ್ಯ ಅಧ್ಯಕ್ಷರೇ, ನಮ್ಮ ರಾಜ್ಯದಲ್ಲಿ ಇವತ್ತು ಕೈಗಾರಿಕಾ ಕ್ಷೇತ್ರದಲ್ಲಿ ಅದರಲ್ಲೂ ಮುಖ್ಯವಾಗಿ ಹತ್ತಿ ಗಿರಣಿಗಳು, ಭಾರಿ ಪ್ರಮಾಣದ ಸರ್ಕಾರಿ ಕೈಗಾರಿಕೆಗಳು, ಜಂಟಿ ಕ್ಷೇತ್ರದ ಕೈಗಾರಿಕೆಗಳು ಮತ್ತು ಇತರೆ ಕೈಗಾರಿಕೆಗಳಲ್ಲಿ ಉದ್ಭವವಾಗಿರತಕ್ಕಂಥ ಬಿಕ್ಕಟ್ಟು. ಸರ್ಕಾರದ ಅದಕ್ಷತೆ ಮತ್ತು ವೈಫಲ್ಯತೆಯಿಂದ ಉದ್ಭವಾಗಿದೆ ಎನ್ನುವ ಒಂದು ವಿಷಯದ ಬಗ್ಗೆ ಚರ್ಚೆಯನ್ನು ನಾವು ನಿನ್ನೆಯಿಂದ ಪ್ರಾರಂಭಿಸಿದ್ದೇವೆ. ಈಗ ಸರ್ಕಾರದ ಕೈಗಾರಿಕಾ ನೀತಿಯನ್ನು, ಈ ವರ್ಷದ ಕೈಗಾರಿಕೆ ಮತ್ತು ವಾಣಿಜ್ಯ ಇಲಾಖೆಯ ವಾರ್ಷಿಕ ವರದಿಯಲ್ಲಿ ಹೇಳಿದ್ದಾರೆ.

"The programmes for the industrial development are based on the industrial policy resolution of the State announced in 1983."

ಎನ್ನುವ ಮಾತನ್ನು ಹೇಳಿದ್ದಾರೆ. ಸ್ವಾಮಿ, ಈ ಸರ್ಕಾರ ೧೯೮೩ರಲ್ಲಿ ಅಸ್ತಿತ್ವಕ್ಕೆ ಬಂದಮೇಲೆ ಅಧಿಕಾರಕ್ಕೆ ಬಂದಮೇಲೆ ಇವರು ಕೊಟ್ಟಂಥ ಕಾರ್ಯಕ್ರಮಗಳಲ್ಲಿ, ಮುಖ್ಯವಾಗಿ ಗುಡಿ ಕೈಗಾರಿಕೆಗಳಿಗೆ ನಾವು ಪ್ರಾತಿನಿಧ್ಯವನ್ನು ಕೊಡುತ್ತೇವೆ. ಅದರಲ್ಲೂ ಮುಖ್ಯವಾಗಿ ಕೈಮಗ್ಗದ ಕೈಗಾರಿಕೆಗಳು ಅಭಿವೃದ್ಧಿ, ಮೊದಲಾದ ಆಶ್ವಾಸನೆಗಳನ್ನು ಕೊಟ್ಟಿದ್ದಾರೆ. ಇದರಲ್ಲಿ ಹ್ಯಾಂಡ್‌ಲೂಮ್ ಡೆವಲಪ್‌ಮೆಂಟ್ ಬಗ್ಗೆ ಒಂದು ಮಾತನ್ನು ಹೇಳಿದ್ದಾರೆ

"Handloom industries in Karnataka occupies a place of prestige and prominence by providing employment to nearly half a million people in the State."

ಆದರೆ ಇವತ್ತು ಏನಾಗಿದೆ ಪರಿಸ್ಥಿತಿ. ಸರ್ಕಾರ ಕೊಟ್ಟಂಥ ಘೋಷಣೆಗಳಲ್ಲಿ, ಕಾರ್ಯಕ್ರಮಗಳ ನೀತಿಯಲ್ಲಿ ವ್ಯತ್ಯಾಸವನ್ನು ನಾವು ಕಾಣುತ್ತಿದ್ದೇವೆ. ನಿನ್ನೆ ತಾನೆ ಸಣ್ಣಪ್ರಮಾಣದ ಕೈಗಾರಿಕೆಗಳ ಮಂತ್ರಿಗಳು ಉತ್ತರ ಕೊಟ್ಟಿದ್ದಾರೆ. ಈ ಮನೆಯ ಸದಸ್ಯರಾದ ಮಾನ್ಯ ದೊಡ್ಡಮೇಟಿಯವರ ಪ್ರಶ್ನೆಗೆ ಉತ್ತರ ಕೊಡುತ್ತಾ, ಕೈಮಗ್ಗಗಳಿಗೆ ನೂಲನ್ನು ಸರಬರಾಜು ಮಾಡುವಿಕೆ ನಿಗಮಗಳಿಂದ ಆಗುತ್ತಾ ಇಲ್ಲ ಎನ್ನುವ ಮಾತನ್ನು ಹೇಳಿ, ಇದರಿಂದ ಮೂರು ಲಕ್ಷಕ್ಕೂ ಹೆಚ್ಚು ಕಾರ್ಮಿಕರಿಗೆ ಕೈಮಗ್ಗದ ಕೈಗಾರಿಕೆಯಲ್ಲಿ ಜೀವನ ಮಾಡುವುದಕ್ಕೆ ತೊಂದರೆಯಾಗಿದೆ ಎನ್ನುವ ಮಾತನ್ನು ಹೇಳಿದ್ದಾರೆ. ಅಷ್ಟೇ ಅಲ್ಲದೆ, ಕೆಲವು ದಿವಸಗಳ ಹಿಂದೆ ಅದೇ ಮಂತ್ರಿಗಳು, ೧೯೮೩ರಲ್ಲಿ ಈ ಸರ್ಕಾರ ಅಧಿಕಾರಕ್ಕೆ ಬಂದಮೇಲೆ ಒಂದು ತಿಂಗಳಿಗೆ ಒಂದು ಸಾವಿರ ಕೈಗಾರಿಕೆಗಳನ್ನು ಪ್ರಾರಂಭ ಮಾಡುತ್ತೇವೆ ಎನ್ನುವ ಮಾತನ್ನು ಹೇಳಿದ್ದರು. ನಿಮ್ಮ ಈ ಕೈಗಾರಿಕಾ ನೀತಿ ಇಂದು ಸಂಪೂರ್ಣವಾಗಿ ವಿಫಲವಾಗಿದೆ ಎನ್ನುವುದನ್ನು ಮಂತ್ರಿಗಳೇ ಒಪ್ಪಿಕೊಂಡ ಮೇಲೆ ಸರ್ಕಾರವೂ ಒಪ್ಪಿಕೊಂಡಂತೆ ಎಂದು ನಾವು ಭಾವಿಸಿಕೊಂಡಿರುತ್ತೇನೆ.

(ಶ್ರೀ ಎಸ್.ಎಸ್. ಕಡಪಟ್ಟಿಯವರು ಅಧ್ಯಕ್ಷ ಪೀಠದಲ್ಲಿದ್ದರು)

ಮಾನ್ಯ ಅಧ್ಯಕ್ಷರೇ, ಇದೇ ಸಮಯದಲ್ಲಿ ಇನ್ನೊಂದು ವಿಚಾರವನ್ನು ಹೇಳುವುದಾದರೆ, ಈ ಸದನದ ಸಾರ್ವಜನಿಕ ಉದ್ದಿಮೆಗಳ ಸಮಿತಿಯವರು ಈಗ ಕೇವಲ ಎರಡು ವರ್ಷಗಳ ಹಿಂದೆ ಕೊಟ್ಟಂತಹ ವರದಿಯನ್ನು ನಾನು ಪ್ರಸ್ತಾಪ ಮಾಡುತ್ತೇನೆ. ಆಗ್ರೋ ಇಂಡಸ್ಟ್ರೀಸ್ ಕಾರ್ಪೋರೇಷನ್ ಬಗ್ಗೆ ಸಮಿತಿಯವರು ತಮ್ಮ ವರದಿಯಲ್ಲಿ ಹೇಳಿರುವ ಒಂದೆರಡು ವಾಕ್ಯಗಳನ್ನು ಓದುತ್ತೇನೆ. ಇದಕ್ಕಿಂತ ಹೆಚ್ಚಾಗಿ ಬಳಸುವುದಕ್ಕೆ ಶಬ್ದಗಳೇ ಯಾರಿಗೂ ಕೂಡಾ ಸಿಗುವುದಿಲ್ಲ. ಸರಕಾರದ ಅದಕ್ಷತೆ, ಸರಕಾರದ ವೈಫಲ್ಯತೆಯನ್ನು ಇದಕ್ಕಿಂತ ಚೆನ್ನಾಗಿ ಹೇಳತಕ್ಕದ್ದಕ್ಕೆ ಇನ್ನೆಲ್ಲಿಯೂ ಶಬ್ದಗಳೇ ಸಿಗುವುದಿಲ್ಲ. ಸಮಿತಿಯ ವರದಿಯಲ್ಲಿ ಪ್ರಾರಂಭದಲ್ಲಿ ಏನು ಹೇಳುತ್ತಾರೆ ಎಂದರೆ, ಅವರು ಕರ್ನಾಟಕ ಆಗ್ರೋ ಇಂಡಸ್ಟ್ರೀಸ್ ಕಾರ್ಪೋರೇಷನ್ ಬಗ್ಗೆ ಹೇಳುತ್ತಾ,

> "It incurred losses continuously from 1976-77; the accumulated loss as on 31-3-1986 was Rs. 11.88 crores as against a paid up capital of Rs. 7.23 crores. (including advance towards share capital) and the losses are mainly attributable to mismanagement, managerial inefficiencies, rampant corruption, froud, nepotism encouraged by the following highly defective managerial practices."

ಸ್ವಾಮಿ, ಈ ರೀತಿಯಾದಂಥ ವರದಿಯನ್ನು ಈ ಮನೆಯ ಸಮಿತಿ ಕೊಟ್ಟಿದೆ. ಈ ಇನ್‌ಎಫಿಷಿಯೆನ್ಸಿ ಮತ್ತು ನಷ್ಟವನ್ನು ಕಡಿಮೆ ಮಾಡುವುದಕ್ಕೆ ಸರಕಾರ ಏನಾದರೂ ಕ್ರಮ ತೆಗೆದುಕೊಳ್ಳುತ್ತಿದೆಯೋ? ಹಿಂದೆ ಇದೇ ರೀತಿಯಾದಂಥ ವರದಿಗಳು ಎಷ್ಟು ಬಂದಿದೆ, ಇದರ ಬಗ್ಗೆ ಕ್ರಮ ತೆಗೆದುಕೊಂಡಿದ್ದೀರಾ? ದಯವಿಟ್ಟು ಕೈಗಾರಿಕಾ ಸಚಿವರು ಇವತ್ತು ಇದನ್ನು ಹೇಳಬೇಕು. ನಿನ್ನೆ ನಾನು ಒಂದು ಪ್ರಶ್ನೆ ಕೇಳಿದೆ. ಇದು ಸರಕಾರಿ ಸ್ವಾಮ್ಯದ ಕೈಗಾರಿಕೆ ಅಲ್ಲ, ಖಾಸಗಿ ಮಾಲೀಕರು ನಡೆಸತಕ್ಕ ಕೈಗಾರಿಕೆ. ಸ್ವಲ್ಪ ಮಟ್ಟಿಗೆ ಸರಕಾರ ಇದರಲ್ಲಿ ಬಂಡವಾಳ ಹಾಕಿದೆ. ಮಿಕ್ಕಿದ್ದೆಲ್ಲಾ ನಮ್ಮ ಕಂಟ್ರೋಲ್‌ನಲ್ಲಿ ಬರುವುದಿಲ್ಲ, ಏತಕ್ಕೆ ಉತ್ಪಾದನೆ ನಿಲ್ಲಿಸಿದೆ, ಏನು ಮಾಡಿದೆ ಎಂದು ಬೇಕಾದರೆ ಕೇಳಬಹುದು ಎಂದು ಹೇಳಿದರು. ನಾನು ಮಾನ್ಯ ಜೆ.ಹೆಚ್. ಪಟೇಲರ ವಿರೋಧಿ ಅಲ್ಲ. ಅವರು ಅನುಭವಿ ರಾಜಕಾರಣಿಗಳು. ಹಿರಿಯರು, ಅವರ ಬಗ್ಗೆ ಗೌರವ ಇದೆ. ನನಗೆ ಯಾವುದರ ಬಗೆ ಆತಂಕ ಇದೆ ಎಂದರೆ ಮಾನ್ಯ ಸಚಿವರು ಕೈಗಾರಿಕಾ ಇಲಾಖೆಯಂತಹ ಒಂದು ದೊಡ್ಡ ಇಲಾಖೆಯನ್ನು ವಹಿಸಿಕೊಂಡಿರುವಂತಹ ಕಾಲದಲ್ಲಿ, ಕೈಗಾರಿಕೆಗಳಲ್ಲಿ ಇಷ್ಟು ದೊಡ್ಡ ಬಿಕ್ಕಟ್ಟಾಗಿರುವಾಗ, ತಾವು ಹಲವಾರು ಕಡೆ ಪ್ರವಾಸ ಮಾಡಬೇಕು. ಈ ಬಿಕ್ಕಟ್ಟಿಗೆ ಏನು ಕಾರಣ? ದೊಡ್ಡ ದೊಡ್ಡ ಕೈಗಾರಿಕೆಗಳಲ್ಲಿ ಏತಕ್ಕೆ ಇಂತಹ ಬಿಕ್ಕಟ್ಟು ಬರುತ್ತಿದೆ ಎಂಬುದನ್ನು ಪರಿಶೀಲನೆ ಮಾಡಿ, ಸ್ವತಃ ಇದು ಅನುಭವಕ್ಕೆ ಬಂದಾಗ, ಏನು ಬದಲಾವಣೆ ಮಾಡಬೇಕು ಆ ಬದಲಾವಣೆಗಳನ್ನು ತರುವುದಕ್ಕೆ ಅನುಕೂಲವಾಗುತ್ತದೆಯೋ ವಿನಹ ತಾವು ಜಾಣತನದಿಂದ ಉತ್ತರ ಕೊಟ್ಟ ಕೂಡಲೇ ಕೈಗಾರಿಕೆಯಲ್ಲಿರತಕ್ಕ ಬಿಕ್ಕಟ್ಟು ಹೋಗುವುದಿಲ್ಲ ಎಂದು ಹೇಳುವುದಕ್ಕೆ ನಾನು ಇಚ್ಛೆಪಡುತ್ತೇನೆ. ತುಂಗಭದ್ರಾ ಫೈಬರ್ಸ್ ಎಂಬ ಒಂದು ಕೈಗಾರಿಕೆ ಇದೆ. ಇವತ್ತು ಕೈಗಾರಿಕೆಗಳಲ್ಲಿ ಬಿಕ್ಕಟ್ಟು ಬಂದಿರುವುದಕ್ಕೆ ಕೇಂದ್ರ ಸರಕಾರದ ನೀತಿ ಕಾರಣ, ಅವರ ಎಕ್ಸೈಜ್ ಡ್ಯೂಟಿ ನೀತಿ ಕಾರಣ, ಇದನ್ನು ನಾನು ಒಪ್ಪಿಕೊಳ್ಳುತ್ತೇನೆ.

ಜೊತೆಗೆ ಇನ್ನೊಂದು ವಾದ ಏನಿದೆ ಎಂದರೆ ಅಲ್ಲಿರತಕ್ಕಂಥ ಔಟ್ ಡೇಟೆಡ್ ಟೆಕ್ನಾಲಜಿ ಸಹ ಇದಕ್ಕೆ ಕಾರಣ. ಹಳೆಯ ಯಂತ್ರೋಪಕರಣಗಳಿಂದ ಉತ್ಪಾದನೆ ಹೆಚ್ಚು ಮಾಡುವುದಕ್ಕೆ ಆಗುವುದಿಲ್ಲ. ಇದರಿಂದ ನಷ್ಟ ಬರುತ್ತದೆ ಎನ್ನುವ ಒಂದು ವಾದ ಇದೆ. ಈಗ ನಾನು ಹೇಳಿರತಕ್ಕಂಥ ಕೈಗಾರಿಕೆ ತಂತ್ರಜ್ಞಾನವನ್ನು ಹೊಂದಿರತಕ್ಕ ಕೈಗಾರಿಕೆ. ಈ ಕಾರ್ಖಾನೆಯಲ್ಲಿ ಹೊಸ ಮಾದರಿಯ ತಂತ್ರಜ್ಞಾನ ಇದೆ, ಹೊಸ ಯಂತ್ರೋಪಕರಣಗಳನ್ನು ಜಪಾನ್ ರಾಷ್ಟ್ರದಿಂದ ಆಮದು ಮಾಡಿಕೊಂಡಿದ್ದಾರೆ. ಸುಮಾರು 10 ಕೋಟಿ ರೂಪಾಯಿಗಳ ಬೆಲೆಯ ಯಂತ್ರೋಪಕರಣಗಳನ್ನು ತಂದಿದ್ದಾರೆ. ಅಲ್ಲಿರತಕ್ಕಂಥ ಮ್ಯಾನೇಜ್‌ಮೆಂಟ್ ಬಂಡವಾಳ ಕೇವಲ ಮೂರು ಮೂರುಕಾಲು ಕೋಟಿ ಮಾತ್ರ. ರಾಜ್ಯ ಸರಕಾರದ ಬಂಡವಾಳ ಆ ಕೈಗಾರಿಕೆಯಲ್ಲಿ ಇದೆ. ರಾಜ್ಯ ಸರಕಾರದ ಉನ್ನತಾಧಿಕಾರಿಗಳು ಆ ಕೈಗಾರಿಕೆಯ ಅಧ್ಯಕ್ಷರಾಗಿದ್ದಾರೆ. ಸರಕಾರದವರು ಕೊಟ್ಟಿರುವ ಪ್ರಕಾರ ಒಟ್ಟು ಬಂಡವಾಳದಲ್ಲಿ ಫಸ್ಟ್ ಟರ್ನ್ ಓವರ್ 38 ಕೋಟಿ ರೂಪಾಯಿಗಳು, ಸೆಕೆಂಡ್ ಟರ್ನ್ ಓವರ್ 47 ಕೋಟಿ ರೂಪಾಯಿಗಳು. ಇವತ್ತಿನ ಅಂದಾಜಿನ ಪ್ರಕಾರ, ನಾನು ಕೇಳಿರುವ ಪ್ರಕಾರ ಅಲ್ಲಿ 58 ಕೋಟಿ ರೂಪಾಯಿ ಟರ್ನ್ ಓವರ್ ಆಗುತ್ತದೆ. ಅಷ್ಟೊಂದು ದೊಡ್ಡ ಕೈಗಾರಿಕೆ. ನಮ್ಮ ಕೈಗಾರಿಕೆಯಲ್ಲಿ ಕೆಲಸ ಮಾಡತಕ್ಕ ಕಾರ್ಮಿಕರಿಗೆ ಸ್ಪೆಷಲ್ ಟ್ರೈನಿಂಗ್ ಬೇಕೆಂದು ಹೇಳಿ, ಜಪಾನ್ ದೇಶದಿಂದ ಒಬ್ಬರು ಎಕ್ಸ್‌ಪರ್ಟ್‌ನ್ನು ಕರೆಸಿ ಒಂದು ವರ್ಷಗಳ ಕಾಲ ಅವರನ್ನು ಇಟ್ಟುಕೊಂಡು ಟ್ರೈನಿಂಗ್ ಕೊಡಿಸಿದರು. ಆದರೆ ಪ್ರಾರಂಭ ಹಂತದಲ್ಲಿ ಯಾವ ಉತ್ಪಾದನೆಯೂ ಮಾಡಿಲ್ಲ. ಮಾರ್ಕೆಟಿಂಗ್ ಆಗಿಲ್ಲ. ಆರು ತಿಂಗಳ ಕಾಲ ಟ್ರೈಯಲ್ ಪ್ರೊಡಕ್ಷನ್ ನಡೆದಿರತಕ್ಕಂಥ ಕೈಗಾರಿಕೆಯನ್ನು ಲೇಆಫ್ ಮಾಡಿದರು. ಲೇ ಆಫ್, ಲಾಕ್ ಔಟ್, ಕ್ಲೋಷರ್ ಮಾಡುವುದಕ್ಕೆ ಅವರಿಗೆ ಅಧಿಕಾರ ಇಲ್ಲ. ಅದು ನನಗೆ ಗೊತ್ತು. ಅದಕ್ಕೆ ಬೇರೆ ಕಾನೂನುಗಳು ಇವೆ. ಆದರೆ ಇಲ್ಲಿ ಗೌಡಿಕೆ ಲೆಕ್ಕ. ಸುಮ್ಮನೆ ನಿಲ್ಲಿಸಿಬಿಟ್ಟರು. ಸುಮ್ಮನೆ ಎರಡು ವರ್ಷಗಳಿಂದ ಅದನ್ನು ನಿಲ್ಲಿಸಿದ್ದಾರೆ. 1985ನೇ ಇಸವಿಯ ಜನವರಿಯಲ್ಲಿ ನಿಲ್ಲಿಸಿದ್ದನ್ನು ಇದುವರೆವಿಗೂ ಯಾರೂ ಕೇಳುವವರೇ ಇಲ್ಲ. ಈ ಬಗ್ಗೆ ನಾವು ಏನಾದರೂ ಕೇಳಿದರೆ ವಿಚಾರಣೆ ಮಾಡುತ್ತಿದ್ದೇವೆ, ಪರಿಶೀಲನೆ ಮಾಡುತ್ತಿದ್ದೇವೆಂದು ಎನ್ನುವ ಉತ್ತರ ಬರುತ್ತದೆ. ತಾವು ಸರ್ಕಾರದಲ್ಲಿ ಕುಳಿತುಕೊಂಡು ಏನು ಮಾಡುತ್ತಿದ್ದೀರಿ? ಇಲ್ಲಿ ಇನ್ನೊಂದು ಏನಾಗಿದೆ ಎಂದರೆ ಬಿಸಿನೆಸ್ ಕಾಂಪಿಟೇಷನ್ ಇದೆ. ಇದೇ ಒಂದು ಟ್ರೇಡಿನ ವ್ಯವಹಾರಗಳು ಟಾಟಾರವರು ಮತ್ತು ಬಿರ್ಲಾರವರದು ಇದೆ. ಅವರು ಅತ್ಯಂತ ಪ್ರಭಾವಶಾಲಿಯಾದ ಒತ್ತಡಗಳನ್ನು ಹಾಕಿ ಇದಕ್ಕೆ ಸರ್ಕಾರದಿಂದ ಸಿಗಬೇಕಾದಂಥ ಧನಸಹಾಯಕ್ಕೂ ಕಲ್ಲು ಹಾಕುತ್ತಾರೆ. ಅದಕ್ಕೆ ಸರಿಯಾಗಿ ಸರ್ಕಾರವೂ ಕೂಡ ವರ್ತನೆ ಮಾಡುತ್ತಿದೆ. ಆದ್ದರಿಂದ ಈ ನಮ್ಮ ಕೈಗಾರಿಕೆಗಳು ಮುಂದುವರಿಯಲು ಸಾಧ್ಯವಾಗುವುದಿಲ್ಲ, ಈ ಬಗ್ಗೆ ಸರ್ಕಾರದವರು ಆಸಕ್ತಿ ಹೊಂದಿದ್ದರೆ ಹೊಸ ತಂತ್ರಜ್ಞಾನವನ್ನು ಹೊಂದಿರತಕ್ಕ ಕೈಗಾರಿಕೆಗಳು ಏತಕ್ಕೆ ಬಂದ್ ಆಗುತ್ತಿವೆ? ನಾನು ಈ ಹಿಂದೆ ಒಂದು ಮಾತನ್ನು ಹೇಳಿದ್ದೆ, ಅದೇನೆಂದರೆ ಕೈಗಾರಿಕೆಗಳ ಅಭಿವೃದ್ಧಿ ವಿಚಾರ ಬಂದಾಗ ಕೈಗಾರಿಕಾ ಸಚಿವರ ಮತ್ತು ಕಾರ್ಮಿಕ ಸಚಿವರ ನೇತೃತ್ವದಲ್ಲಿ ಒಂದು ಸಭೆಯನ್ನು ಕರೆದು ಆ ಸಭೆಯಲ್ಲಿ ಕೈಗಾರಿಕೆಗಳ ಸಾಧಕ ಬಾಧಕಗಳನ್ನು ಚರ್ಚೆ ಮಾಡಿ ಎಂದು. ಆದರೆ ಅಂತಹ ಒಂದು ಸಭೆಯನ್ನು ಯಾರೂ ಇಲ್ಲಿಯವರೆವೆಗೂ ಕರೆಯಲಿಲ್ಲ. ಸ್ವಾಮಿ ನನ್ನ ಕಳಕಳಿ ಇಷ್ಟೇ. ಒಂದು ಕೈಗಾರಿಕೆಯಲ್ಲಿ ಸುಮಾರು 200 ಜನರು ಕಾರ್ಮಿಕರು ಇರುತ್ತಾರೆ. ಅವರ ಅಭಿವೃದ್ಧಿ ಬಗ್ಗೆ ಕಾಳಜಿ ವಹಿಸಿದರೆ ಸಾಲದು, ಆ ಕೈಗಾರಿಕೆ ಅಭಿವೃದ್ಧಿ ಕಡೆಗೂ ಸಹ ನಾವು ಸ್ವಲ್ಪ ಲಕ್ಷ್ಯ ಕೊಡಬೇಕಾಗುತ್ತದೆ. ಇವತ್ತಿನ ದಿವಸ ಕೈಗಾರಿಕೆಗಳಲ್ಲಿ ಕೆಲಸ ಮಾಡುತ್ತಿರುವಂತಹ ಕಾರ್ಮಿಕರು ಏನಿದ್ದಾರೆ ಅವರು ಕನಿಷ್ಟ ವೇತನ ಮಾತ್ರ ತೆಗೆದುಕೊಳ್ಳುತ್ತಿದ್ದಾರೆ. ಅವರ ಸೇವೆಯನ್ನು ಇನ್ನೂ ಖಾಯಂ ಮಾಡಿಲ್ಲ. ಶ್ರೀಮಾನ್ ಜೆ.ಹೆಚ್. ಪಟೇಲ್‌ರವರ ತಾಲ್ಲೂಕಿನವರೇ ಆದ ಕೆಲವು ಜನ ಅವರಿಂದ ಪತ್ರವನ್ನು ತಂದು ಅಲ್ಲಿ ಕೆಲಸಕ್ಕೆ ಸೇರಿಕೊಂಡಿದ್ದಾರೆ. ಅವರು ಸಹ ತಮ್ಮ ಗೋಳನ್ನು ಬಂದು ಇಲ್ಲಿ ಹೇಳಿಕೊಳ್ಳುತ್ತಿದ್ದಾರೆ. ಕೊಪ್ಪಳದ ಶ್ರೀಮಾನ್ ವೀರೂಪಾಕ್ಷಪ್ಪನವರು ಸಹ ಈ ಕೈಗಾರಿಕೆ ಬಗ್ಗೆ ತಮಿಳುನಾಡಿನ ಸರ್ಕಾರದ ಜೊತೆ ಮಾತುಕತೆ ಮಾಡಿ ಕೊನೆಗೆ ಸಾಧ್ಯವಿಲ್ಲವೆಂದು ಹೇಳಿ ಕೈ ಬಿಟ್ಟರು. ಈ ರೀತಿಯಾಗುವುದಕ್ಕೆ ಕಾರಣವೇನು? ಇದರ ಹಿಂದೆ ಇರತಕ್ಕ ರಹಸ್ಯವೇನು? ಇಂತಹ ಕೈಗಾರಿಕೆಗಳು ನಡೆಸುವುದಕ್ಕೆ ಟೆಕ್ನಿಕಲ್ ಆಗಿ ಫೀಜಬಲಿಟಿ ಇಲ್ಲವೆಂದು ಹೇಳಿದರೂ ಸಹ ತಾವು ಏತಕ್ಕೆ ಇಂತಹ ಕೈಗಾರಿಕೆಗಳನ್ನು ಪ್ರಾರಂಭ ಮಾಡುವುದಕ್ಕೆ ಅನುಮತಿ ಕೊಡುತ್ತೀರಿ? ಈ ಕೈಗಾರಿಕೆಗಳಿಗೆ ಬೇಕಾದ ಯಂತ್ರೋಪಕರಣಗಳನ್ನು ಖರೀದಿ ಮಾಡಲು ಹಣವನ್ನು ಸಾರ್ವಜನಿಕರಿಂದ ಷೇರು ಹಣ ಪಡೆದುಕೊಂಡಿರುತ್ತಾರೆ. ಕೈಗಾರಿಕೆಯ ಮಾಲೀಕರು ಕೇವಲ 2–3 ಕೋಟಿ ರೂಪಾಯಿಗಳ ಬಂಡವಾಳ ಹಾಕಿದ ಮಾತ್ರಕ್ಕೆ ಆ ಕೈಗಾರಿಕೆಯ ವ್ಯವಸ್ಥಾಪಕ ನಿರ್ದೇಶಕರು ಸಂಪೂರ್ಣವಾಗಿ ಹಗಲು ದರೋಡೆ ಮಾಡುವುದಕ್ಕೆ ಸಾಧ್ಯವಿಲ್ಲ. ಈ ಕೈಗಾರಿಕೆಯಲ್ಲಿ ಸಾರ್ವಜನಿಕರ ಹಣ ಸಹ ಇರುತ್ತದೆ.

ಆದ್ದರಿಂದ ಮಾನ್ಯ ಮಂತ್ರಿಗಳು ಈ ಹಗಲು ದರೋಡೆಯನ್ನು ತಡೆಗಟ್ಟಿ ಇದರ ಜೊತೆಗೆ ಹಾಕಿರ ತಕ್ಕಂಥ ಬಂಡವಾಳ ಸೋರಿ ಹೋಗಲು ಕಾರಣವೇನು ಎನ್ನುವುದನ್ನು ಪತ್ತೆ ಹಚ್ಚಲು ಸಿ.ಬಿ.ಐ. ತನಿಖೆ ಮಾಡಬೇಕೆಂದು ಸಹ ನಾನು ವಿನಂತಿ ಮಾಡಿಕೊಳ್ಳುತ್ತೇನೆ. ಈ ಬಗ್ಗೆ ಮಾನ್ಯ ಸಚಿವರು ಗಮನಹರಿಸಬೇಕು. ಇನ್ನು ರೇಷ್ಮೆ ಕೈಗಾರಿಕೆಗಳ ಬಗ್ಗೆ ಕೂಡ ಮಾನ್ಯ ಮಂತ್ರಿಗಳು ಸ್ವಲ್ಪ ಗಮನಹರಿಸಬೇಕು. ನಮ್ಮ ರಾಜ್ಯದ ಬೆಂಗಳೂರು ಜಿಲ್ಲೆಯಲ್ಲಿಯೇ ಅತಿ ಹೆಚ್ಚು ಪವರ್ ಲೂಮ್ಸ್ ಇವೆ. ಬೆಂಗಳೂರು ನಗರದಲ್ಲಿ ಕಾಂಗ್ರೆಸ್ ಪಕ್ಷದ ಸದಸ್ಯರು ಯಾರೂ ಚುನಾಯಿತರಾಗಿ ಬಂದಿಲ್ಲ. ಇಲ್ಲಿ ಚುನಾಯಿತರಾಗಿ ಬಂದಿರುವವರೆಲ್ಲರೂ ಜನತಾ ಪಕ್ಷದ ಸದಸ್ಯರೇ. ಅಲ್ಲಿಂದ ಚುನಾಯಿತರಾಗಿ ಬಂದಿರುವವರ ಪೈಕಿ ಕೆಲವರು ಮಂತ್ರಿಗಳು ಸಹ ಆಗಿದ್ದಾರೆ. ಈ ಪವರ್ ಲೂಮ್ಸ್‌ನಲ್ಲಿ ತಯಾರು ಮಾಡಿದ ಬಟ್ಟೆಗಳನ್ನು ಕೈಮಗ್ಗದಿಂದ ತಯಾರು ಮಾಡಿದ ಸೀರೆಗಳನ್ನು ಹಾಕಿಕೊಂಡು ಸರ್ಕಾರಕ್ಕೆ ಕೊಡಬೇಕಾದಂತಹ 4 ಪರ್ಸೆಂಟ್ ಆದಾಯ ತೆರಿಗೆಯನ್ನು ಸಹ ತಪ್ಪಿಸಿಕೊಂಡು ಹೊರಗಡೆ ಕಳುಹಿಸಿಕೊಟ್ಟು ಲಕ್ಷಾಂತರ ರೂಪಾಯಿಗಳ ವ್ಯವಹಾರ ನಡೆಸುತ್ತಿದ್ದಾರೆ. ಇದು ನಿಮ್ಮ ಸರ್ಕಾರದ ಮಂತ್ರಿಗಳಿಗೆ ಗೊತ್ತಿಲ್ಲವೆ ಏನು? ಬೆಂಗಳೂರು ನಗರದಲ್ಲಿ ಗೆದ್ದು ಬಂದಿರುವ ಸದಸ್ಯರೇ ಮಂತ್ರಿಗಳಾಗಿದ್ದಾರೆ. ಈ ಬಗ್ಗೆ ಅವರ್ಯಾರು ಗಮನಹರಿಸುವುದಕ್ಕೆ ತಯಾರು ಇಲ್ಲ. ಈ ಬಗ್ಗೆ 2ನೇ ತಾರೀಖು ಸೆಪ್ಟೆಂಬರ್ 87ರಂದು ಪ್ರಜಾವಾಣಿ ಪತ್ರಿಕೆಯಲ್ಲಿ ಬಂದಿದೆ. ಏನು ಬಂದಿದೆ ಎಂದರೆ ಸುಮಾರು 10 ಲಕ್ಷ ರೂಪಾಯಿಗಳಷ್ಟು ರೇಷ್ಮೆ ಸೀರೆಗಳನ್ನು ಅಕ್ರಮವಾಗಿ ಸಾಗಿಸುತ್ತಿದ್ದಾರೆಂದು ಆ ಮಾಲನ್ನು ರೈಲ್ವೆ ಸ್ಟೇಷನ್‌ನಲ್ಲಿ ಪೋಲೀಸಿನವರು ವಶಪಡಿಸಿಕೊಂಡಿದ್ದಾರೆಂದು ಬಂದಿದೆ. ಈ ರೀತಿ ಅವ್ಯವಹಾರ ನಡೆಯುತ್ತಿದ್ದರೂ ಸಹ ಈ ಬಗ್ಗೆ ಯಾರೂ ಗಮನಹರಿಸುತ್ತಿಲ್ಲ. ಇನ್ನು ಈ ಕೈಗಾರಿಕೆಗಳಲ್ಲಿ ಕೆಲಸ ಮಾಡತಕ್ಕಂಥ ಕಾರ್ಮಿಕರು ಮಹಾತ್ಮಾಗಾಂಧಿಯವರು ಹಾಕಿಕೊಳ್ಳುತ್ತಿದ್ದಷ್ಟು ಬಟ್ಟೆಯನ್ನು ಸಹ ಹಾಕಿಕೊಳ್ಳುವುದಕ್ಕೆ ಸಾಧ್ಯವಿಲ್ಲ. ಈ ಕೈಗಾರಿಕೆಗಳ ನೇಕಾರರ ಒಂದು ಕೋ ಆಪರೇಟಿವ್ ಸೊಸೈಟಿಯನ್ನು ಸ್ಥಾಪನೆ ಮಾಡಿಕೊಂಡಿದ್ದಾರೆ. ಇಲ್ಲಿ ಯಾರು ನೂಲು ತಂದು ಸೀರೆ ಉತ್ಪತ್ತಿ ಮಾಡದೆ ಸಹಕಾರ ಸಂಘದಿಂದ ಸಿಗುವಂತಹ ರಿಬೇಟನ್ನು ಕ್ಲೈಮ್ ಮಾಡುತ್ತಿದ್ದಾರೆ. ಇದು ಒಂದು ರೀತಿಯ ಮೋಸ ಇಲ್ಲಿ ನಡೆಯುತ್ತಿದೆ. ನಾನು ಕೈಗಾರಿಕಾ ನೀತಿಯ ಬಗ್ಗೆ ಮಾತನಾಡುವಾಗ ಗುಡಿ ಕೈಗಾರಿಕೆಗಳ ಬಗ್ಗೆ ಟೆಕ್ಸ್‌ಟೈಲ್ ಬಗ್ಗೆ ಮಾತನಾಡಬೇಕೆಂದು ಇದ್ದೇನೆ. ಟೆಕ್ಸ್‌ಟೈಲ್ ಇಂಡಸ್ಟ್ರಿ ಕ್ರೈಸಿಸ್ ಏನು ಇದೆ, ಇದಕ್ಕೆ ಹಲವಾರು ಕಾರಣಗಳು ಇವೆ. ಆ ಕ್ರೈಸಿಸ್‌ಗಳನ್ನು ಓವರ್‌ಕಮ್ ಮಾಡುವುದಕ್ಕೆ ಸರ್ಕಾರ ಏನು ಪ್ರಯತ್ನ ಮಾಡಿದೆ ? ನಿಮ್ಮ ರಾಜಕೀಯ ಸ್ಥೈರ್ಯ, ಪೊಲಿಟಿಕಲ್ ವಿಲ್ ಪವರನ್ನು ಇದರಲ್ಲಿ ಬಳಸಿದ್ದೀರಾ ಎಂಬುದು ಮುಖ್ಯವಾದ ಪ್ರಶ್ನೆ. ಮಾನ್ಯ ಸದಸ್ಯರಾದ ಪಂಪಾಪತಿಯವರು ಕಾರ್ಮಿಕರ ಮತ್ತು ಕಾರ್ಖಾನೆಯ ಬಿಕ್ಕಟ್ಟಿನಿಂದ ಉಂಟಾಗಿರುವ ಸಮಸ್ಯೆಯನ್ನು ಸರ್ಕಾರ ಇತ್ಯರ್ಥ ಮಾಡಬೇಕೆಂದು ಉಪವಾಸ ಸತ್ಯಾಗ್ರಹವನ್ನು ಮಾಡುತ್ತಿದ್ದಾರೆ. ಈ ಮನೆಯ ಒಬ್ಬ ಮಾನ್ಯ ಸದಸ್ಯರು ಉಪವಾಸ ಸತ್ಯಾಗ್ರಹ ಮಾಡುತ್ತಿದ್ದಾರೆ ತಾವುಗಳೇನಾದರೂ ಸಮಸ್ಯೆಯನ್ನು ಇತ್ಯರ್ಥ ಮಾಡುವ ಬಗ್ಗೆ ಕ್ರಮ ತೆಗೆದುಕೊಂಡಿದ್ದೀರಾ ? ಕೇರಳಾ ರಾಜ್ಯದಲ್ಲಿ ಸಿಕ್ ಇಂಡಸ್ಟ್ರಿಗಳನ್ನು ರೀಹೆಬಿಲಿಟೇಟ್ ಮಾಡುವುದಕ್ಕೋಸ್ಕರ ೪ ಕೋಟಿ ರೂಪಾಯಿಗಳ ಒಂದು ಫಂಡ್‌ನ್ನು ತೆಗೆದಿರಿಸಿದ್ದಾರೆಂದು ಕೇಳಿದ್ದೇನೆ. ಕೇಂದ್ರ ಸರ್ಕಾರದವರು ಕೂಡ ಇತ್ತೀಚೆಗೆ ಒಂದು ಕಮಿಟಿಯನ್ನು ಮಾಡಿ ಸಿಕ್ ಇಂಡಸ್ಟ್ರೀಗಳನ್ನು ರೀಹೆಬಿಲಿಟೇಟ್ ಮಾಡುವುದಕ್ಕೆ ಫಂಡ್ಸ್‌ನ್ನು ಬಿಡುಗಡೆ ಮಾಡುವುದಕ್ಕೆ ಯೋಜನೆ ಹಾಕಿಕೊಂಡಿದ್ದಾರೆ. ರಾಜ್ಯ ಸರ್ಕಾರ ಏಕೆ ಈ ರೀತಿ ಸಿಕ್ ಇಂಡಸ್ಟ್ರೀಗಳನ್ನು ರೀಹೆಬಿಲಿಟೇಟ್ ಮಾಡುವುದಕ್ಕೆ ಪ್ರಯತ್ನಿಸಬಾರದು ? ಸಣ್ಣ ಪ್ರಮಾಣದ ಕೈಗಾರಿಕೆಗಳಿಗೆ ಸರಿಯಾದ ಪ್ರೋತ್ಸಾಹವೇ ಇರುವುದಿಲ್ಲ. ಭಾರಿ ಪ್ರಮಾಣದ ಕೈಗಾರಿಕೆಗಳಲ್ಲಿ ಮ್ಯಾನೇಜ್‌ಮೆಂಟ್ ಮಟ್ಟದಲ್ಲಿ ಕೋಟ್ಯಾಂತರ ರೂಪಾಯಿಗಳ ಭ್ರಷ್ಟಾಚಾರ ನಡೆಯುತ್ತಿದೆ. ಈ ಭ್ರಷ್ಟಾಚಾರವನ್ನು ತಪ್ಪಿಸಲಿಕ್ಕೆ ಸರ್ಕಾರ ಯಾವ ಪ್ರಯತ್ನವನ್ನೂ ಮಾಡುತ್ತಿಲ್ಲ. ಉದಾಹರಣೆಗೆ ಹೇಳುವುದಾದರೆ, ಅಮೆರಿಕನ್ ವಾರ್ತಾಪತ್ರ ಎನ್ನತಕ್ಕದ್ದು ಇದೆ. ಬೆಂಗಳೂರಿನಲ್ಲಿ ಒಂದು ಕಂಪನಿ ಇದೆ. ಟೆಕ್ಸಾಸ್ ಇನ್‌ಸ್ಟ್ರುಮೆಂಟ್ ಎಂದು ಆ ಕಂಪನಿಯ ಹೆಸರು. ಈ ಕಂಪನಿ ಅಮೆರಿಕಾ ದೇಶದ ಟೆಕ್ಸಾಸ್ ಇನ್‌ಸ್ಟ್ರುಮೆಂಟ್ ಕಂಪನಿಯ ಜೊತೆ ಕೊಲ್ಯಾಬರೇಷನ್‌ನಲ್ಲಿ ಕೆಲಸ ಮಾಡುತ್ತಿದೆ. ಈ ಕಂಪನಿಗೆ ನಮ್ಮ ರಾಜ್ಯ ಸರ್ಕಾರ ಇನ್‌ಫ್ರಾಸ್ಟ್ರಕ್ಚರ್ ಒದಗಿಸಿಕೊಟ್ಟಿದ್ದಾರೆ. ನಮ್ಮ ಭಾರತ ದೇಶದ ೨೫ ಜನ ಮೇಧಾವಿ ಇಂಜಿನಿಯರ್‌ಗಳು ಅಲ್ಲಿ ಕೆಲಸ ಮಾಡುತ್ತಿದ್ದಾರೆ. ಆ ಕಂಪನಿಯಲ್ಲಿ ಏನು ಉತ್ಪಾದನೆ ಮಾಡುತ್ತಿದ್ದಾರೆಂದು ಯಾರಿಗೂ ಗೊತ್ತಿಲ್ಲ. ಅಲ್ಲಿ ತಯಾರು ಮಾಡುತ್ತಿರುವುದು ಸಾಫ್ಟ್‌ವೇರ್ ಡಿಸೈನ್‌ಗಳೆಂದು ಹೇಳುತ್ತಾರೆ. ಇದರ ಉದ್ಘಾಟನೆಯನ್ನು ನಮ್ಮ ಸನ್ಮಾನ್ಯ ಮುಖ್ಯ ಮಂತ್ರಿಗಳಾದ ರಾಮಕೃಷ್ಣ ಹೆಗಡೆಯವರು ಮಾಡಿದ್ದಾರೆ. ಆ ಕಂಪನಿಯ ಉದ್ಘಾಟನಾ ಸಮಾರಂಭಕ್ಕೆ ಅಮೇರಿಕಾ ದೇಶದ ರಾಯಭಾರಿ ಮಿಸ್ಟರ್ 'ಡೀ' ಎಂಬುವರು ಬಂದು ಮಾತನಾಡಿದ್ದಾರೆ. "ಭಾರತ

ದೇಶದ ಮೇಧಾವಿ ಶಕ್ತಿಯು ರಫ್ತು'' ಎಂದು ಪತ್ರಿಕೆಗಳಲ್ಲಿ ವರದಿ ಬಂದಿತ್ತು. ಈ ಟೆಕ್‌ಟ್ರಾನಿಕ್ಸ್ ಕೊಲಾಬರೇಷನ್‌ನಲ್ಲಿ ಪ್ರಾರಂಭವಾಗಿರುವ ಈ ಟೆಕ್ಸಾಸ್ ಕಂಪನಿಯವರು ಸಾಫ್ಟ್‌ವೇರ್ ಡಿಸೈನ್‌ನ್ನು ತಯಾರು ಮಾಡುತ್ತೇವೆಂದು ಹೇಳಿ, ಯುದ್ಧದಲ್ಲಿ ಬಳಸುವ ಸಾಮಗ್ರಿಗಳ, ಹಾಗೂ ಡಿಫೆನ್ಸ್‌ಗೆ ಸಂಬಂಧಪಟ್ಟಂತೆ ಉಪಯೋಗಿಸುವ ಅನೇಕ ಸೂಕ್ಷ್ಮ ವಸ್ತುಗಳ, ಟಾಪ್ ಸೀಕ್ರೇಟ್ ವಿಷಯಗಳನ್ನು ಸೆಟಲೈಟ್ ಮೂಲಕ ಅಮೇರಿಕಾ ದೇಶಕ್ಕೆ ಇನ್‌ಫರ್‌ಮೇಷನ್ ಕೊಡುತ್ತಿದ್ದಾರೆಂದು ತಿಳಿದು ಬಂದಿದೆ. ಒಂದು ವೇಳೆ ಆ ರೀತಿ ಅವರು ಮಾಡುತ್ತಿಲ್ಲವೆಂದು ಸರ್ಕಾರ ಅದರ ಬಗ್ಗೆ ಉತ್ತರ ಕೊಡಲಿ. ಆಗ ನಾನು ಒಪ್ಪಿಕೊಳ್ಳುತ್ತೇನೆ. ಆ ಕಂಪನಿಯಲ್ಲಿ ಏನು ತಯಾರು ಮಾಡಲಾಗುತ್ತದೆ ಎಂದು ಸರ್ಕಾರಕ್ಕೆ ಗೊತ್ತಿಲ್ಲದೆ ಉದ್ಘಾಟನೆಯನ್ನು ಏಕೆ ಮಾಡಬೇಕು ? ಇದರ ಬಗ್ಗೆ ಸರ್ಕಾರ ಉತ್ತರ ಹೇಳಬೇಕು. ಇನ್ನು ಬಿಜಾಪುರ ಸ್ಪಿನ್ನಿಂಗ್ ಮಿಲ್ ಬಗ್ಗೆ ಸರ್ಕಾರ ಮಾಡಿರುವ ಕೆಲಸವನ್ನು ನಾನು ಮೆಚ್ಚಿ ಕೊಳ್ಳುತ್ತೇನೆ. ಬಿಜಾಪುರ ಸ್ಪಿನ್ನಿಂಗ್ ಮಿಲ್‌ಗೆ ಸರ್ಕಾರ ೫೦ ಲಕ್ಷ ರೂಪಾಯಿಗಳನ್ನು ಕೊಟ್ಟು ರೀಹೆಬಿಲಿಟೇಟ್ ಮಾಡುವುದಕ್ಕೆ ವ್ಯವಸ್ಥೆ ಮಾಡಿದ್ದಾರೆ. ಇದರ ಜೊತೆಗೆ ಅಲ್ಲಿಗೆ ಒಬ್ಬರು ರಿಟೈರ್ಡ್ ಆಫಿಸರ್ ಒಬ್ಬರನ್ನು ಅಲ್ಲಿ ನೇಮಕ ಮಾಡಿದರೆ ಅವರಿಗೆ ಅಡ್ಮಿನಿಸ್ಟ್ರೇಷನ್ ಮ್ಯಾನೇಜಿಂಗ್ ಡೈರಕ್ಟರ್‌ನ್ನಾಗಿ ನೇಮಕ ಮಾಡಿದ್ದಾರೆ. ಇವರಿಗೆ ಟೆಕ್ನಿಕಲ್ ಎಂದು ಏನೇನೂ ಗೊತ್ತಿಲ್ಲ. ಮಾರ್ಕೆಟ್‌ನಲ್ಲಿ ಒಳ್ಳೆ ಬೇಡಿಕೆ ಇರುವಾಗ ಮಾಲನ್ನು ಮಾರಾಟ ಮಾಡದೇ ಹಾಗೆಯೇ ಸ್ಟಾಕ್ ಇಡಿಸಿರುತ್ತಾರೆ. ಮಾರ್ಕೆಟ್‌ನಲ್ಲಿ ಬೆಲೆ ಇಲ್ಲದೇ ಇರುವ ಸಮಯದಲ್ಲಿ ಕಡಿಮೆ ಬೆಲೆಗೆ ಮಾರಾಟ ಮಾಡಿ ಕಂಪನಿಗೆ ಬಹಳ ಲಾಸ್ ಮಾಡಿದ್ದಾರೆ. ಇಂಥ ಅದಕ್ಷ ಅಧಿಕಾರಿಗಳನ್ನು ಕಂಪನಿಗಳಲ್ಲಿ ಹಾಕಬಾರದು. ಅಷ್ಟೇ ಅಲ್ಲ, ಫಾರೆಸ್ಟ್ ಇಂಡಸ್ಟ್ರೀ ಕಾರ್ಪೊರೇಷನ್ ಬಗ್ಗೆ ನಾನು ಕೇಳಿದ್ದೇನೆ. ಸಬ್ಜೆಕ್ಟ್ ಟು ಕರಕ್ಷನ್. ೪ ಕೋಟಿ ರೂಪಾಯಿ ಗಳಷ್ಟು un spant ಮನಿ ಇದೆ ಎಂದು ಕೇಳಿದ್ದೇನೆ. ಹಾಗೆ ಇದ್ದಲ್ಲಿ ಅದು ಏಕೆ ಇದೆ ? ಏತಕ್ಕಾಗಿ

೨-೦೦ ಪಿ. ಎಂ.

ಆ ಡಿಪಾರ್ಟ್‌ಮೆಂಟಿಗೆ ಒಂದು ಸರಿಯಾದ ಪ್ಲಾನ್ ಆಗಲೀ, ಪ್ರೋಗ್ರಾಂ ಆಗಲೀ, ಇಲ್ಲಾ ? ಆ ಹಣವನ್ನು ಏತಕ್ಕಾಗಿ ಖರ್ಚು ಮಾಡಲಿಲ್ಲ ? ಈ ಬಗ್ಗೆ ಸನ್ಮಾನ್ಯ ಸಚಿವರು ಹೇಳಬೇಕು. ಒಂದು ವೇಳೆ ಅವರಿಗೆ ಸಂಬಂಧ ಇಲ್ಲದಿದ್ದರೆ ನಾನು ಒಪ್ಪಿಕೊಳ್ಳುತ್ತೇನೆ. ಆದರೂ ಕೂಡ ಈ ಒಂದು ಕೈಗಾರಿಕಾ ನೀತಿ ಬಗ್ಗೆ ಪ್ರಸ್ತಾಪ ಮಾಡಿದಾಗ, ಸರಕಾರದ ಅಧಕ್ಷತೆ ಬಗ್ಗೆ ಪ್ರಸ್ತಾಪ ಮಾಡಿದಾಗ, ಸರಕಾರದ ವೈಫಲ್ಯತೆ ಬಗ್ಗೆ ಪ್ರಸ್ತಾಪ ಮಾಡಿದಾಗ. ಅವೆಲ್ಲದಕ್ಕೂ ತಾವು ಉತ್ತರವನ್ನು ಕೊಡ ಬೇಕಾಗುತ್ತದೆ.

ಇವೊತ್ತು ದಾವಣಗೆರೆಯಲ್ಲಿ ಉಂಟಾಗಿರತಕ್ಕಂಥ ಬಿಕ್ಕಟ್ಟು ಏನಿದೆ, ಅದರಲ್ಲಿ ತಾವು ತತ್‌ಕ್ಷಣ ಮಧ್ಯೆ ಪ್ರವೇಶ ಮಾಡಿ, ಆದಷ್ಟು ಜಾಗ್ರತೆ, ಇಷ್ಟು ಅವಧಿಯೊಳಗಾಗಿ ನಾನು ಎಲ್ಲಾ ಮಿಲ್‌ಗಳನ್ನು ತೆಗೆದುಕೊಳ್ಳುವುದಕ್ಕೆ ಪ್ರಯತ್ನಮಾಡುತ್ತೇನೆ, ಎಂಬ ಒಂದು ಗಡಸುತನದ ಮಾತನ್ನು, ಮಾನ್ಯ ಸಚಿವರು ತಮ್ಮ ಆಶ್ವಾಸನೆಯ ಮೂಲಕ ಕೊಡಬೇಕೆಂದು ಕೇಳಿಕೊಂಡು ನನಗೆ ಅವಕಾಶವನ್ನು ಕೊಟ್ಟ ಅಧ್ಯಕ್ಷರಿಗೆ ವಂದಿಸಿ, ನನ್ನ ಮಾತುಗಳನ್ನು ಮುಗಿಸುತ್ತೇನೆ.

ಅಧ್ಯಕ್ಷರು.—ಮುಂದೆ ಮಾತನಾಡುವವರು ಶ್ರೀ ಎಸ್. ಬಂಗಾರಪ್ಪ.—ಗೈರುಹಾಜರು,

ಶ್ರೀ ಕೆ. ಬಿ. ಶಾಣಪ್ಪ.—ಗೈರು ಹಾಜರು, ಶ್ರೀ ಉಮರಬ್ಬ.—ಗೈರುಹಾಜರು.

ಶ್ರೀ ಅಡ್ಯಂತಾಯುವರು ಮಾತನಾಡಬಹುದು.

† ಶ್ರೀ ಎನ್.ಎಂ. ಅಡ್ಯಂತಾಯ (ಸೂರತ್‌ಕಲ್).—ಸನ್ಮಾನ್ಯ ಅಧ್ಯಕ್ಷರೇ, ನಮ್ಮ ರಾಜ್ಯದಲ್ಲಿ ಉಂಟಾಗಿರತಕ್ಕಂಥ ಕೈಗಾರಿಕಾ ಬಿಕ್ಕಟ್ಟಿನ ವಿಷಯದಲ್ಲಿ ಈಗಾಗಲೇ ಸದನದಲ್ಲಿ ತುಂಬಾ ಚರ್ಚೆ ನಡೆದಿದೆ. ಅನೇಕ ಜನ ಹಿರಿಯ ಸದಸ್ಯರು ಬಹಳ ಉತ್ತಮವಾದಂತಹ ರೀತಿಯಲ್ಲಿ ಈ ಕೈಗಾರಿಕಾ ಬಿಕ್ಕಟ್ಟಿನ ಬಗ್ಗೆ ತಮ್ಮ ವಾದಗಳನ್ನು ಮಂಡಿಸಿದ್ದಾರೆ. ನಾನು ರಾಜ್ಯದ ಕೈಗಾರಿಕಾ ಬಿಕ್ಕಟ್ಟಿನ ಬಗ್ಗೆ ಮೊನ್ನೆ ನಮ್ಮ ಭಾರಿ ಕೈಗಾರಿಕಾ ಮಂತ್ರಿಗಳಾದ ಮತ್ತು ಹಿರಿಯ ರಾಜಕಾರಣಿಗಳೂ ಆದ

---

† ಈ ಚಿಹ್ನೆ ಮಾನ್ಯ ಸದಸ್ಯರು ಟಿಪ್ಪಣಿ ಅಥವಾ ಭಾಷಣವನ್ನು ಪರಿಷ್ಕರಿಸಿಲ್ಲ ಎಂದು ಸೂಚಿಸುತ್ತದೆ.

ಶ್ರೀ ಜಿ.ಹೆಚ್. ಪಟೇಲ್‌ರವರು ಪತ್ರಿಕೆಗಳಲ್ಲಿ ಕೊಟ್ಟಿರತಕ್ಕಂಥ ಹೇಳಿಕೆಯನ್ನು ಓದಿದ್ದೇನೆ. ಸುಮಾರು ೧೫ ಭಾರಿ ಉದ್ಯಮಗಳು ವಿದ್ಯುಚ್ಛಕ್ತಿ ಅಭಾವದಿಂದಾಗಿ ತಾತ್ಕಾಲಿಕವಾಗಿ ಅವನ್ನು ನಿಲ್ಲಿಸಬೇಕಾದಂತಹ ಒಂದು ಪರಿಸ್ಥಿತಿ ಬಂದಿದೆ ಎಂಬುದನ್ನು ಅದರಲ್ಲಿ ಹೇಳಿದ್ದರು. ಈ ಒಂದು ಪರಿಸ್ಥಿತಿ ಕರ್ನಾಟಕದಲ್ಲಿ ಬರುವುದಕ್ಕೆ ಕಾರಣವನ್ನು ನಾವು ನೋಡುವಾಗ, ತಮ್ಮ ಸರಕಾರಕ್ಕೆ ಯಾವುದಾದರೂ ಒಂದು ಕೈಗಾರಿಕಾ ನೀತಿ ಎಂಬುದು ಇದೆಯೋ ಎಂದು ಪ್ರಶ್ನೆ ಮಾಡುವಂತಹ ಮಟ್ಟಕ್ಕೆ ಬರಬೇಕಾಗುತ್ತದೆ ಎಂಬ ಭಾವನೆ ನನ್ನಲ್ಲಿ ಇದೆ. ನಾನು ಏತಕ್ಕೋಸ್ಕರವಾಗಿ ಇದನ್ನು ಉಲ್ಲೇಖ ಮಾಡುತ್ತಿದ್ದೇನೆ ಎಂದರೆ ೧೫ ಭಾರಿ ಕೈಗಾರಿಕೆಗಳು ನಮ್ಮ ರಾಜ್ಯದಲ್ಲಿ ವಿದ್ಯುಚ್ಛಕ್ತಿ ಅಭಾವದಿಂದ ತಾತ್ಕಾಲಿಕವಾಗಿ ನಿಲ್ಲುತ್ತವೆ ಎನ್ನುವ ಸಮಯದಲ್ಲಿ ಇನ್ನೊಂದು ಕಡೆ ತಮ್ಮ ಬೇಜವಾಬ್ದಾರಿ ತನದಿಂದಾಗಿ ಸರ್ಕಾರದ ನಿರ್ಲಕ್ಷ ಮನೋಭಾವದಿಂದಾಗಿ ಕರ್ನಾಟಕ ರಾಜ್ಯ ಸರಕಾರ ಬಂಡವಾಳ ಹೂಡಿರತಕ್ಕಂಥ ಕಾರ್ಖಾನೆಗಳಲ್ಲಿ ಅತಿ ದೊಡ್ಡದಾದಂಥ ಮುಂಚೂಣಿಯಲ್ಲಿರತಕ್ಕಂಥ, ಅತಿ ಹೆಚ್ಚು ಬಂಡವಾಳವನ್ನು ಹಾಕಿರತಕ್ಕಂಥ, ಪ್ರಾಯಶಃ ಕರ್ನಾಟಕ ರಾಜ್ಯದಲ್ಲಿ ಇಷ್ಟು ದೊಡ್ಡ ಒಂದು ಕೈಗಾರಿಕೆ ಇರಲಿಕ್ಕಿಲ್ಲ, ಎಂದು ಕಾಣುತ್ತದೆ, ಏಕೆಂದರೆ, ಎಲ್ಲಾ ೧೫ ಕೈಗಾರಿಕೆಗಳ ಬಂಡವಾಳವನ್ನು ತೆಗೆದುಕೊಂಡು ನೋಡಿದರೂ ಕೂಡ, ಆ ಎಲ್ಲದಕ್ಕಿಂತಲೂ ಮಂಗಳೂರು ರಸಗೊಬ್ಬರ ಕಾರ್ಖಾನೆಯಲ್ಲಿ ಹಾಕಿರತಕ್ಕಂಥ ಬಂಡವಾಳವೇ ಹೆಚ್ಚು ಆಗಿರುತ್ತದೆ. ಇದು ಕ್ಯಾಪಿಟಲ್ ಇಂಟೆನ್ಸಿವ್ ಇಂಡಸ್ಟ್ರಿ ಆಗಿದೆ. ರಾಜ್ಯಸರಕಾರದ ಸುಮಾರು ೨೮ ಕೋಟಿ ರೂಪಾಯಿಗಳು, ಕೇಂದ್ರ ಸರಕಾರದ ಫೈನಾನ್ಸಿಯಲ್ ಇನ್‌ಸ್ಟಿಟ್ಯೂಷನ್‌ಗಳಿಂದ ಹಾಕಿದಂತಹ ೧೮೭ ಕೋಟಿ ರೂಪಾಯಿಗಳು, ಇಷ್ಟು ದೊಡ್ಡ ಮೊತ್ತದ ಬಂಡವಾಳವನ್ನು ಹಾಕಿ, ಮಾಡಿದಂತಹ ಕಾರ್ಖಾನೆ ಇದು. ಇದು ಉತ್ಪಾದನೆ ಮಾಡುವಂತಹ ಸರಕು ಯಾವುದಿದೆ ಅದು ನಮ್ಮ ರೈತರಿಗೆ ಅತೀ ಮುಖ್ಯವಾಗಿ ಬೇಕಾದಂಥದ್ದು. ಒಂದು ಸಂದರ್ಭದಲ್ಲಿ ಬರಗಾಲ ಪರಿಸ್ಥಿತಿಯ ಬಗ್ಗೆ ಇದೇ ಸದನದಲ್ಲಿ ಅತೀ ಅಮೂಲ್ಯವಾದ ಕಾಲವನ್ನು ವಿನಿಯೋಗ ಮಾಡಿಕೊಳ್ಳುವ ಸಂದರ್ಭದಲ್ಲಿ, ಇಂಥ ಬರಗಾಲ ಪರಿಸ್ಥಿತಿಯನ್ನು ನಿವಾರಣೆ ಮಾಡುವುದಕ್ಕೋಸ್ಕರವಾಗಿ ಯಾವ ಒಂದು ಕಚ್ಚಾ ವಸ್ತು ಅತೀ ಮುಖ್ಯವಾದ ಗೊಬ್ಬರ, ಇದನ್ನು ಕಾರ್ಖಾನೆ ತಯಾರು ಮಾಡುತ್ತದೆ. ಇಂತಹ ಪ್ರಮುಖ್ಯವಾದಂತಹ ಕಚ್ಚಾ ವಸ್ತುವನ್ನು ತಯಾರು ಮಾಡುವಂತಹ ಕರ್ನಾಟಕ ರಾಜ್ಯದ ಏಕ ಮಾತ್ರ ರಸಗೊಬ್ಬರ ಕಾರ್ಖಾನೆಯಾದ ಮಂಗಳೂರು ರಸಗೊಬ್ಬರ ಕಾರ್ಖಾನೆ ಇವೊತ್ತಿನ ದಿವಸ, ೬೫ ದಿವಸಗಳಿಂದ ಉತ್ಪಾದನೆ ಇಲ್ಲದೇ ಸ್ಥಗಿತವಾಗಿದೆ. ಏತಕ್ಕೋಸ್ಕರವಾಗಿ ಯಾವ ಕಾರಣಕ್ಕೋಸ್ಕರವಾಗಿ ಈ ಸ್ಥಗಿತ ? ಕಾರ್ಮಿಕರ ಅತೀ ಹೆಚ್ಚಿನ ಒಂದು ಆರ್ಥಿಕ ಬೇಡಿಕೆಗಾಗಿ ನಿಲ್ಲಿಸಿದ್ದಾರೆಯೋ ? ಅಥವಾ ಆಡಳಿತ ಮತ್ತು ಕಾರ್ಮಿಕ ವರ್ಗದವರಲ್ಲಿನ ವಿವಾದ ಉಂಟಾಗಿ ನಿಲ್ಲಿಸಿದ್ದಾರೆಯೋ ? ಯಾವುದೇ ಒಂದು ವಿವಾದ ಇದ್ದರೂ ಕೂಡ ಅಂತಹ ವಿವಾದವನ್ನು ಒಂದು ಸಂಧಾನದ ಮೂಲಕ ಬಗೆಹರಿಸುವುದಕ್ಕೆ ನಿರ್ಲಜ್ಜ ಮನೋಭಾವನೆಯನ್ನು ತಾಳಿ, ಯಾವುದೇ ರೀತಿಯಾದ ಮುತುವರ್ಜಿಯನ್ನು ವಹಿಸದೇ ಕರ್ನಾಟಕ ರಾಜ್ಯದ ೨೮ ಕೋಟಿ ರೂಪಾಯಿಗಳ ಬಂಡವಾಳ ಏನಿದೆ ಅದಕ್ಕಿಂತಲೂ ಹೆಚ್ಚಿಗೆ ಅಂದರೆ ಸುಮಾರು ೪೦ ಕೋಟಿ ರೂಪಾಯಿಗಳಷ್ಟು ನಷ್ಟ ಅಲ್ಲಿ ಈಗಾಗಲೇ ಆಗಿದೆ. ೪೦ ಕ್ಕೂ ರೂ. ಉತ್ಪಾದನೆ ಮಾಡುತ್ತಿದ್ದುದು ಇವತ್ತು ಕಾರ್ಮಿಕರ ಮತ್ತು ಮ್ಯಾನೇಜ್‌ಮೆಂಟಿನ ಮಧ್ಯೆಯ ವಿರಸದಿಂದ ಅದನ್ನು ಬಗೆಹರಿಸಲು ಸರಿಯಾದ ಕಾರ್ಯವನ್ನು ಈ ಸರ್ಕಾರ ತೆಗೆದುಕೊಳ್ಳದಿರುವುದರಿಂದ ಇವತ್ತು ಇಷ್ಟು ಲಾಸಾಗಲು ಕಾರಣವಾಯಿತು. ಪ್ರತಿ ವರ್ಷ ೮ ಕೋಟಿ ಲಾಭ ಮಾಡುತ್ತಿದ್ದ ಈ ಫ್ಯಾಕ್ಟರಿ ಇನ್ನು ೬ ವರ್ಷಗಳ ಕಾಲ ಲಾಭ ಮಾಡಲು ಸಾಧ್ಯವಿಲ್ಲದ ಪರಿಸ್ಥಿತಿ ನಿಮ್ಮ ಕೈಗಾರಿಕಾ ನೀತಿಯಿಂದ ನಿರ್ಮಾಣವಾಗಿದೆ. ಬಹಳ ಬೇಸರದಿಂದ ನಾನು ಇದನ್ನು ಹೇಳಬೇಕಾಗುತ್ತದೆ,

ರಾಜ್ಯದ ಮುಖ್ಯಮಂತ್ರಿಗಳಾದ ಹೆಗಡೆಯವರ ಬಳಿ ದಕ್ಷಿಣ ಕನ್ನಡ ಜಿಲ್ಲೆಯ ೧೫ ಶಾಸಕರ ಪೈಕಿ ೧೩ ಮಂದಿ ಶಾಸಕರು ಶ್ರೀ ಎಂ. ವೀರಪ್ಪ ಮೊಯ್ಲಿಯವರ ನೇತೃತ್ವದಲ್ಲಿ ಭೇಟಿ ಮಾಡಿದ್ದೆವು ಆಗ ಅವರು ಯಾವುದೇ ಸಂದರ್ಭದಲ್ಲಿ ಯಾವುದೇ ರಿಸರ್ವೇಷನ್ ಇಟ್ಟುಕೊಳ್ಳದೆ ಅಥವಾ ರಾಜಕೀಯ ಮಾಡದೇ ಈ ಒಂದು ಇಂಡಸ್ಟ್ರಿಯನ್ನು ಒಳ್ಳೆಯ ರೀತಿಯಲ್ಲಿ ಮುಂದೊಯ್ಯುವುದಕ್ಕೆ ಸಂಪೂರ್ಣ ಸ್ನೇಹಹಸ್ತವನ್ನು ಕೊಡುತ್ತೇನೆಂದು ಹೇಳಿದರು ಮತ್ತು ಆ ಸಮಯದಲ್ಲಿ ಮುಖ್ಯಮಂತ್ರಿಗಳು ನಮ್ಮ ಕೈಗಾರಿಕಾ ನೀತಿ ಸೀಕ್ರೆಟ್ ಬ್ಯಾಲೇಟ್ ಎಂದರು. ಅನಂತರ ಕೈಗಾರಿಕಾ ಸಚಿವ ಪಟೇಲರನ್ನು ನೋಡಲು ಹೇಳಿದರು. ನಾವು ಅವರನ್ನು ನೋಡಲು ಹೋದೆವು. ಪಟೇಲರನ್ನು ಕಂಡರೆ ನಮಗೆ ಭಾರಿ ಅಭಿಮಾನವಿದೆ. ಕರ್ನಾಟಕದ ಸಮಾಜವಾದೀ ನಾಯಕರುಗಳಲ್ಲಿ ಗೋಪಾಲಗೌಡರ ಪಟ್ಟ ಶಿಷ್ಯರೆಂದು ಬೇಕಾದರೆ ಇವರಿಗೆ ಹೇಳಬಹುದು. ಅಂಥವರು ಇಂಡಸ್ಟ್ರಿ ಮಿನಿಸ್ಟ್ರಾಗಿರುವಾಗ ನಮಗೆ ನ್ಯಾಯ ಸಿಗುತ್ತದೆಂದು ಅವರ ಬಳಿ ಹೋದೆವು, ಅವರು ಹೇಳಿದರು, ನೋಡು ಅಡ್ಮಿಂತಾಯ, ಟೆಕ್ನಿಕಾಗಿ ಇರಲಿ, ಏನೇ ಇರಲಿ, ಸೀಕ್ರೆಟ್ ಬ್ಯಾಲೆಟ್ ನನ್ನ ಸರ್ಕಾರದ ತತ್ವ. ಆದೇ ರೀತಿ ಉಳಿದ

ಪ್ರಶ್ನೆಗಳನ್ನೂ ಕುರಿತು ವಿಚಾರ ಮಾಡಿ ಬಗೆಹರಿಸೋಣ. ಈಗ ಡೆಲ್ಲಿಗೆ ಹೋಗುತ್ತಿದ್ದೇನೆ, ಬಂದ ನಂತರ ಸಭೆ ಕರೆಯುತ್ತೇನೆ ಎಂದರು. ನಾವು ಅವರ ಬಳಿ ಹೋಗಿದ್ದು ಜುಲೈ ೧೫ರಿಂದ ಆದರೆ ಇವತ್ತಿನವರೆಗೆ ಇವರು ಸಭೆಯನ್ನು ಕರೆದಿಲ್ಲ. ನಾವೂ ಅವರು ಸಭೆಯನ್ನು ಕರೆಯುತ್ತಾರೆ, ಸಮಸ್ಯೆಯನ್ನು ಇತ್ಯರ್ಥ ಮಾಡುತ್ತಾರೆ ಎಂಬ ವಿಶ್ವಾಸ ಇಟ್ಟುಕೊಂಡೇ ಇದ್ದೇವೆ, ಅದು ಇನ್ನೂ ಕರಗಿಲ್ಲ. ಅದೇನೇ ಇರಲಿ, ಸಾವಿರಾರು ಜನ ಕಾರ್ಮಿಕರಿರುವಲ್ಲಿ ೯೫ ಪರ್ಸೆಂಟ್ ಒಂದು ಕಡೆ ಇರಬಹುದು. ೫ ಪರ್ಸೆಂಟ್ ಜನರೇ ಒಂದು ಕಡೆ ಇರಬಹುದು ಆದರೆ ಆ ಪಂಗಡಗಳು ಇವೆ ಎಂದು ನಾವು ಸಮಸ್ಯೆಯನ್ನು ಇತ್ಯರ್ಥ ಮಾಡಲಿಲ್ಲ ಎಂಬ ಭಾವನೆ ಇಟ್ಟುಕೊಳ್ಳಬಾರದು. ಯಾವ ಸಂಘಟನೆಗೆ ಹೆಚ್ಚು ಮಾನ್ಯತೆ ಇದೆಯೋ ಅದಕ್ಕೆ ಮಾನ್ಯತೆ ಕೊಡಬೇಕು. ಇಂಡಿಯನ್ ಲೇಬರ್ ಕಾನ್‌ಫರೆನ್ಸ್ ಕೆಲವೊಂದು ನಿಯಮಗಳನ್ನು ಹಾಕದೆ ನೀವು ಅಲ್ಲಿರುವ ಕಾರ್ಮಿಕರನ್ನು ವಿಶ್ವಾಸಕ್ಕೆ ತೆಗೆದುಕೊಂಡು ಮುಂದೆ ಹೆಜ್ಜೆ ಇಡಬೇಕು. ಇರುವುದು ಎರಡೇ ಸಿಸ್ಟಂ. ಒಂದು ಚೆಕ್‌ಆಫ್ ಸಿಸ್ಟಂ, ಇನ್ನೊಂದು ಸೀಕ್ರೆಟ್ ಬ್ಯಾಲೆಟ್. ನಮ್ಮ ಪಕ್ಷದ ಕಾರ್ಮಿಕ ಸಂಘಟನೆಯಾದ ಇಂಟಕ್ ಕೂಡ ಚೆಕ್‌ಆಫ್ ಸಿಸ್ಟಂ ಅನ್ನೇ ಪ್ರತಿಪಾದನೆ ಮಾಡುವುದರಿಂದ ಇದನ್ನು ಬಗೆಹರಿಸಬಹುದು. ನಮ್ಮ ರಾಜ್ಯ ಸರ್ಕಾರದ ಪಾಲಿಸಿ ಅದು ಸೀಕ್ರೆಟ್ ಬ್ಯಾಲೆಟ್ ಎಂಬುದಾಗಿ ಹೇಳಿದ್ದರಿಂದ ಅದನ್ನೇ ಮಾಡಿ ಇತ್ಯರ್ಥ ಮಾಡಿ ಚೆಕ್ ಸಿಸ್ಟಂಗಾಗಲೀ, ಸೀಕ್ರೆಟ್ ಬ್ಯಾಲೆಟ್ ಸಿಸ್ಟಂಗಾಗಲೀ ನಾವು ಸಿದ್ಧ ಅಲ್ಲಿ ದಿವಸಕ್ಕೆ ೬೦ ಲಕ್ಷ ರೂಪಾಯಿಗಳು ನಷ್ಟವಾಗುತ್ತಿದೆ, ಅಂತಹ ಕಾರ್ಖಾನೆಯಲ್ಲಿ ಸೀಕ್ರೆಟ್ ಬ್ಯಾಲೆಟ್ ಮಾಡುವುದಕ್ಕೆ ವಿಳಂಬ ಮಾಡಿ ಇವತ್ತು ೪೦ ಕೋಟಿ ರೂಪಾಯಿ ನಷ್ಟವಾಗುವಂತಹ ಸನ್ನಿವೇಶಕ್ಕೆ ತಂದಿದ್ದಾರೆ. ತಮ್ಮ ಸರಕಾರಕ್ಕೆ ಯಾವುದಾದರೊಂದು ಕೈಗಾರಿಕಾ ನೀತಿ ಇದೆಯೋ ಎಂಬ ಪ್ರಶ್ನೆ ಮಾಡುವುದರಲ್ಲಿ ಯಾವ ಉತ್ಪ್ರೇಕ್ಷೆಯೂ ಇಲ್ಲ ಎಂಬುದಾಗಿ ನಾನು ಭಾವಿಸುತ್ತೇನೆ. ಇನ್ನೊಂದು ವಿಷಯದ ಬಗ್ಗೆ ಹೇಳುವುದಾದರೆ ಮುಖಂಡರೆಂದು ಹೇಳಿದಂತಹವರು, ಅಧ್ಯಕ್ಷರೆಂದು ಹೇಳಿದಂತಹ ಲೋಕಯ್ಯಶೆಟ್ಟಿಯವರು ಕೋರ್ಟಿಗೆ ಹೋಗಿದ್ದಾರೆ, ನಾನು ಇಲ್ಲವೆಂದು ಹೇಳುವುದಿಲ್ಲ. ಮಾನ್ಯ ಅಡ್ಮಂತಾಯರವರು ಅಧ್ಯಕ್ಷರಾಗಿರುವುದನ್ನು ಪ್ರಶ್ನೆ ಮಾಡಿ ಕೋರ್ಟಿಗೆ ಹೋಗಿದ್ದಾರೆ ಎಂಬುದಾಗಿ ಕಾರ್ಮಿಕ ಸಂಘದವರು ಕೊಟ್ಟಿದ್ದಾರೆ. ಯಾವಾಗ ಟೆಂಪೊರರಿ ಇಂಜೆಕ್ಷನ್ ಸಿಗಲಿಲ್ಲವೋ. ಆಗ I have not been restrained from the Court. For all legal purposes I held to be the President. ಅದೇ ರೀತಿ ಸೀಕ್ರೆಟ್ ಅನ್ನು ಮಾಡುವುದಾದರೆ ಅದಕ್ಕೂ ಸಿದ್ಧ ಅದನ್ನೇ ಮಾಡಿ. ನಾನು ರಾಜಕೀಯ ಪಕ್ಷಕ್ಕೆ ಸೇರಿದವನಾಗಿರಬಹುದು ಐಎನ್‌ಟಿಯುಸಿ ಯನ್ನು ತೆಗೆದು ನೋಡಿ ನಿಜವಾಗಲೂ ಯಾವುದೇ ಸಂದರ್ಭದಲ್ಲಿ ರಾಜಕೀಯವಾಗಿ ಮುಷ್ಕರದ ಕರೆಯನ್ನು ಕೊಟ್ಟಿದ್ದಿಲ್ಲ ಕೆ.ಎಸ್.ಆರ್.ಟಿ.ಸಿ ಇಲ್ಲವೇ ಮೈಸೂರ್ ಸೇಲ್ಸ್ ಇರಬಹುದು ಅನೇಕ ಸಂಸ್ಥೆಗಳು ಸರಕಾರದ ಸ್ವಾಮ್ಯದಲ್ಲಿ ಇದೆ, ರಾಜಕೀಯವಾಗಿ ಎಂದೂ ಐಎನ್‌ಟಿಯುಸಿ ಯನ್ನು ಬಳಸಿದ್ದಿಲ್ಲ. ನಾನು ಮಾನ್ಯ ಮಂತ್ರಿಗಳಲ್ಲಿ ವಿನಂತಿ ಮಾಡಿಕೊಳ್ಳುವುದೇನೆಂದರೆ, ನಿನ್ನೆ ಅಲ್ಲಿ ಕಾರ್ಮಿಕರು ಅಮರಣಾಂತ ಅನ್ನ ಸತ್ಯಾಗ್ರಹವನ್ನು ಮಾಡಿದ್ದಾರೆ, ಮೊದಲು ೫ ಜನರು ಪ್ರಾರಂಭ ಮಾಡಿದರು ಈಗ ಅದು ೧೨ ರವರೆಗೆ ಹೋಗಿದೆ ಅದರಲ್ಲೂ ಅನೇಕ ಕಾರ್ಮಿಕರು ಬಹಳ ಸೀರಿಯಸ್ ಕಂಡೀಷನ್ನಲ್ಲಿದ್ದಾರೆ ಪೋಲೀಸ್ ಅಧಿಕಾರಿಗಳು ಮತ್ತು ಜಿಲ್ಲಾಧಿಕಾರಿಗಳ ಅಪ್ಪಣೆ ಮೇರೆಗೆ ಅವರನ್ನು ಆಸ್ಪತ್ರೆಗೆ ಸೇರಿಸಲಾಗಿದೆ ಅವರು ಅಲ್ಲಿ ಕೂಡ ಯಾವುದೇ ರೀತಿಯ ಆಹಾರ ತೆಗೆದುಕೊಳ್ಳದೆ ಇದ್ದರು. ನಿನ್ನೆ ದಿವಸ ಮಾನ್ಯ ವೀರಪ್ಪಮೊಯಿಲಿಯವರು ಮಾತನಾಡಿದ ನಂತರ ಮಾನ್ಯ ಪಟೇಲ್‌ರವರು ವಿನಂತಿ ಮಾಡಿದ್ದರು. ಅದರ ಮುಖೇನ ಅದಕ್ಕೆ ಮನ್ನಣೆಯನ್ನು ಕೊಟ್ಟು ನಿನ್ನೆಯ ದಿವಸವೇ ಸತ್ಯಾಗ್ರಹವನ್ನು ಸ್ಥಗಿತಗೊಳಿಸಿದ್ದೇವೆ. ಅದೇ ರೀತಿಯಲ್ಲಿ ತಾವು ಆಶ್ವಾಸನೆಯನ್ನು ಕೂಡ ಕೊಟ್ಟಿದ್ದೀರಿ. ಇದನ್ನು ಬಹಳ ಒಳ್ಳೆಯ ರೀತಿಯಲ್ಲಿ ಮುಕ್ತವಾದ ರೀತಿಯಲ್ಲಿ ಮಾತುಕತೆಯ ಮೂಲಕ ಬಗೆಹರಿಸೋಣ ಎಂದು. ತಾವು ಈ ಕಾರ್ಖಾನೆಯನ್ನು ಅಲ್ಲಿನ ಪ್ರಶ್ನೆಗಳು ಏನು ? ಕಾರ್ಮಿಕರ ಮುಖಂಡರುಗಳೊಡನೆ ಮಾತನಾಡಿ ಒಳ್ಳೆಯ ಕೈಗಾರಿಕಾ ವಾತಾವರಣವನ್ನು ನಿರ್ಮಾಣ ಮಾಡಿ ಕರ್ನಾಟಕ ರಾಜ್ಯದ ಇತರ ಕಾರ್ಖಾನೆಗಳಲ್ಲೂ ಕೂಡ ಇದೇ ರೀತಿಯಲ್ಲಿ ಯಾವುದೇ ರಾಜಕೀಯವನ್ನು ಮಾಡದೇ ಕಾರ್ಮಿಕರಿಗೆ ಬೇಕಾದಂತಹ ಮುಖಂಡರುಗಳನ್ನು, ಅವರು ಕಾರ್ಮಿಕ ಸಂಘಕ್ಕೆ ಆರಿಸುವಂತಹ ವಾತಾವರಣವನ್ನು ನಿರ್ಮಾಣ ಮಾಡಿಕೊಡಬೇಕೆಂದು ತಮ್ಮ ಮುಖೇನ ಕೇಳುತ್ತಿದ್ದೇನೆ. ಮಾನ್ಯ ಮುಖ್ಯಮಂತ್ರಿಯವರು ಮೊನ್ನೆಯ ದಿವಸ ದೆಹಲಿಯಲ್ಲಿನ ಪತ್ರಿಕಾ ಹೇಳಿಕೆಯನ್ನು ಕೊಟ್ಟರು ಅದರಲ್ಲಿ ಮಹಾತ್ಮ ಗಾಂಧೀಜಿಯವರ ಪ್ರತಿ ಪಾದನೆ ಯಾವುದಿದೆ "Capital and labour are equal partners and ultimate Owner is the Society". ನನಗೆ ತಮ್ಮಲ್ಲಿ ಸಂಪೂರ್ಣವಾಗಿ ವಿಶ್ವಾಸ ಇದೆ. ಕರ್ನಾಟಕದಲ್ಲಿ ಸಮಾಜವಾದಿ ನಾಯಕರು ಇದ್ದರೆ ತಾವು ಒಬ್ಬರೇ. ತಾವು ಹಿಂದೆ ಇದರಲ್ಲಿ ಎಷ್ಟೋ ತೀರ್ಮಾನ ತೆಗೆದುಕೊಂಡಿದ್ದೀರಿ. ಅದೇ ರೀತಿ ಕಾರ್ಮಿಕ ಮಂತ್ರಿ

ಗಳು ಇದ್ದಾರೆ, ಅವರು ಕಾರ್ಮಿಕ ಮುಖಂಡರು ಆಗಿದ್ದವರು. ಈಗ ಕಾರ್ಮಿಕ ಮಂತ್ರಿಗಳಾಗಿದ್ದಾರೆ ಖಂಡಿತವಾಗಿ ತಾವು ಮನಸ್ಸುಮಾಡಿದರೆ ಇದನ್ನು ಇತ್ಯರ್ಥ ಮಾಡುತ್ತೀರಿ. ಆದರೆ ನಿಮಗೆ ಇದನ್ನು ಮಾಡದ ಹಾಗೆ ಒತ್ತಡವನ್ನು ತರುತ್ತಿದ್ದಾರೆ ಎಂಬ ನನಗೆ ಸಂಶಯ ಇದೆ. ಈ ಸಂದರ್ಭದಲ್ಲಿ ಮಾನ್ಯ ಮುಖ್ಯಮಂತ್ರಿಗಳು ನವದೆಹಲಿಯಲ್ಲಿ ಹೇಳಿಕೆಯನ್ನು ಕೊಟ್ಟಿದ್ದಾರೆ. ಅದನ್ನು ಓದಿ ನನಗೆ ಬಹಳ ಸಂತೋಷವಾಯಿತು. ಪೂಜ್ಯ ಮಹಾತ್ಮ ಗಾಂಧಿಯವರು ಹೇಳಿದ ಹಾಗೆ ಆಡಳಿತದಲ್ಲಿ ಕಾರ್ಮಿಕರಿಗೆ ಸಮನಾದ ಪಾಲನ್ನು ನಾವು ಕೊಡುವುದರಲ್ಲಿಯೇ ನನ್ನ ತತ್ವ ಎಂದು ತಾವು ಹೇಳಿಕೆಯನ್ನು ಕೊಟ್ಟಿದ್ದೀರಿ ಕೇಂದ್ರ ಸರ್ಕಾರಿ ಉದ್ಯಮಗಳಲ್ಲಿ ಅದರಲ್ಲಿ ಅತಿ ಪ್ರಾಮುಖ್ಯವಾದ ಬ್ಯಾಂಕಿಂಗ್ ಉದ್ದಿಮೆ ನಮ್ಮ ರಾಷ್ಟ್ರದ ನರ ನಾಡಿ ಎಂದು ಅದನ್ನು ಹೇಳಿದರೆ ತಪ್ಪಾಗಲಿಕ್ಕಿಲ್ಲ ಆ ಬ್ಯಾಂಕಿಂಗ್ ಉದ್ದಿಮೆಯಲ್ಲಿ ಕೂಡಾ ಆಡಳಿತದಲ್ಲಿ ಪಾಲನ್ನು ಕಾರ್ಮಿಕರಿಗೆ ಬೋರ್ಡ್ ಆಫ್ ಡೈರೆಕ್ಟರ್ಸ್ ಅಲ್ಲಿ ಕೊಟ್ಟಿದ್ದಾರೆ ತಮ್ಮ ಕೈಗಾರಿಕಾ ನೀತಿ ಯಾವುದು? ಕರ್ನಾಟಕ ರಾಜ್ಯದಲ್ಲಿ ಒಂದೇ ಒಂದು ಕೈಗಾರಿಕೆಯಲ್ಲಿ ಕಾರ್ಮಿಕರಿಗೆ ಆಡಳಿತದಲ್ಲಿ ಪಾಲನ್ನು ತಾವು ಕೊಟ್ಟಿದ್ದೀರಾ? ತಮ್ಮ ಸರ್ಕಾರ ಅಧಿಕಾರಕ್ಕೆ ಬಂದು ನಾಲ್ಕು—ನಾಲ್ಕು ವರೆ ವರ್ಷಗಳು ಆಯಿತು. ಸುಮಾರು ನಾಲ್ಕೂವರೆ ವರ್ಷ ಆಯಿತು. ಆದರೆ ಒಂದೇ ಒಂದು ಕರ್ನಾಟಕ ಸರ್ಕಾರ ಅಧೀನದಲ್ಲಿರ ತಕ್ಕಂಥ ಕಾರ್ಖಾನೆಯಲ್ಲಿ ಕಾರ್ಮಿಕರಿಗೆ ತಾವು ಸಮಪಾಲನ್ನು ಕೊಟ್ಟಿಲ್ಲ. ಅದೇ ರೀತಿಯ ಉಲ್ಲೇಖವನ್ನು ನೀಡುವಾಗ ನಾವು ಇವತ್ತಿಗೂ ಪಾಲನ್ನು ಕೇಳಿಲ್ಲ. ಕರ್ನಾಟಕ ರಾಜ್ಯದ ಅಧೀನದಲ್ಲಿರತಕ್ಕಂಥ ಉದ್ದಿಮೆಗಳಲ್ಲಿ ಕಾರ್ಮಿಕರಿಗೆ ಅವರಿಗೆ ಕಾರ್ಮಿಕ ಸಂಘಬೇಕು. ಅವರಿಗೆ ಮುಕ್ತ ಮತದಾನದ ಮುಖೇನ ಅವರುಗಳಿಗೆ ಅವಕಾಶವನ್ನು ಮಾಡಿಕೊಡಬೇಕು. ಕೆ.ಎಸ್.ಆರ್. ಟಿ.ಸಿ. ಯಲ್ಲಿ ಮೊದಲು ಇತ್ತು. ಈಗ ಇಲ್ಲ. ಕೆ.ಎಸ್. ಆರ್.ಟಿ.ಸಿ. ಯಲ್ಲಿ ನಮ್ಮ ಸರ್ಕಾರ ಇರುವಾಗ ಇತ್ತು. ದಯಮಾಡಿ ತಾವು ಬೇಕಾದರೆ ಕೇಳಬಹುದು. Justice delayed is justice denied. ತಾವು ೬೫ ದಿವಸ ಜಸ್ಟೀಸ್ ಡಿಲೇ ಮಾಡಿದರೆ ಜಸ್ಟೀಸ್ ಡಿನೈ ಮಾಡಿದ ಹಾಗೆ ಆಗುತ್ತದೆ. ದಯಮಾಡಿ ಆದಷ್ಟು ಬೇಗ ಮುಕ್ತ ವಾತಾವರಣದಲ್ಲಿ ಆಡಳಿತ ವರ್ಗ ಯಾವುದು ಇದೆ, ಅದು ಈ ಕಾರ್ಮಿಕರ ಸಂಘಟನೆಯನ್ನು ಮನ್ನಣೆ ಮಾಡುವುದಕ್ಕೆ ಅವಕಾಶ ಕೊಡಿ. ನಮಗೆ ಆ ಅವಕಾಶವನ್ನು ಪುನಃ ಕಿತ್ತು ಹಾಕಬೇಡಿ. ಈ ಅವಕಾಶವನ್ನು ಕಲ್ಪಿಸಿಕೊಡಿ ಎಂಬುದಾಗಿ ನಾವು ಕೇಳಿಕೊಂಡು ಆಡಳಿತ ವರ್ಗದಲ್ಲಿ ಮ್ಯಾನೇಜ್‌ಮೆಂಟ್ ಮಾಡಲಿಕ್ಕೆ ಪರೋಕ್ಷವಾಗಿ ಪ್ರಯತ್ನ ಮಾಡುವುದನ್ನು ದಯಮಾಡಿ ನಿಲ್ಲಿಸಬೇಕು. ಖಂಡಿತವಾಗಿ ನಮಗೆ ಕಾಂತಾರವರಲ್ಲಿ ಅಭಿಮಾನ ಇದೆ. ಅವರು ಖಂಡಿತವಾಗಿಯೂ ಇದನ್ನು ಮಾಡಿಯೇ ಕೊಡುತ್ತಾರೆ ಎಂಬ ಅಭಿಮಾನ ಇದೆ. ದಯಮಾಡಿ ಈ ಪ್ರಶ್ನೆಯನ್ನು ಆದಷ್ಟು ಬೇಗ ತಾವು ಇತ್ಯರ್ಥ ಮಾಡಿ ಸೂಕ್ತ ಪರಿಹಾರವನ್ನು ಒದಗಿಸಿಕೊಡಬೇಕೆಂದು ಕೇಳಿಕೊಂಡು ಅಧ್ಯಕ್ಷರಿಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

† ಶ್ರೀ ಬಿ. ಎ. ಉಮರಬ್ಬ (ವಿಟ್ಲ).—ಸನ್ಮಾನ್ಯ ಅಧ್ಯಕ್ಷರೆ, ನಿನ್ನೆಯಿಂದ ಕೈಗಾರಿಕೆ ಮತ್ತು ಕಾರ್ಮಿಕ ವರ್ಗಕ್ಕೆ ಸಂಬಂಧಪಟ್ಟ ಹಾಗೆ ಒಂದು ಗಂಭೀರವಾದಂಥ ಚರ್ಚೆಯಲ್ಲಿ ನಾವು ತೊಡಗಿದ್ದೇವೆ. ಮಾನ್ಯ ವೀರಪ್ಪಮೊಯಿಲಿಯವರು ೮೦ ನಿಮಿಷಗಳ ಕಾಲ ಸುದೀರ್ಘವಾಗಿ ಹಾಗೂ ಬಹಳ ಅಚ್ಚುಕಟ್ಟಾದ ಮಾತುಗಳಲ್ಲಿ ಬಹಳಷ್ಟು ವಿಚಾರಗಳನ್ನು ಸೂಕ್ಷ್ಮವಾಗಿ ಪ್ರಸ್ತಾಪ ಮಾಡಿದ್ದಾರೆ. ನಾನು ಇದಕ್ಕೆ ಸಂಬಂಧಪಟ್ಟಂತೆ ಒಂದೆರಡು ವಿಚಾರಗಳನ್ನು ತಮ್ಮ ಮುಖಾಂತರ ಸರ್ಕಾರದ ಗಮನಕ್ಕೆ ತರಬಯಸುತ್ತೇನೆ. ಈ ಮಾತನ್ನು ಪ್ರಾರಂಭ ಮಾಡುವಾಗ ನನ್ನ ಮನಸ್ಸಿನಲ್ಲಿ ಸಹಜವಾದಂಥ ಆ ದುಗುಡ ಇದೆ. ಹಲವಾರು ಕಾರ್ಮಿಕ ವರ್ಗಗಳ, ಕೈಗಾರಿಕೆಗಳ ವಿಚಾರದಲ್ಲಿ ಆಸಕ್ತಿ ಹೊಂದಿರುವ ನನಗಿಂತ ಚಿಕ್ಕ ವಯಸ್ಸಿನವರನ್ನು ಗಂಟೆಗಟ್ಟಲೆ ಕೂಡಿಸಿ, ವಿಚಾರ ಮಾಡುವಂಥ ಆ ಬಗ್ಗೆ ಕಾಳಜಿ ವಹಿಸುವಂಥ ನಾಯಕರು ಇವತ್ತು ಅದೇ ಇಲಾಖೆಯ ಸಚಿವರಾಗಿರುವಂಥ ಸಂದರ್ಭದಲ್ಲಿ ಅವರ ಎದುರಿನಲ್ಲಿ ಮಾತನಾಡುವುದಕ್ಕೆ ಅವಕಾಶ ಇರುವುದು ದುಗುಡಕ್ಕೆ ಕಾರಣ ಎಂದು ನಾನು ತಿಳಿದಿದ್ದೇನೆ. ಇವತ್ತು ಸಮಗ್ರವಾಗಿ ಕೈಗಾರಿಕೆಯ ಅಶಾಂತಿಯ ವಿಚಾರ ಇಲ್ಲಿ ನಡೆದಿದೆ. ಎಲ್ಲೆಲ್ಲಿ ಕೈಗಾರಿಕೆಗಳು ಸ್ಥಗಿತಗೊಂಡಿವೆ ಅಲ್ಲಲ್ಲಿ ಕಾರ್ಮಿಕರು ಅಶಾಂತಿಯಲ್ಲೇ ತೊಡಗಿರುವುದಕ್ಕೆ ಕಾರಣ ಏನು ಎನ್ನುವಂಥ ವಿಶ್ಲೇಷಣೆ ಸಹ ಇಲ್ಲಿ ಆಗಿದೆ. ಆದ್ದರಿಂದ ಈ ಎಲ್ಲಾ ವಿಚಾರಗಳ ಬಗ್ಗೆ ಮಾತನಾಡುವ ಬದಲು ನನ್ನ ಮಾತಿನ ಅಂಶವನ್ನು ಮಂಗಳೂರು ರಸಗೊಬ್ಬರ ಕಾರ್ಖಾನೆಯ ಬಗ್ಗೆ ಕೇಂದ್ರೀಕರಿಸಲಿಕ್ಕೆ ಅಪೇಕ್ಷೆಪಡುತ್ತೇನೆ ಸುಮಾರು ೬೪–೬೫ ದಿನಗಳಿಂದ ಇಲ್ಲಿಯ ಕೆಲಸ ಸ್ಥಗಿತಗೊಂಡಿದ್ದು ಸುಮಾರು ೪೦ ಕೋಟಿ ರೂಪಾಯಿಗಳ ನಷ್ಟ ಉಂಟಾಗಿದೆಯೆಂದು ಈಗಾಗಲೇ ಮಾತನಾಡಿರುವಂಥ ಸದಸ್ಯರುಗಳು ಸರ್ಕಾರದ ಗಮನಕ್ಕೆ ತಂದಿದ್ದಾರೆ. ೬೪–೬೫ ದಿವಸಗಳ ಅವಧಿಯಲ್ಲಿ ಅವಶ್ಯಕವಾಗಿ ಕೆಲಸ ಸ್ಥಗಿತ

---

† ಈ ಚಿಹ್ನೆ ಮಾನ್ಯ ಸದಸ್ಯರು ಟಿಪ್ಪಣಿ ಅಥವಾ ಭಾಷಣವನ್ನು ಪರಿಷ್ಕರಿಸಿಲ್ಲ ಎಂದು ಸೂಚಿಸುತ್ತದೆ.

ವಾಗಿದೆಯೋ, ಅನಾವಶ್ಯಕವಾಗಿ ಕೆಲಸ ಸ್ಥಗಿತವಾಗಿದೆಯೋ ಎನ್ನುವುದು ವಿಮರ್ಶೆ ಮಾಡತಕ್ಕ ವಿಚಾರ. ನವಮಂಗಳೂರು ಬಂದರಿನಲ್ಲಿ ಕೆಲವು ಕಾರಣಗಳಿಗಾಗಿ ಅಶಾಂತಿ ಮೂಡಿಬಂದಂಥ ಸಂದರ್ಭ ದಲ್ಲಿ. ಕಾರ್ಮಿಕವರ್ಗ ಪ್ರತಿಭಟನೆಯ ಮನಸ್ಸನ್ನು ರೂಢಿಸಿಕೊಳ್ಳುವಂಥ ಸಂದರ್ಭದಲ್ಲಿ. ಇದು ಬಹಳ ದೂರ ಹೋಗಬಾರದು, ಹೆಚ್ಚು ಗಂಭೀರವಾಗಬಾರದು ಹೆಚ್ಚು ನಷ್ಟವಾಗಬಾರದು ಎನ್ನುವ ಕಾಳಜಿ ಯಿಂದಲೇ ದಕ್ಷಿಣ ಕನ್ನಡ ಜಿಲ್ಲೆಯ ಎಲ್ಲಾ ೧೩ ಜನ ಕಾಂಗ್ರೆಸ್ ಶಾಸಕರುಗಳು ಮಾನ್ಯ ಮುಖ್ಯಮಂತ್ರಿ ಯವರನ್ನು ಕಂಡು ಮನವಿಯನ್ನು ಕೊಟ್ಟೆವು.

ಛೇರ್ಮನ್.—ಅದನ್ನೆಲ್ಲಾ ಹೇಳಿದ್ದಾರೆ. ಅದನ್ನು ಬಿಟ್ಟು ಹೇಳಿ.

ಶ್ರೀ. ಬಿ. ಎ. ಉಮರಬ್ಬ.—ತಾವು ಒಂದು ತೀರ್ಮಾನಕ್ಕೆ ಬರಬೇಕೆಂದು ಮಾನ್ಯ ಮುಖ್ಯಮಂತ್ರಿಯವರನ್ನು ಕೇಳಿಕೊಂಡೆವು. ಅವರ ಸಲಹೆ ಮೇರೆಗೆ ಮಾನ್ಯ ಕೈಗಾರಿಕಾ ಸಚಿವರನ್ನು ಕೂಡ ಭೇಟಿಯಾಗಿದ್ದವು. ಆ ಸಂದರ್ಭದಲ್ಲಿ ಅವರಿಂದ ಬಂದಂಥ ಮಾತು ಗಳನ್ನು ಕೇಳಿದಾಗ ಆಶಾಭಾವನೆ ಮೂಡಿತು. ನಾನು ದೆಹಲಿಗೆ ಹೋಗುತ್ತೇನೆ ಅಲ್ಲಿಂದ ಬಂದತಕ್ಷಣ ಸಂಬಂಧಪಟ್ಟ ಅಧಿಕಾರಿಗಳನ್ನು ಕರೆಯಿಸಿ ನಿಮ್ಮನ್ನು ಕರೆಯಿಸಿ ಮಾತನಾಡುತ್ತೇನೆಂದು ಹೇಳಿದಾಗ ಈ ವಿಚಾರದಲ್ಲಿ ಮಾನ್ಯ ಸಚಿವರಿಗೂ ಈ ಸಮಸ್ಯೆಯನ್ನು ತೀರ್ಮಾನ ಮಾಡುವುದರಲ್ಲಿ ಮುಕ್ತ ಮನಸ್ಸು ಇದೆ ಎಂಬುದು ಕಂಡು ಬಂದಿತು. ಅನಂತರ ಸಮಸ್ಯೆ ಜಡವಾಗತಕ್ಕ ದಾರಿಯಲ್ಲಿ ಬಂತು ಇದಕ್ಕೆ ಯಾವ ಒತ್ತಡ ಇರಬಹುದು ? ನನಗೆ ಗೊತ್ತಿರುವ ಹಾಗೆ. ಕಾರ್ಮಿಕರ ಸಂಘಟನೆ ನಾಯಕತ್ವ ವಹಿಸಿಕೊಳ್ಳುವಂಥ ಕೆಲವು ವ್ಯಕ್ತಿಗಳು ಪ್ರತಿಷ್ಠೆಯಾಗಿ ಇದನ್ನು ತೆಗೆದುಕೊಂಡು, ನಮಗೆ ಸ್ವಲ್ಪ ಸಮಯ ಕೊಡಿ, ಕಾರ್ಖಾನೆಯನ್ನು ಪ್ರಾರಂಭ ಮಾಡಿ ತೋರಿಸಿಕೊಡುತ್ತೇವೆಂದು ಹೇಳಿ ಕೈಗಾರಿಕಾ ಸಚಿವರನ್ನು ತಪ್ಪುದಾರಿಗೆ ಎಳೆಯುವಂಥ ಪ್ರಯತ್ನ ಮಾಡಿದ್ದಾರೆ. ಇದರ ಒಂದು ಪರಿಣಾಮವಾಗಿ ಅಲ್ಲಿ ಇವೊತ್ತಿನ ದಿವಸ ಕೋಟಿಗಟ್ಟಲೆ ನಷ್ಟವಾಗುತ್ತಿದೆ. ಸಾವಿರಾರು ಕಾರ್ಮಿಕರಿಗೆ ಇದರಿಂದ ಕಷ್ಟವಾಗಿದೆ. ಅಲ್ಲಿ ಈ ರೀತಿ ಆಗುವುದಕ್ಕೆ ಇದರ ಹಿಂದೆ ಏನೋ ಒಂದು ಹಿನ್ನೆಲೆ ಅಥವಾ ಬುನಾದಿ ಇದೆ. ಇಲ್ಲದಿದ್ದರೆ ಸರ್ಕಾರ ಈ ಕಾರ್ಖಾನೆಯ ಬಗ್ಗೆ ಇಷ್ಟೊಂದು ನಿರ್ಲಕ್ಷ್ಯ ಮನೋಭಾವನೆಯನ್ನು ತಾಳುತ್ತಿರಲಿಲ್ಲವೆಂದು ನಾನು ತಿಳಿದುಕೊಂಡಿದ್ದೇನೆ. ಬರುಬರುತ್ತಾ ಸರ್ಕಾರ ಈ ವಿಷಯವನ್ನು ಒಂದು ಪ್ರತಿಷ್ಠೆಯ ಪ್ರಶ್ನೆಯನ್ನಾಗಿ ತೆಗೆದುಕೊಂಡ ಕಾರಣ ದಿಂದ ಅಲ್ಲಿನ ರಸಗೊಬ್ಬರ ಕಾರ್ಖಾನೆ ಇಂತಹ ಒಂದು ಚಿಂತಾಜನಕ ಪರಿಸ್ಥಿತಿಗೆ ಬರುವಂತಾಯಿತು. ಈಗ ನಾವೆಲ್ಲರೂ ಈ ಕಾರ್ಖಾನೆಯ ಬಗ್ಗೆ ಪ್ರಮುಖವಾಗಿ ಯೋಚನೆ ಮಾಡಬೇಕಾಗಿರುವ ಅಂಶವೆಂದರೆ, ಇಂದು ನಮ್ಮ ರಾಜ್ಯದಲ್ಲಿ ಅತ್ಯಂತ ಭೀಕರವಾದಂಥ ಬರಗಾಲ ಪರಿಸ್ಥಿತಿ ಇದೆ, ನಮ್ಮ ರಾಜ್ಯದಲ್ಲಿ ಮತ್ತೆ ಸಾಕಷ್ಟು ಪ್ರಮಾಣದಲ್ಲಿ ಆಗದ ಕಾರಣ ವಿದ್ಯುತ್‌ನ ಉತ್ಪಾದನೆ ಸಹ ಕಡಿಮೆ ಆಗಿದೆ. ಇಂತಹ ಒಂದು ಪರಿಸ್ಥಿತಿಯಲ್ಲಿಯೂ ಸಹ ಮಂಗಳೂರಿನ ರಸಗೊಬ್ಬರ ಕಾರ್ಖಾನೆಯು ತಾನೇ ಸ್ವಯಂ ವಿದ್ಯುತ್ ಉತ್ಪಾದನೆಯನ್ನು ಮಾಡಿಕೊಂಡು ಕಾರ್ಖಾನೆಯನ್ನು ನಡೆಸಿಕೊಂಡು ಬರುತ್ತಿತ್ತು. ಆದರೆ ಅಲ್ಲಿ ಕಾರ್ಮಿಕರ ಮುಷ್ಕರ ದಿಂದಾಗಿ ವಿನಾಕಾರಣ ಅದು ನಷ್ಟಕ್ಕೆ ಒಳಗಾಗಿದೆ ಎಂದು ನಾನು ಭಾವಿಸಿಕೊಂಡಿದ್ದೇನೆ. ಅಲ್ಲಿ ಆಗು ತ್ತಿರುವ ನಷ್ಟಕ್ಕೆ ನಾವೆಲ್ಲರೂ ವಿಷಾದ ಪಡಬೇಕಾಗಿದೆ- ಈ ಕಾರ್ಖಾನೆಯ ವಿಚಾರದಲ್ಲಿ ಸರ್ಕಾರ ತಳೆದಂಥ ಮನೋಭಾವದ ಬಗ್ಗೆ ನೋಡಿದಾಗ ನನಗೆ ಷೇಕ್ಸ್‌ಪಿಯರ್‌ನ ಒಥೆಲೋ ನಾಟಕದ ಒಂದು ಮಾತು ಜ್ಞಾಪಕಕ್ಕೆ ಬರುತ್ತದೆ. "Preferment Goes by Letter and Affection. Not by old Gradation." ಎಂದು ಈ ನಾಟಕದಲ್ಲಿ ಬರುವಂತಹ ಮಾತಿನ ಅರ್ಥವೇನೆಂದರೆ ಯಾರು ಅತಿ ಸಾಮೀಪ್ಯ ಇದ್ದಾರೋ, ಯಾರು ನಮ್ಮವರು ಎನ್ನುವವರು ಇದ್ದಾರೋ ಅವರಿಗೆ ನಮ್ಮ ಒಲವು ಆಗುತ್ತದೆಯೋ ವಿನಹ ಯಾರಿಗೆ ಶಕ್ತಿ ಸಾಮರ್ಥ್ಯಗಳು ಇವೆಯೋ ಅಂತಹವರ ಒಂದು ಸಾಧನೆ ಗಳ ಮತ್ತು ಸಾಧಕಬಾಧಕಗಳ ಮೇಲೆ ನಮ್ಮ ಒಲವು ಹೋಗುವುದಿಲ್ಲ. ಆದ್ದರಿಂದ ಇಂತಹ ಒಂದು ಪರಿಸ್ಥಿತಿ ಈ ಮಂಗಳೂರಿನ ರಸಗೊಬ್ಬರ ಕಾರ್ಖಾನೆಗೆ ಬಂದಿದೆಯೋ ಏನೋ ಎಂದು ನನಗನ್ನಿಸುತ್ತದೆ. ಯಾವ ಒಂದು ರಸಗೊಬ್ಬರ ಕಾರ್ಖಾನೆಗೆ ಇವೊತ್ತಿನ ದಿವಸ ತತ್ತರಿಸುವಂತಹ ಪರಿಸ್ಥಿತಿ ಬಂದಿದೆಯೋ ಆ ಕಾರ್ಖಾನೆಯ ಸಮೀಪದಲ್ಲಿಯೇ ಇರುವಂತಹ ನವಮಂಗಳೂರು ಬಂದರಿನಲ್ಲಿ ಕೆಲವು ತಿಂಗಳುಗಳ ಹಿಂದೆ ಅಲ್ಲಿನ ಕಾರ್ಮಿಕರಲ್ಲಿ ಅಶಾಂತಿ ಮೂಡಿದಾಗ ಅಲ್ಲಿಗೆ ಅನೇಕ ಜನ ಕಾರ್ಮಿಕ ನಾಯಕರುಗಳು ಹೋಗಿ ಮಾತನಾಡಿದರು. ಅದರ ಜೊತೆಗೆ ಆಗಿನ ಮುಖ್ಯಮಂತ್ರಿಗಳು ಸಹ ಅಲ್ಲಿಗೆ ಹೋಗಿ ಕಾರ್ಮಿಕರನ್ನು ಉದ್ದೇಶಿಸಿ ಮಾತನಾಡಿದರು. ಕಾರ್ಮಿಕರಲ್ಲಿರುವ ಅಶಾಂತಿ ದೂರವಾಗಬೇಕೆಂದು ಕೇಳಿಕೊಂಡರು. ಆದರೆ ಇವೊತ್ತು ಅಲ್ಲಿನ ರಸಗೊಬ್ಬರದ ಕಾರ್ಖಾನೆ ಕಾರ್ಮಿಕರು ಕಳೆದ ಎರಡು ತಿಂಗಳುಗಳಿಂದ ಮುಷ್ಕರ ಮಾಡುತ್ತಿದ್ದರೂ ಸಹ ಮತ್ತು ಅಲ್ಲಿ ಗಂಭೀರ ಪರಿಸ್ಥಿತಿ ಉಂಟಾಗಿದ್ದರೂ ಸಹ ಆ ಜಿಲ್ಲೆಯ ಉಸ್ತುವಾರಿ ಸಚಿವರಾದಂಥ ಶ್ರೀ ಅಮರನಾಥಶೆಟ್ಟರು ಒಂದು ಸೌಜನ್ಯಕ್ಕೋಸ್ಕರ

ವಾದರೂ ಅಲ್ಲಿನ ಕಾರ್ಮಿಕರನ್ನು ಭೇಟಿ ಮಾಡಿ ಪರಿಸ್ಥಿತಿ ಏನಿದೆ ಎಂದು ಕಾರ್ಮಿಕರನ್ನು ಕೇಳಲಿಲ್ಲ ? ಕಾರ್ಮಿಕರು ಅಲ್ಲಿ ಕಳೆದ ೬೪–೬೫ ದಿನಗಳಿಂದಲೂ ಚಳುವಳಿ ಮಾಡುತ್ತಿದ್ದಾರೆ. ನಮ್ಮ ಜಿಲ್ಲೆಯ ಮಂತ್ರಿಗಳು ಅಲ್ಲಿನ ಕಾರ್ಮಿಕರನ್ನು ಭೇಟಿ ಮಾಡದಿದ್ದ ಬಗ್ಗೆ ದುಃಖ ಪಡಬೇಕೋ ಅಥವಾ ಖೇದ ಪಡಬೇಕೋ ಗೊತ್ತಿಲ್ಲ. ಈ ಮಂತ್ರಿಗಳು ನಮ್ಮ ಜಿಲ್ಲೆಯಲ್ಲಿ ಪ್ರವಾಸ ಮಾಡುವಾಗ ದಿನಕ್ಕೆ ಮೂರು ಹೇಳಿಕೆಗಳನ್ನು ಸರ್ಕಾರದ ಪರವಾಗಿ ನೀಡುತ್ತಾರೆ. ನಮ್ಮ ಜಿಲ್ಲೆಯ ಉಸ್ತುವಾರಿ ಮಂತ್ರಿಯಾದ ಇವರು ಕಾರ್ಮಿಕರು ಚಳುವಳಿ ಮಾಡುತ್ತಿರುವ ರಸ್ತೆಯಲ್ಲಿಯೇ ಓಡಾಡುತ್ತಿದ್ದರೂ ಸಹ ಕಾರ್ಮಿಕರನ್ನು ಮಾತ್ರ ಒಮ್ಮೆಯೂ ಭೇಟಿ ಮಾಡಲಿಲ್ಲ. ಇದನ್ನೆಲ್ಲಾ ನೋಡಿದಾಗ ಇದರಲ್ಲಿ ಒಂದು ರೀತಿಯ ರಾಜಕೀಯ ಮಿಳಿತವಾಗಿರುವುದು ಕಂಡುಬರುತ್ತದೆ. ಯಾರಿಗೋ ಉದ್ದೇಶಪೂರ್ವಕವಾಗಿ ಸಹಕಾರ ನೀಡಬೇಕೆಂಬ ಭಾವನೆಯಿಂದ ಅಲ್ಲಿ ಈ ಒಂದು ಪರಿಸ್ಥಿತಿ ಉಂಟಾಗಿದೆ ಎಂದು ನಾನು ಹೇಳುತ್ತೇನೆ. ಈ ರಸಗೊಬ್ಬರದ ಕಾರ್ಖಾನೆ ಬಗ್ಗೆ ಒಂದು ಸ್ಪಷ್ಟವಾದಂಥ ಚಿತ್ರ ಈಗ ಸರ್ಕಾರದ ಮುಂದಿರಬಹುದು ದೆಂದು ನಾನು ತಿಳಿದುಕೊಂಡಿದ್ದೇನೆ. ಅಲ್ಲಿ ಈಗ ೫ ಜನ ನೌಕರರು ಸಸ್ಪೆಂಡ್ ಆಗಿದ್ದಾರೆ. ಅಲ್ಲಿ ಒಂದು ವರ್ಷದ ಹಿಂದೆ ಶ್ರೀ ಅಡ್ಯಂತಾಯನವರು ಇಂಟಕ್ ನೇತೃತ್ವದಲ್ಲಿರುವಂತಹ ಕಾರ್ಮಿಕರ ಗುಂಪಿನ ನಾಯಕರಾಗಿರಲಿಲ್ಲ. ಆದರೆ ಅದಕ್ಕೂ ಮೊದಲು ಇವರ ಒಂದು ನಾಯಕತ್ವದಲ್ಲಿ ಕಾರ್ಮಿಕ ಸಂಘಟನೆ ಇತ್ತು. ಆದರೆ ಒಂದು ಸಂದರ್ಭದಲ್ಲಿ ಅಲ್ಲಿನ ಕಾರ್ಮಿಕವರ್ಗ ಶ್ರೀ ಅಡ್ಯಂತಯ್ಯನವರ ನಾಯಕತ್ವದ ಬಗ್ಗೆ ತಮ್ಮ ಒಲವನ್ನು ತೋರಿಸದೆ ಬೇರೆಯವರ ನಾಯಕತ್ವದ ಬಗ್ಗೆ ತಮ್ಮ ಒಲವು ಇದೆ ಎಂದು ತೋರಿಸಿಕೊಂಡಾಗ ಇವರು ತಮ್ಮ ಸಂಗಡಿಗರೊಡನೆ ಹಿಂದಕ್ಕೆ ಬಂದರೆ ಹೊರತು ತಾವೇ ಯಾವಾಗಲೂ ಕಾರ್ಮಿಕರ ನಾಯಕನಾಗಿರಬೇಕು, ಅನಭಿಷಕ್ತ ದೊರೆಯಾಗಿ ಮೆರೆಯಬೇಕು ಎಂಬತಕ್ಕಂಥ ಪ್ರತಿಷ್ಠೆಯನ್ನು ಇವರು ತೋರಿಸುವುದಕ್ಕೆ ಹೋಗಲಿಲ್ಲ. ಇವರ ನಂತರ ಯಾರು ಆ ಕಾರ್ಮಿಕರ ಮುಖಂಡರಾದರೋ, ಆ ಮುಖಂಡರ ಬಗ್ಗೆ ಅಲ್ಲಿನ ಕಾರ್ಮಿಕರಿಗೆ ಈಗ ಒಂದು ರೀತಿಯ ಭ್ರಮನಿರಶನ ಉಂಟಾಗಿದೆ. ಈಗ ಅಲ್ಲಿನ ಕಾರ್ಮಿಕರು ಶ್ರೀ ಅಡ್ಯಂತಯ್ಯನವರೇ ನಮ್ಮ ನಾಯಕರಾಗಿರಬೇಕೆಂದು ಕೇಳುತ್ತಿದ್ದಾರೆ. ಇದಕ್ಕೆ ಯಾರು ಉತ್ತರ ಹೇಳಬೇಕು ? ಶ್ರೀ ಅಡ್ಯಂತಾಯ್ಯನವರು ತಾವೇ ಇಂಟಕ್‌ನ ನಾಯಕರೆಂದು ಸ್ವಯಂ ಆಗಿ ಘೋಷಣೆ ಮಾಡಿಕೊಂಡಿಲ್ಲ. ಇವರು ಅಲ್ಲಿ ಹಾಜರಿರದೇ ಇರುವಾಗ ಅಂದರೆ ಇವರು ಅಲ್ಲಿ ಉಪಸ್ಥಿತರಿರದೇ ಇರುವಾಗ ಇವರ ಗೈರು ಹಾಜರಿಯಲ್ಲಿ ಅಲ್ಲಿನ ಕಾರ್ಮಿಕರು ಇವರ ಒಂದು ಅನುಪಸ್ಥಿತಿಯಲ್ಲಿ ಇವರೇ ತಮ್ಮ ಸಂಘದ ಅಧ್ಯಕ್ಷರಾಗರಾಗಬೇಕು ಮತ್ತು ನಮ್ಮ ನಾಯಕರಾಗಬೇಕೆಂದು ಕೇಳಿಕೊಂಡಿದ್ದಾರೆ. ಇಂತಹ ಒಂದು ಸಂದರ್ಭವಿದ್ದರೂ ಸಹ ಇವರು ನಾನೇ ಅವರ ನಾಯಕ ಎಂಬ ಅಬ್ಬರದ ಮಾತನ್ನಾಗಲೀ ಇಲ್ಲವೇ ರಭಸದ ಮಾತನ್ನಾಗಲೀ ಆಡಿ ತೋರಿಸುವುದಕ್ಕೆ ಹೋಗಿಲ್ಲ. ಕ್ಯಾಲುಕಲೇಟರ್‌ನಲ್ಲಿ ಲೆಕ್ಕಹಾಕಿದ ಪ್ರಕಾರ ಅಲ್ಲಿನ ಒಟ್ಟು ಕಾರ್ಮಿಕರ ಪೈಕಿ ಶೇಕಡಾ ೯೧.೮ ರಷ್ಟು ಕಾರ್ಮಿಕರು ಇಂಟಕ್‌ನ ಸದಸರಾಗಿದ್ದಾರೆ. ೮.೨ ರಷ್ಟು ಕಾರ್ಮಿಕರು ಮಾತ್ರ ಎಚ್. ಎಮ್. ಎಸ್. ನ ಸದಸ್ಯರಾಗಿದ್ದಾರೆ. ಈಗ ಮತ್ತೆ ಹೊಸದಾಗಿ ಲೆಕ್ಕ ಹಾಕಿದರೆ ಇಂಟಕ್‌ನ ಸದಸ್ಯರ ಸಂಖ್ಯೆ ಇನ್ನೂ ಹೆಚ್ಚಾಗಬಹುದು.

೨ ೩೦ ಪಿ.ಎಂ.

ಆದರೆ ಯಾವಾಗ ಈ ನಾಯಕತ್ವ ಬದಲಾವಣೆಯಾಯಿತೋ ಇದನ್ನು ತಮ್ಮ ಮಾಂಸ ಖಂಡಗಳ ಶಕ್ತಿಯಿಂದ ಉಳಿಸಿಕೊಳ್ಳುತ್ತೇವೆ ಎನ್ನುವಂಥ ಪ್ರಯತ್ನ ಇವತ್ತು ಸರ್ಕಾರ ಮಾಡುತ್ತಾ ಇರುವಂತಹ ಯಾವುದು ಪಕ್ಷ ಇದೆ ಈ ಪಕ್ಷದ ಕೆಲವು ಮಂದಿ ಮಾಡಿದ್ದಾರೆ ಎಂದರೆ ಇದು ದುಃಖದ ವಿಚಾರ.

(ಅಧ್ಯಕ್ಷರು ತಮ್ಮ ಪೀಠವನ್ನಲಂಕರಿಸಿದರು)

ಕೇವಲ ಹೊರಗಡೆ ಕಾರ್ಮಿಕರನ್ನು ಹೊಡೆದದ್ದು ಅಲ್ಲ, ಅಲ್ಲಿ ಒಳಗಡೆ ಹೋಗಿ ಕಾರ್ಮಿಕರನ್ನು ಹೊಡೆದು ಬೆದರಿಸುವ ವಿಚಾರದ ಬಗ್ಗೆ ಈಗಾಗಲೇ ಚರ್ಚೆಯಾಗಿದೆ. ಈ ರೀತಿ ಬೆದರಿಕೆ ಒಡ್ಡುವಂಥ ಸಂದರ್ಭದಲ್ಲಿ ಕಾರ್ಮಿಕರು ಒಳಗೆ ಹೋಗಲಿಕ್ಕೆ ಸಾಧ್ಯವೇ ಇಲ್ಲ ಎನ್ನುವಂಥ ಪರಿಸ್ಥಿತಿ ಬಂದಾಗ ಆ ಕಾರ್ಖಾನೆಯಿಂದ ಹೊರಗೆ ಉಳಿಯುವಂಥ ಪರಿಸ್ಥಿತಿ ಬಂತೇ ವಿನಹ ಇನ್ನಾವುದೇ ರೀತಿಯಿಂದ ಅಲ್ಲ. ಹಿಂದೆ ೫ ಜನರು ಸಸ್ಪೆಂಡ್ ಆದದ್ದು ಅದರ ಬಗ್ಗೆ ಇದು ಕ್ರಮವೋ? ಇದು ಕಾರಣವಾಗುವುದಾದರೆ ಒಂದು ವರ್ಷ ಕಾಯಬೇಕಾಗಿರಲಿಲ್ಲ, ಹಿಂದೆಯೇ ಕೆಲಸ ನಿಲ್ಲಿಸಲಿಕ್ಕೆ ಸಾಧ್ಯವಿತ್ತು. ಇದು ಕಾರಣ ಆಗಲಿಲ್ಲ. ಅಲ್ಲಿ ಬಂದಂತಹ ಭಯಭೀತ ವಾತಾವರಣ ಏನಿದೆ, ಅಲ್ಲಿ ಬಂದಂತಹ ಒಂದು ರೀತಿ ಬೆದರಿಕೆ ಹಾಕುವಂಥ ವಾತಾವರಣ ಏನಿದೆ, ಇದು ಕಾರ್ಮಿಕರನ್ನು ಹೆಚ್ಚು ಪ್ರತಿಭಟನೆ ಮಾಡುವಂಥ ಪರಿಸ್ಥಿತಿಗೆ ಕೊಂಡುಹೋಯಿತು. ಅದನ್ನು ಮಾಡುತ್ತಾ ಮಾಡುತ್ತಾ ಬಂದು, ಅನಂತರ ವಿಕೋಪಕ್ಕೆ ಹೋಯಿತು, ಕೇವಲ ಒಂದು ಪ್ರತಿಭಟನೆಯಾಗಿ ಉಳಿಯಲಿಲ್ಲ, ಕೆಲಸವನ್ನು ನಿಲ್ಲುವಂಥ

ಪರಿಸ್ಥಿತಿ ಆಯಿತು. ಅನಂತರ ಉಪವಾಸ ಮಾಡುವಂಥ ಪರಿಸ್ಥಿತಿ ಆಯಿತು. ಅನಂತರ ಆಮರಣ ಉಪವಾಸ ಮಾಡುವಂಥ ಪರಿಸ್ಥಿತಿಯಾಗಿ ಸುಮಾರು ೮ ದಿನಗಳು, ೯ ದಿನಗಳು ಕಳೆದ ನಂತರ ನಾವು ಇವತ್ತು ಇದನ್ನು ಚರ್ಚೆ ಮಾಡುತ್ತಾ ಇದ್ದೇವೆ. ಮಾನ್ಯ ಕಾರ್ಮಿಕ ಸಚಿವರು ಒಂದು ಮಾತು ಹೇಳಿದರು. ನಿಮ್ಮದು ಡಿಮ್ಯಾಂಡ್ಸ್ ಏನು ಎಂದು ಹೇಳಲಿಲ್ಲ ಎಂದು. You specifically state your demands ಎಂದು ಹೇಳಿದರು. ಡಿಮ್ಯಾಂಡ್ ಯಾವುದು ಎಂದು ಹೇಳುವುದು ಒಂದು ಕಡೆ ಇದ್ದರೆ ಈ ಪರಿಸ್ಥಿತಿಗೆ ಕಾರಣ ಏನು ಎಂದು ಅದನ್ನು ಪರಿಶೀಲಿಸುವಂತಹ ಜವಾಬ್ದಾರಿ ಮಾನ್ಯ ಕಾರ್ಮಿಕ ಸಚಿವರಿಗೆ ಇತ್ತು ಎಂದು ನಾನು ಭಾವಿಸಿಕೊಂಡಿದ್ದೇನೆ. ಇಲ್ಲದೇ ಇದ್ದರೆ ಅವರು ಹೇಳಿದಂತಹ ಡಿಮ್ಯಾಂಡ್ಸ್ ಹೇಳಲಿಲ್ಲ ಎನ್ನುವಂಥ ಮಾತು ಎಷ್ಟು ಬಾಲಿಶ ಆಗುತ್ತದೆಂದರೆ, ತಾಯಿ ಮಗು ಅತ್ತಿತು ಅಷ್ಟೆ, ಆದರೆ ಹಾಲು ಕೇಳಲಿಲ್ಲ ಎಂದು ಹೇಳಿ ಹೊಟ್ಟೆಗೆ ಹಾಕದೇ ಮಗುವನ್ನು ಹಾಗೆಯೇ ಮಲಗಿಸಿದ ಹಾಗೆ ಅಲ್ಲಿ ಏನೋ ಆಗುತ್ತಿದೆ ಡಿಮ್ಯಾಂಡ್ಸ್ ಏನು ಎಂದು ಹೇಳಲಿಲ್ಲವಲ್ಲ ಎಂದು ಈ ಒಂದು ಮಟ್ಟದಲ್ಲಿ ನಿಮ್ಮ ವಿವೇಚನೆಯನ್ನು ತೊಡಗಿಸುವುದು ಸರಿ ಇಲ್ಲ. ಆದುದರಿಂದ ಇನ್ನು ಯಾರೂ ತಪ್ಪು ಗ್ರಹಿಕೆಗಳನ್ನು ಈ ಬಗ್ಗೆ ಮಾಡಬಾರದು. ಇವತ್ತು ಮುಖ್ಯವಾಗಿ ಮಾನ್ಯ ಅಧ್ಯಕ್ಷರವರು ಒಂದು ಮಾತು ಹೇಳಿದ್ದಾರೆ. ನವ ಮಂಗಳೂರು ಬಂದರಿನಲ್ಲಿರುವಂಥಾದ್ದರಲ್ಲಿ ಮೆಜಾರಿಟಿ ಯಾರಿಗೆ ಇದೆ ಎನ್ನುವುದರ ಬಗ್ಗೆ ನಿಮ್ಮದೇ ಆದ ರೀತಿಯಲ್ಲಿ ಪರಿಶೀಲನೆಮಾಡಿ ಯಾರಿಗೆ ಮೆಜಾರಿಟಿ ಇದೆಯೋ ಅವರಿಗೆ ರೆಕಗ್ನಿಷನ್ ಕೊಡಬೇಕು. ಇದು ಮಾತ್ರವಲ್ಲ ಅವರು ಅದನ್ನು ತನ್ನ ಹಕ್ಕಾಗಿ ಪ್ರತಿಪಾದಿಸುವುದರಲ್ಲಿ ಏನೂ ತಪ್ಪಿಲ್ಲ ಎಂದು ನಾನು ಭಾವಿಸಿಕೊಂಡಿದ್ದೇನೆ. ಹಾಗೆಯೇ ರಸಗೊಬ್ಬರ ಕಾರ್ಖಾನೆಯಲ್ಲಿ ೫ ಜನರನ್ನು ಸಸ್ಪೆಂಡ್ ಮಾಡಿ ಮೊನ್ನೆ ಗಲಭೆಯಾದಂಥ ಸಂದರ್ಭದಲ್ಲಿ, ಗೊಂದಲದಲ್ಲಿ ಅವರನ್ನು ಟರ್ಮಿನೇಟ್ ಮಾಡಿದ್ದಾರೆ ಅಂದರೆ ಉದ್ದೇಶಪೂರ್ವಕವಾಗಿ ಮಾಡಿದ್ದಾರೆ ಎನ್ನುವುದನ್ನು ಬಹಳ ಸೂಚ್ಯವಾಗಿ ಮಾನ್ಯ ಮೊಯಿಲಿಯವರು ನಿನ್ನೆ ಹೇಳಿದ್ದಾರೆ. ಒಂದು ಕಡೆ, ಹಿಂದೆ ಆ ಕಾರ್ಮಿಕರ ನಾಯಕತ್ವ ವಹಿಸಿಕೊಂಡ ಜನ, ನಾವು ಅವರನ್ನು ವಾಪಸ್ ತೆಗೆದುಕೊಳ್ಳುವ ಹಾಗೆ ಮಾಡುತ್ತಿದ್ದೆವು, ಕೈಗೆ ಬಂದ ತುತ್ತು ಬಾಯಿಗೆ ಬರದಿದ್ದ ಹಾಗೆ ಅವರೇ ಮಾಡಿಕೊಂಡರು ಇವತ್ತು ಅಧ್ಯಕ್ಷರವರನ್ನು ಆಯ್ಕೆಮಾಡಿ ಎನ್ನುವಂಥ ಹೇಳಿಕೆ ಕೊಟ್ಟದ್ದು ಮಾತ್ರವಲ್ಲ, ಇದೇ ಮಂಗಳೂರು ಕೆಮಿಕಲ್ಸ್ ಅಂಡ್ ಫರ್ಟಿಲೈಸರ್ ಕಾರ್ಖಾನೆಯ ಜವಾಬ್ದಾರಿಯುತವಾದಂಥ ಅಧಿಕಾರಿ ಒಬ್ಬ ಹೇಳಿಕೆ ಕೊಟ್ಟ ಮೇಲೆ ನಾವು ಈ ೫ ಮಂದಿಯನ್ನು ಕೆಲಸಕ್ಕೆ ತೆಗೆದುಕೊಳ್ಳುವಂಥಾದ್ದು, ಅವರ ಮೇಲೆ ಇರುವ ಅಮಾನತ್ತು ರದ್ದು ಮಾಡುವಂತಹ ಯೋಚನೆ ಮಾಡುತ್ತಾ ಇದ್ದೇವೆ. ಮಾಡಿ ಮತ್ತೆ ಅವರನ್ನು ಕೆಲಸಕ್ಕೆ ಸೇರಿಸಿಕೊಳ್ಳುವುದರಲ್ಲಿ ನಾವು ತೊಡಗಿದ್ದೇವೆ ಎಂದು ಹಿಂದೆ ಹೇಳಿಕೆ ಕೊಟ್ಟವರು ಈಗ ಸಸ್ಪೆಂಡ್ ಮಾಡಿದವರನ್ನು ಕೆಲಸಕ್ಕೆ ತೆಗೆದುಕೊಳ್ಳುವುದು ಬಿಟ್ಟು ಸಸ್ಪೆಷನ್‌ನಲ್ಲಿದ್ದವರನ್ನು ಟರ್ಮಿನೇಟ್ ಮಾಡುವಂಥ ಪರಿಸ್ಥಿತಿಗೆ ಹೋಗಿದ್ದಾರೆಂದರೆ ರಾಜಕೀಯವಾದಂಥ ಒತ್ತಡದಿಂದ ಮಾತ್ರ ಅಧಿಕಾರವರ್ಗ ಮಾಡಿದ್ದೇ ಹೊರತು ಸ್ವಯಂಪ್ರೇರಿತರಾಗಿ ಇದನ್ನು ಮಾಡಿದ್ದಲ್ಲ ಎಂದು ಸ್ಪಷ್ಟವಾಗುತ್ತದೆ. ನಂತರ ಕೆಲವರನ್ನು ಸಸ್ಪೆಂಡ್ ಮಾಡುವಂಥಾದ್ದು ಆಯಿತು. They have instigated for stoppage of work, ಇನ್‌ಸ್ಟಿಗೇಷನ್ ಎಂದು, ಇಬ್ಬರು, ಮೂರು ಜನ ಇನ್‌ಸ್ಟಿಗೇಷನ್ ಮಾಡಿಕೊಂಡು ಎಲ್ಲಾ ಕಾರ್ಮಿಕರನ್ನು ಹೊರಗಡೆ ಕೂಡಿಸಲಿಕ್ಕೆ ಸಾಧ್ಯವಾಗುವುದಿಲ್ಲ. ಸ್ವಯಂಪ್ರೇರಿತರಾಗಿ ಬಾಹ್ಯ ಶಕ್ತಿಗಳ ಗೂಂಡಾಗಿರಿಯನ್ನು ಪ್ರತಿಭಟಿಸುವಂತಹ ಪ್ರಯತ್ನವನ್ನು ಅಲ್ಲಿರುವಂತಹ ಕಾರ್ಮಿಕರು ಮಾಡಿದ್ದಾರೆ. ಇದು ಕೇವಲ ಮಂಗಳೂರು ರಸಗೊಬ್ಬರ ಕಾರ್ಖಾನೆಯಲ್ಲಿ, ನವ ಮಂಗಳೂರು ಬಂದರಿನ ಪ್ರದೇಶದಲ್ಲಿ ಮಾತ್ರವಲ್ಲ ಬೆಂಗಳೂರಿನಲ್ಲಿ ಯಾರು ಕಛೇರಿಯಲ್ಲಿ ಕೆಲಸ ಮಾಡುತ್ತಿದ್ದಾರೋ ಅವರೂ ಪ್ರತಿಭಟನೆ ವ್ಯಕ್ತಪಡಿಸಿದ್ದಾರೆ. ಮಿಂಚಿ ಹೋದದಕ್ಕೆ ಚಿಂತಿಸಿ ಫಲವೇನು ಎಂಬ ಹಿರಿಯರ ಮಾತನ್ನು ಇವತ್ತು ನೆನಪಿಸಿಕೊಳ್ಳಬೇಕಾಗುತ್ತದೆ. ಆದುದರಿಂದ ಈ ಒಂದು ಈ ಹಂತಕ್ಕೆ ತಲುಪಿಯಾರು ಆಮರಣ ಉಪವಾಸ ಮಾಡಿಸಾವಿನ ದವಡೆಗೆ ಸಿಗುವಂತಹ ೫ ಮಂದಿ ಕಾರ್ಮಿಕರನ್ನು ಉಳಿಸುವಂತಹ ಒಂದು ಪ್ರಯತ್ನ ಆಗಿದೆ ಎಂದು ಹೇಳುತ್ತಾರೋ ಆ ಪ್ರಯತ್ನವನ್ನು ನಾವು ಮುಕ್ತ ಕಂಠದಿಂದ ಇಲ್ಲಿ ಸ್ವಾಗತಮಾಡಿದ್ದೇವೆ.

ಇನ್ನು ಮುಂದೆ ಅನೇಕ ಪ್ರಶ್ನೆಗಳು ಉದ್ಭವವಾಗಬಹುದು. ಅಲ್ಲೂ ಸಹ ನಮ್ಮ, ನಿಮ್ಮದೇ ಆದ ಪ್ರತಿಷ್ಠೆ ಎನ್ನುವುದನ್ನು ಮುಂದಿಟ್ಟುಕೊಳ್ಳುವ ಬದಲು ಅಥವಾ ಕೆಲವು ವ್ಯಕ್ತಿಗಳ ತಮ್ಮದೇ ಆದ ಒತ್ತಡಕ್ಕೆ ಸಿಕ್ಕುವ ಬದಲು ಮುಕ್ತವಾಗಿ ಅದನ್ನು ವಿಮರ್ಶೆ ಮಾಡಬೇಕಾಗುತ್ತದೆ. ಅಮಾನತ್ತು ಆದಂತಹ ಕಾರ್ಮಿಕರುಗಳನ್ನು ಪುನಃ ವಾಪಸ್ ತೆಗೆದುಕೊಳ್ಳುವುದರ ಜೊತೆಗೆ ಸರ್ಕಾರದಿಂದ ಮತ್ತು ಸರ್ಕಾರದ ಪ್ರತಿನಿಧಿಗಳಾದ ಕಾರ್ಮಿಕ ಸಚಿವರಿಂದ ಮತ್ತು ಕೈಗಾರಿಕಾ ಸಚಿವರು ಮುಕ್ತ ಮನಸ್ಸಿನಿಂದ ಒಂದು ರೀತಿಯಲ್ಲಿ ತೀರ್ಮಾನ ಕೈಗೊಳ್ಳಬಹುದು ಅಥವಾ ಕೈಗೊಳ್ಳಬೇಕು. ಕಾರ್ಮಿಕ ವರ್ಗ

ದುಡಿಯದೇ ಇರತಕ್ಕಂಥ ಪರಿಸ್ಥಿತಿಯಿಂದಾಗಿ ಅಲ್ಲಿ 9 ತಿಂಗಳು ಯಾವ ಸಂಬಳದ ವ್ಯವಸ್ಥೆಯೂ ದೊರಕಲಿಲ್ಲ. ಇದನ್ನು ಕತ್ತರಿಸುವುದಕ್ಕೆ ಬದಲು ಅವರಿಗೆ ಸಂಬಳ ಸಿಕ್ಕುವ ಪ್ರಯತ್ನ ಮಾಡತಕ್ಕದ್ದು ತಮ್ಮ ಕರ್ತವ್ಯವಾಗಿದೆ ಎಂದು ನಾನು ಈ ಸದನದ ಮೂಲಕ ಒತ್ತಾಯಪೂರ್ವಕವಾಗಿ ಹೇಳುತ್ತೇನೆ. ನಾನು ಆಗಲೇ ಹೇಳಿದ ರೀತಿಯಲ್ಲಿ ಬಹು ಸಂಖ್ಯೆಯಲ್ಲಿ ನಾಯಕರು ಎಂದು ಹೇಳುತ್ತಾರೆ. ಒಂದು ಸಂಘಟನೆ ಅವರು ಮಾಡಿಕೊಂಡಿದ್ದಾರೆ. ಅಂಥಹ ಸಂಘಟನೆಗೆ ಅವಕಾಶ ಕೊಟ್ಟು ಆ ಮೂಲಕವೆ ಆ ಕಾರ್ಮಿಕರ ವಿವಾದಗಳನ್ನು ಪರಿಹಾರ ಮಾಡುವುದಕ್ಕೆ ಪ್ರಯತ್ನ ಮಾಡತಕ್ಕದ್ದು ಮತ್ತು ಇದರ ಬಗ್ಗೆ ಮುಕ್ತ ಮನಸ್ಸಿನ ಪ್ರಯತ್ನವನ್ನು ಮಾನ್ಯ ಕೈಗಾರಿಕಾ ಸಚಿವರು ಹಾಗೂ ಕಾರ್ಮಿಕ ಸಚಿವರು ಒಗ್ಗೂಡಿ ಮಾಡಬೇಕು. ನಮ್ಮ ನಾಯಕರ ಜೊತೆ ಚರ್ಚೆ ಮಾಡಿ ಒಂದು ನ್ಯಾಯಯುತವಾದ, ಶಾಶ್ವತವಾದ ತೀರ್ಪು ಮಾಡಬೇಕು ಎಂದು ಈ ಸದನದ ಮೂಲಕ ನಾನು ಹೇಳುತ್ತೇನೆ. ಇಲ್ಲದಿದ್ದರೆ ಕಷ್ಟಕ್ಕೆ ಸಿಕ್ಕಿರತಕ್ಕ ಅವರು ಇನ್ನಷ್ಟು ಕಷ್ಟಕ್ಕೆ ಹೋಗಬಹುದು. ಈಗ ನನಗೆ ತಿಳುವಳಿಕೆ ಬಂದ ಹಾಗೆ ಹ್ಯಾಂಡ್‌ಲೂಮ್ ಡೆವಲಪ್‌ಮೆಂಟ್ ಕೆಳಗೆ ಕರ್ನಾಟಕ ಹ್ಯಾಂಡ್‌ಲೂಂ ಡೆವಲಪ್‌ಮೆಂಟ್ ಕಾರ್ಪೊರೇಷನ್ ಇರಬಹುದು. ಸರ್ಕಾರದ ಆರ್ಥಿಕ ಪರಿಸ್ಥಿತಿ ಇದೆಯೆಂದು ಅಲ್ಲಿ ನೌಕರರಿಗೆ ಸಂಬಳ ಕೊಟ್ಟಿಲ್ಲ. ನನಗೆ ತಿಳಿದಿರುವ ಹಾಗೆ ಹ್ಯಾಂಡ್‌ಲೂಂ ಕಾರ್ಪೊರೇಷನ್‌ನವರು ಶಾಲೆಯ ಮಕ್ಕಳಿಗೆ ಯೂನಿಫಾರಂ ಕೊಡುತ್ತಿದ್ದಾರೆ. ಅಲ್ಲಿಂದ ತಂದಂತಹ ಬಟ್ಟೆ ಹಣವನ್ನು ಕೂಡ ಕೊಟ್ಟಿಲ್ಲ. ಇದು ನನ್ನ ಭಾವನೆ ಅಷ್ಟು ಮಾತ್ರವಲ್ಲ, ನನಗೆ ತಿಳಿದಿರುವ ವಿಚಾರ. ಈ ಯೂನಿಫಾರಂ ಹೊಲೆಯಲು ಸ್ಟಿಚಿಂಗ್ ಮತ್ತು ಕಟ್ಟಿಂಗ್‌ಗೆ ಕಂಟ್ರಾಕ್ಟ್ ಕೊಟ್ಟಿದ್ದಾರೆ. ಅವರಿಗೆ ಕೂಡ ಲಕ್ಷಾಂತರ ರೂಪಾಯಿಗಳ ಬಾಕಿ ಇಟ್ಟಿದ್ದಾರೆ. ಇವೊತ್ತು ಆರ್ಥಿಕ ಪರಿಸ್ಥಿತಿ ಅಷ್ಟು ಕೆಟ್ಟದಾಗಿ ಹೋಗಿದೆ. ಮಾನ್ಯ ಜೆ. ಹೆಚ್. ಪಟೇಲ್ ಕಷ್ಟಕ್ಕೆ ಇಟ್ಟಿದ್ದಾರೆಂದು ನಾನು ಹೇಳುವುದಕ್ಕೆ ಹೋಗುವುದಿಲ್ಲ. ಅನೇಕ ಕಾರಣಗಳಿಂದ ಕಾರ್ಖಾನೆಗಳು ಅಷ್ಟು ಕಷ್ಟಕ್ಕೆ ಹೋಗಿರುವಾಗ ಇನ್ನು ನೀವು "ಮಾರ್ಗದಲ್ಲಿ ಹೋಗುತ್ತಿರುವ ಮಾರಿಯನ್ನು ಮನೆಯಲ್ಲಿ ಬರುವಹಾಗೆ ಬರುವುದಕ್ಕೆ ಪ್ರಯತ್ನ ಮಾಡಬೇಡಿ" ಎಂದು ಹೇಳುತ್ತೇನೆ. ಇದನ್ನು ಬಿಟ್ಟು ಪರಿಸ್ಥಿತಿ ಸುಧಾರಣೆ ಆಗಬೇಕು. ಮುಕ್ತ ಮನಸ್ಸಿನಿಂದ ಇದರ ಬಗ್ಗೆ ಚರ್ಚೆ ಆಗಬೇಕು. • ಅಭಿಪ್ರಾಯಗಳು ವಿನಿಯೋಗ ಆಗಬೇಕು. ಮುಕ್ತ ಮನಸ್ಸಿನಿಂದ ತೀರ್ಮಾನ ಆದರೆ ಮಾತ್ರ ಇದನ್ನು ಬಗೆಹರಿಸಲು ಸಾಧ್ಯ. ಆಗ ಏನಿಲ್ಲ ಎಂದು ಹೇಳುವುದಾದರೂ ಆರ್ಥಿಕ ಸ್ಥಿತಿ ಸುಧಾರಣೆ ಆಗಬಹುದು. ಇಲ್ಲದಿದ್ದರೆ ಇವೊತ್ತು "ಬಾಣಲೆಗೆ ಇರುವ ವಸ್ತು ಬೆಂಕಿಗೆ ಬೀಳುವ" ಹಾಗೆ ಪರಿಸ್ಥಿತಿ ಆಗಬಾರದು. ಸರ್ಕಾರ ಕಷ್ಟದಲ್ಲಿ ಬಿದ್ದಿದೆ, ಅದನ್ನು ಜನತೆಯ ಮುಂದೆ ಹೇಳಿಕೊಂಡು ನಾವು ಗೆಲ್ಲಬಹುದು. ನಾವು ಗೆದ್ದುಬಿಡುತ್ತೇವೆ ಎಂದು ಹೇಳಬಹುದು. ರಾಜಕೀಯವಾದ ವಿಚಾರಧಾರೆಗಳು ಸೀಮಿತವಾಗಿರಬೇಕು. ಇಲ್ಲದಿದ್ದರೆ ನಾವು ಸಮಾಜದಲ್ಲಿ, ಈ ನೆಲದಲ್ಲಿ ಸಣ್ಣ ವ್ಯಕ್ತಿಗಳಾಗುತ್ತೇವೆ ಎಂದು ನಾನು ಭಾವಿಸಿಕೊಂಡಿದ್ದೇನೆ. ನಮಗೆ ಓಟು ಬರುತ್ತದೆ ಅಥವಾ ನಿಮಗೆ ಓಟು ಬರುತ್ತದೆ. ಎಂದು ತಿಳಿದುಕೊಂಡು ಅದಕ್ಕೋಸ್ಕರವಾಗಿ ಈ ವಿಚಾರಗಳನ್ನು ಸೀಮಿತಗೊಳಿಸಬಾರದು. ಎಂದು ಈ ಸದನದ ಮೂಲಕ ಹೇಳುತ್ತೇನೆ. ಅಥವಾ ಈ ಕಷ್ಟ ಪರಿಸ್ಥಿತಿಯನ್ನು ರಾಜಕೀಯ ಜೀವನಕ್ಕೋಸ್ಕರ ಬಳಸಿಕೊಳ್ಳುವುದಿಲ್ಲ. ಬರಗಾಲ ಇದೆ, ಕಾರ್ಖಾನೆಗಳು ಮುಚ್ಚಿವೆ, ನಿಮ್ಮ ಮೇಲೆ ಒತ್ತಡ ಬರುತ್ತದೆ. ಇವರಿಗೆ ದುಸ್ಥಿತಿ ಬಂದರೆ ನಮಗೆ ಖುಷಿ ಎಂದು ತಿಳಿದುಕೊಂಡಿರುವ ಜನ ನಾವಲ್ಲ. ನಾವು ಆ ರೀತಿ ಆಗಲೂಬಾರದು ಎಂದು ತಿಳಿದುಕೊಂಡಿದ್ದೇನೆ. ಇವೊತ್ತು ಸರ್ಕಾರದ ಆರ್ಥಿಕ ಪರಿಸ್ಥಿತಿ ಸುಧಾರಣೆ ಆಗಬೇಕು ಇವೊತ್ತು ಜನರ ಪರಿಸ್ಥಿತಿ ಸುಧಾರಣೆ ಆಗಬೇಕು. ಅವರಿಗೆ ಸಿಕ್ಕಬೇಕಾದ ಎಲ್ಲಾ ಸೌಲಭ್ಯಗಳು ಸಿಕ್ಕಬೇಕು. ನಮ್ಮ ಕಾರ್ಮಿಕ ಸಚಿವರು ಬರಗಾಲವನ್ನು ವೀಕ್ಷಿಸಲು ಕೇಂದ್ರ ಸರ್ಕಾರದ ಪ್ರತಿನಿಧಿಗಳಾಗಿ ಬಂದಂತಹ ಸಂದರ್ಭದಲ್ಲಿ ನಾವು ಪ್ರತಿಯೊಬ್ಬ ಕಾಂಗ್ರೆಸ್ (ಐ) ಶಾಸಕರೂ ಒಟ್ಟಾಗಿ ಹೆಚ್ಚು ಹೆಚ್ಚು ಬರಗಾಲ ಇದೆ, ಈ ಉದ್ದೇಶದಲ್ಲಿ ಒತ್ತಾಯವನ್ನು ಅಥವಾ ಒತ್ತಡವನ್ನು ತಂದಿದ್ದೇವೆಯೇ ವಿನಹ ಇದರಲ್ಲಿ ರಾಜಕೀಯ ಮಾಡಲಿಕ್ಕೆ ಪ್ರಯತ್ನ ಮಾಡಲಿಲ್ಲ. ಹಾಗೆ ಮಾಡುವ ಜನ ನಾವಲ್ಲ. ಹಾಗೆಯೇ ಇವೊತ್ತು ಮಂಗಳೂರಿನ ರಸಗೊಬ್ಬರ ಕಾರ್ಖಾನೆ ಏನು ಇದೆ. ಅದರಲ್ಲೂ ರಾಜಕೀಯದ ಉದ್ದೇಶ ನಮಗೆ ಇಲ್ಲ. ಅದು ಬದುಕಬೇಕು, ಅಲ್ಲಿಯ ಕಾರ್ಮಿಕರೂ ಸಹ ಬದುಕಬೇಕು. ಅವರಿಗೂ ನ್ಯಾಯ ಸಿಕ್ಕಬೇಕು. ಅದರ ಜೊತೆಗೆ ಕೈಗಾರಿಕೆಗೆ ನಷ್ಟ ಅಥವಾ ಸರ್ಕಾರಕ್ಕೆ ನಷ್ಟ ಆಗುವುದು ಉಳಿದು ಒಂದು ಶಾಂತಿಯುತವಾದ ವಾತಾವರಣ ಮೂಡಬೇಕು ಎನ್ನುವುದು ನಮ್ಮ ಒಂದು ಉದ್ದೇಶ. ಆ ಒಂದು ಉದ್ದೇಶದ ಈಡೇರಿಕೆಗಾಗಿ ನಾವು ಹಸ್ತ ಲಾಘವ ಮಾಡಿಕೊಂಡು ಒಂದು ಒಳ್ಳೆಯ, ತಿಳಿಯಾದ ವಾತಾವರಣ ಮೂಡಿಸುತ್ತೇವೆಂದು ನಂಬಿಕೆ ನನಗೆ ಇದೆ. ಈ ಒಂದು ನಂಬಿಕೆಯನ್ನು ನಮ್ಮ ಗುರುಗಳ ಎದುರಿಗೆ ಇಟ್ಟು ಅವರಿಗೆ ವಂದಿಸುತ್ತೇನೆ ಹಾಗೂ ನನಗೆ ಮಾತನಾಡಲು ಅವಕಾಶ ಕೊಟ್ಟ ತಮಗೂ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

† SRI BLASIUS D'SOUZ (MANGALORE).—Mr. Speaker Sir, I am really sorry to state that from the last 65 days the Mangalore Chemicals & Fertilizers is on the strike. The architect of this Karnataka State, Bharth Ratna Vishweswaraiah said, "Industriljse or perish" but what we find in the present Government is, "Industrialise and perish". Insted of seeing the reson why this factory has gone on strike, the Ministers feel that we have not met them and spoken to them about the strike. The cosequences of this strike is the sufferings of the workers and also the fertiliser factory, I should say that this factory is one of the best factories in the State. We have been dicussing about the factories which have been closed down for various resons such as aower shortage and for being not viable. We have seen that many of the factories today in the State are suffering. In the early sixties and the seventies, people from outside used to come to our State because of the good climate for industries, infrastructure, power, water and labour. But today I feel there is mis-management in the industries. This fertiliser factory has lost Rs. 40 crores production. Mr. J. H. Patel yesterday he had been to many countries like USA, Hongkong, South Koria, Britan, Canada to Invite people to start industries here. This Mangalore Chemicals & Fertilizers was funing at the capacity of 103%. No factory in Karnataka runs to its capacity. When there was a strike in that factory it was the duty of the Government and the Industries Minister and the Labour Minister to go and ask them what is the resons? So for nothing has been done in this behalf, As has been stated earlier. all the MLAs of South Kanara joined together we did not mix up politics, we stright-away went to the Chief Minister and told him that there is a problem in the M.C.F. and please solve it. The Chief Minister said, "I will see that it is solved as early as possible." He directed us to go to the Industries Minister and the Industries Minister said, "We will not go into the technicalities and we will see that the problem is solved." Unfortunately, no Minister has visited the M.C.F. There were days in these sixty days when three/four Ministers were there in South Karnara and no one cared to know what was happening there. This is such a big industry. There is no scarcity of power because they have got their own genertags and the poor workers had to start really fast and on the 25th they had to start fast unto death. They were driven to the wall and nailed. Even though 13 of us MLAS went to the Chief Minister they did not call us for the discussion. There was no dialogue between the Labour and the Managemant. I would like to ask through the Hon. Speaker, what made the management to keep quiet all these days. As you know for 65 days such a big factory which was running at the capacity of 103% is closed. Only on the 3rd there was a discussion.

As the earlier speaker said, Mr. Adyanthaya was duly elected to the State INTUC as president and the President of the MCF INTUC, it was the duty of the Management to call him and discuss at length regarding the various issues. when Mr. Veerappa Moily and Mr. J. H. patel gave a call to stop the fast unto death, the disciplined workers withdrew their fast unto death. I would request the Hon. Industries Minister and the Hon. Labour Minister and the Hon. Labour Minister and also the leaders of the labour to see that the Problem is solved immediately. I don,t think there is a very big Problem, if there is a dialogue betweee the leaders of the labour and the Government and thn Management. I am sure, this will definitely be solved in no time. It is the desire of the people of South Kanara to see that this industry proposers. This industry is very necessary for agriculture. As you know these fertilisers are used for agriculture and this is the time to sell fertilisers to the farmers. if we don't have fertilisers at the time when we have a drought, whatever is passible for cultivation will also be not possible. I appeal to the hon. Industries Minister and the Hon. Labour Minister to see that a good climate is established at the MCF and I would like to inform them that the Management has added insult to injury. After 55 days of strike, those who were earlier suspended harve been dismissed. I have not heard anything like this. If they wanted to dismiss on inqury they could have dismissed earlier. But they have not done so. After 55 days they were dismissed. All this goes to show that the management has been Pressurised by some exterior people and I would request Mr. J. H. patel, please don't have prestige. The other day when our Leader Mrs. Nagarathnamma said about the prestige in ihe Mandal panchayats, Mr. J. H. patel said, "We have decentralised prestige from Vidhana Soudha to the Mandals". But here I find he has centralised prestige from the M. C. F. to the Vidhana Soudha. please don't have prestige. See that this good factory is started immediately and I would suggest that the talks should start even by evening today. The Labour Minister just now informed us that he has called concerned for talks regarding one factory today at 4,0 Clock. The talks regarding M. C. F. labour should be started by this evening, Thank you.

ಶ್ರೀ ಕೆ. ಮಲ್ಲಪ್ಪ (ಮಾಯಕೊಂಡ).—ಮಾನ್ಯ ಅಧ್ಯಕ್ಷರೆ, ನಮ್ಮ ರಾಜ್ಯದಲ್ಲಿ ಮುಚ್ಚಿರತಕ್ಕ ಕಾಟನ್ ಟೆಕ್ಸ್‌ಟೈಲ್ಸ್ ಮಿಲ್ಸ್ ಬಗ್ಗೆ ಈಗಾಗಲೇ ಅನೇಕ ಮಾನ್ಯ ಸದಸ್ಯರು ಮಾತನಾಡಿದ್ದಾರೆ. ಇದು ಹೇಗಾಗಿದೆ ಎಂದರೆ ದೊಡ್ಡ ಮೀನು ಸಣ್ಣ ಮೀನನ್ನು ನುಂಗಿ ದೊಡ್ಡದಾಯಿತು ಎನ್ನುವಂತಾಗಿದೆ. ನಮ್ಮ ರಾಜ್ಯದಲ್ಲಿ ಪಾಲಿಫೈಬರ್ಸ್ ಕಾರ್ಖಾನೆಗಳು ಹುಟ್ಟಿ ಟೆರಿಕಾಟ್ ಬಟ್ಟೆಗಳನ್ನು ತಯಾರಿಸಿ ಕಾಟನ್ ಟೆಕ್ಸ್‌ಟೈಲ್ಸ್‌ನ್ನು ನುಂಗಿಹಾಕಿವೆ. ಇನ್ನೂ ಒಂದು ಮಾತನ್ನು ಹೇಳುವುದಾದರೆ, ಗಾಂಧಿ ವಾದಿಗಳಾದ ಮಹಿಳೆಯರೂ, ಪುರುಷರೂ ಕೂಡ ಇವತ್ತು ಟೆರಿಕಾಟ್ ಬಟ್ಟೆ ಮಾರು ಹೋಗಿದ್ದಾರೆ. ಇಂಥ ಒಂದು ಪರಿಸ್ಥಿತಿ ನಮ್ಮ ರಾಜ್ಯದಲ್ಲಿ ಬೆಳೆದು ಹಲವರು ಬಟ್ಟೆ ಗಿರಣಿಗಳು ಮುಚ್ಚಿಹೋಗಿ ಅಲ್ಲಿ ಕೆಲಸಮಾಡುತ್ತಿದ್ದ ಕಾರ್ಮಿಕರು ಕೆಲಸವಿಲ್ಲದೆ ಜೀವನ ನಡೆಸಲು ಬಹಳ ತೊಂದರೆ

ಪಡುತ್ತಿದ್ದಾರೆ. ಅಷ್ಟೇ ಅಲ್ಲ, ಹತ್ತಿಯಲ್ಲೂ ಕೂಡ ಸ್ಪರ್ಧಾತ್ಮಕ ಪರಿಸ್ಥಿತಿ ಇರುವುದರಿಂದ ಮುಂದೆ ಕಾಟನ್ ಟೆಕ್ಸ್‌ಟೈಲ್ ಮಿಲ್‌ಗಳಿಗೆ ಇನ್ನೂ ಕಷ್ಟದ ಪರಿಸ್ಥಿತಿ ಒದಗುತ್ತದೆ. ಆದ್ದರಿಂದ ನಾವು ಈಗಲೇ ಇದರ ಬಗ್ಗೆ ಮುನ್ನೆಚ್ಚರಿಕೆಯನ್ನು ವಹಿಸಬೇಕಾಗಿದೆ. ಉರುವಲು ಕಟ್ಟಿಗೆ ಜನರಿಗೆ ಸಿಕ್ಕದೇ ಪರಿಸ್ಥಿತಿ ಕಷ್ಟವಾಗಿರತಕ್ಕಂಥದ್ದನ್ನು ಕಾಣುತ್ತಿದ್ದೇವೆ. ಈ ದಿಸೆಯಲ್ಲಿ ಎಲ್ಲಾ ಕಾರ್ಖಾನೆಗಳು ಸಹಿತ, ಗಿರಣಿ, ಬಟ್ಟೆ ಮಿಲ್ಲುಗಳು ಬಂದ್ ಆಗತಕ್ಕಂಥ ಪರಿಸ್ಥಿತಿ ಇರುತ್ತದೆ. ಆದರಮೇಲೆ ಅವಲಂಬಿಸಿರುವ ಕಾರ್ಮಿಕ ವೃಂದ ಅವರಿಗೆ ಉದ್ಯೋಗವಿಲ್ಲದೆ ಬಹಳ ಕಷ್ಟಕ್ಕೆ ಒಳಗಾಗಿರುವ ಪರಿಸ್ಥಿತಿಯನ್ನು ನೋಡುತ್ತಿದ್ದೇವೆ. ದಾವಣಗೆರೆಯಲ್ಲಿ ಸುಮಾರು ೯–೭ ವರ್ಷಗಳಿಂದಲೂ ಶಂಕರ್‌ಮಿಲ್‌ನ್ನು ಅವಲಂಬಿಸಿಕೊಂಡಿರತಕ್ಕಂಥ ಸಾವಿರಾರು ಕಾರ್ಮಿಕವೃಂದದವರು ಕಷ್ಟ ಅನುಭವಿಸಿ ಬೀದಿಪಾಲಾಗಿದ್ದಾರೆ. ಸುಮಾರು ಮೂರುಸಾವಿರ ಕಾರ್ಮಿಕರು ಗೌರಿಶಂಕರ, ಸಿದ್ದೇಶ್ವರ, ಮತ್ತು ಚಿಟಗೇರಿ ಮಿಲ್‌ಗಳಲ್ಲಿ ಕೆಲಸ ಮಾಡುತ್ತಿದ್ದವರು ಮಿಲ್‌ಗಳನ್ನು ಬಂದ್ ಮಾಡಿರುವುದರಿಂದ ಉದ್ಯೋಗ ಇಲ್ಲದೆ ಜೀವನ ನಡೆಸತಕ್ಕಂಥ ಪರಿಸ್ಥಿತಿ ಬಂದಿದೆ, ಇವರು ಬಹಳ ತೊಂದರೆಯಲ್ಲಿದ್ದಾರೆ. ಜೊತೆಗೆ ಸುಮಾರು ೪–೫ ತಿಂಗಳಿಂದ ಅವರಿಗೆ ಸಂಬಳ ಕೊಟ್ಟಿಲ್ಲ. ಕಾರ್ಮಿಕ ವೃಂದದವರಿಗೆ ಯಾವ ಮುನ್ಸೂಚನೆ ಇಲ್ಲದೆ ಮಿಲ್‌ಗಳನ್ನು ಬಂದ್‌ಮಾಡಿ ಅಲ್ಲಿನ ಮಾಲೀಕರು ಯಾರಿಗೂ ವಿಚಾರವನ್ನು ತಿಳಿಸದೆ ಪಲಾಯನವಾಗಿ ಬೆಂಗಳೂರು ನಗರವನ್ನು ಸೇರಿಕೊಂಡಿದ್ದಾರೆ. ಮಾನ್ಯ ಕೈಗಾರಿಕಾ ಸಚಿವರು ಮತ್ತು ಮಾನ್ಯ ಕಾರ್ಮಿಕ ಸಚಿವರು ೩–೪ ಬಾರಿ ಕ್ರಮ ತೆಗೆದುಕೊಂಡು ಕಾರ್ಮಿಕ ನಾಯಕರನ್ನು, ಬ್ಯಾಂಕ್ ಆಡಳಿತ ಮಂಡಲಿಯವರನ್ನು, ಅಧಿಕಾರಿಗಳನ್ನು ಮಿಲ್ ಮಾಲೀಕರನ್ನು ಕರೆಯಿಸಿ ಮಿಲ್‌ಗಳನ್ನು ತೆರವು ಮಾಡಿಸುವ ಬಗ್ಗೆ ಸಾಕಷ್ಟು ಚರ್ಚೆ ನಡೆಸಿ ಪ್ರಯತ್ನ ಮಾಡಿರುವುದಕ್ಕೆ ಮಾನ್ಯ ಸಚಿವರನ್ನು ಅಭಿನಂದಿಸುತ್ತೇನೆ. ಆದರೂ ತಾವು ಏನು ಗುರಿಯನ್ನು ಇಟ್ಟುಕೊಂಡಿದ್ದೀರೋ ಆ ಗುರಿಯನ್ನು ಮುಟ್ಟದಿರುವುದರಿಂದ ಪರಿಸ್ಥಿತಿಯನ್ನು ನಿವಾರಿಸುವುದಕ್ಕೆ ಸಾಧ್ಯವಾಗಿಲ್ಲ. ಈ ಒಂದು ಕಾರಣದಿಂದಾಗಿ ಮಾನ್ಯ ಸದಸ್ಯರಾದ ಪಂಪಾಪತಿಯವರು ಆಮರಣ ಉಪವಾಸವನ್ನು ಕೈಗೊಂಡು ಉಪವಾಸ ಮಾಡುತ್ತಿದ್ದಾರೆ. ಇಂದಿಗೆ ನಾಲ್ಕನೆಯ ದಿವಸವಾಗಿದೆ. ನಗರ ಸಭೆಯ ಅಧ್ಯಕ್ಷರು ಟೆಲಿಗ್ರಾಮ್ ಮಾಡಿ ಪರಿಸ್ಥಿತಿಯನ್ನು ತಿಳಿಸಿದ್ದಾರೆ. ಕೂಡಲೇ ಸರ್ಕಾರದವರು ಏನಾದರೂ, ಒಂದು ನಿಲುವನ್ನು ತೆಗೆದುಕೊಳ್ಳಬೇಕು. ಅವರಿಗೆ ತಂತಿಯ ಸಂದೇಶವನ್ನು ಕಳುಹಿಸಬೇಕು. ಮತ್ತು ಪರಿಸ್ಥಿತಿ ಬಿಗಡಾಯಿಸುವುದಕ್ಕೆ ಮುಂಚೆ ಏನಾದರೂ ಕಾರ್ಯಕ್ರಮವನ್ನು ತೆಗೆದುಕೊಳ್ಳಬೇಕೆಂದು ಹೇಳುತ್ತೇನೆ. ಏತಕ್ಕೆಂದರೆ ಈಗಾಗಲೇ ಎರಡು ಸರ್ಕಾರಿ ರಸ್ತೆ ಸಾರಿಗೆ ಬಸ್‌ಗಳನ್ನು ನಿನ್ನೆ ಅಲ್ಲಿ ಸುಟ್ಟಿದ್ದಾರೆಂದು ಕನ್ನಡಪ್ರಭದಲ್ಲಿ ಸುದ್ದಿ ಬಂದಿರುತ್ತದೆ. ಎರಡು ಬಸ್‌ಗಳನ್ನು ಉದ್ರೇಕಗೊಂಡ ಕಾರ್ಮಿಕರು ಸುಟ್ಟಿದ್ದಾರೆ ಎಂಬ ಸುದ್ದಿಯನ್ನು ನಗರಸಭಾ ಅಧ್ಯಕ್ಷರೂ ಸಹ ತಂತಿಯ ಮೂಲಕ ತಿಳಿಸಿದ್ದಾರೆ. ಯಾವುದೇ ಒಂದು ಉದ್ಯೋಗವನ್ನು ಅವಲಂಬಿಸಿರತಕ್ಕಂಥವರು ಇವೊತ್ತು ವಕೀಲರಾಗಿರಲಿ, ಅಥವಾ ವೈದ್ಯರಾಗಿರಲಿ ಯಾವ ಉದ್ಯೋಗ ಅವಲಂಬಿಸಿರುತ್ತಾರೋ ಅವರು ಅದನ್ನು ಬಿಟ್ಟು ಬೇರೆ ವೃತ್ತಿಯನ್ನು ಅವಲಂಬಿಸುವುದಕ್ಕೆ ಸಾಧ್ಯವಾಗುವುದಿಲ್ಲ. ಕಾರ್ಮಿಕರು ಈದಿಸೆಯಲ್ಲಿ ವಿಫಲರಾಗಿದ್ದಾರೆ. ಅವರು ಜೀವನವನ್ನು ನಡೆಸುವುದಕ್ಕೆ ಬಹಳ ಕಷ್ಟ ಪಡುತ್ತಿದ್ದಾರೆ. ಇ. ಎಸ್. ಐ. ಗೆ ಮಾಲೀಕರು ಹಣವನ್ನು ಕಟ್ಟದೆ ಇರುವುದರಿಂದ ಆರೋಗ್ಯ ಸವಲತ್ತುಗಳನ್ನು ಕೂಡ ಅವರು ಕೊಡುತ್ತಿಲ್ಲ. ಕಾಲಕಾಲಕ್ಕೆ ಅನುಗುಣವಾಗಿ ಮುರಿದಂತೆ ಹಣವನ್ನು ಕಟ್ಟದೆ ಇರುವುದರಿಂದ ಕಾರ್ಮಿಕರು ಬಹಳ ತೊಂದರೆಯನ್ನು ಅನುಭವಿಸುತ್ತಿದ್ದಾರೆ, ಸ್ವಂತ ಉದ್ಯಮವನ್ನು ಮಾಡುವುದರ ಮೂಲಕ ಜೀವನ ಮಾಡೋಣವೆಂದರೆ ಆರ್ಥಿಕ ಮುಗ್ಗಟ್ಟು ಇರುತ್ತದೆ. ಈ ಹಿನ್ನೆಯಲ್ಲಿ ಕಾರ್ಮಿಕರು ಬಹಳ ಕಷ್ಟಪಡುತ್ತಿದ್ದಾರೆ. ಮಕ್ಕಳ ವಿಧ್ಯಾಭ್ಯಾಸಕ್ಕೆ ತೊಂದರೆ, ಆರೋಗ್ಯ ಚಿಕಿತ್ಸೆಗೆ ತೊಂದರೆ, ಜೀವನೋಪಾಯಕ್ಕೆ ತೊಂದರೆಯನ್ನು ಪಡುತ್ತಿರುವ ಪರಿಸ್ಥಿತಿಯನ್ನು ನಿವಾರಿಸುವ ಸಲುವಾಗಿ ಸರ್ಕಾರದವರು ಸತತವಾಗಿ ಈ ದಿಸೆಯಲ್ಲಿ ಪ್ರಯತ್ನ ಮಾಡಬೇಕೆಂದು ಈ ಸದನದ ಮೂಲಕ ಮಾನ್ಯ ಕಾರ್ಮಿಕ ಸಚಿವರನ್ನು ಮತ್ತು ಕೈಗಾರಿಕಾ ಸಚಿವರನ್ನು ಕಳಕಳಿಯಿಂದ ಪ್ರಾರ್ಥಿಸಿಕೊಳ್ಳುತ್ತೇನೆ. ದಾವಣಗೆರೆಯಲ್ಲಿ ಕಾರ್ಮಿಕರನ್ನು ಉದ್ರೇಕಗೊಳ್ಳುವ ಪರಿಸ್ಥಿತಿ ಇರುತ್ತದೆ. ಕಾರ್ಮಿಕರ ಪರಿಸ್ಥಿತಿ ಹದಗೆಟ್ಟಿದೆ. ಈ ಕಾರಣಕ್ಕಾಗಿಯೇ ಮಾನ್ಯ ಸದಸ್ಯರಾದ ಪಂಪಾಪತಿಯವರು ಆಮರಣಾಂತರ ಉಪವಾಸವನ್ನು ಕೈಗೊಂಡಿದ್ದಾರೆ. ಸರ್ಕಾರದವರು ಕೂಡಲೇ ಮಧ್ಯಸ್ಥಿಕೆಯನ್ನು ವಹಿಸಿ ಅವರು ಉಪವಾಸವನ್ನು ನಿಲ್ಲಿಸಲು ಸಂದೇಶವನ್ನು ಕಳುಹಿಸಬೇಕು. ಉಪವಾಸವನ್ನು ನಿಲ್ಲಿಸಲು ಸತತವಾದ ಪ್ರಯತ್ನವನ್ನು ಈ ಕೂಡಲೇ ಮಾಡಬೇಕು. ಮುಚ್ಚಿರತಕ್ಕಂಥ ಮಿಲ್‌ಗಳನ್ನು ತೆಗೆಯಿಸಬೇಕು. ಜೊತೆಗೆ ನಾಲ್ಕಾರು ತಿಂಗಳುಗಳಿಂದ ಸಂಬಳ ನಿಲ್ಲಿಸಿರುವುದನ್ನು ಕೊಡಿಸುವ ಮೂಲಕ ಸರ್ಕಾರ ಉತ್ತಮ ಕೆಲಸವನ್ನು ಮಾಡಬೇಕೆಂದು ಕಾರ್ಮಿಕವೃಂದದ ಪರವಾಗಿ ತಮ್ಮ ಮೂಲಕ ಒತ್ತಾಯಪೂರ್ವಕವಾಗಿ ವಿನಂತಿಸಿಕೊಳ್ಳುತ್ತೇನೆ ಮತ್ತು ಉಪವಾಸ ಸತ್ಯಾಗ್ರಹವನ್ನು ಮಾಡುತ್ತಿರುವ ಮಾನ್ಯ ಪಂಪಾಪತಿ

ಯವರು ಅದನ್ನು ನಿಲ್ಲಿಸಲು ಸರ್ಕಾರದವರು ಕೂಡಲೇ ತಂತಿ ಸಂದೇಶವನ್ನು ಕಳುಹಿಸಿಕೊಡಬೇಕೆಂದು ಹೇಳಿ ಇಷ್ಟು ಮಾತನಾಡಲು ಅವಕಾಶವನ್ನು ಕೊಟ್ಟಿದ್ದಕ್ಕಾಗಿ ಅಧ್ಯಕ್ಷರನ್ನು ವಂದಿಸಿ ನನ್ನ ಮಾತು ಗಳನ್ನು ಮುಗಿಸುತ್ತೇನೆ.

† ಶ್ರೀ ಕೆ. ಹೆಚ್. ಶ್ರೀನಿವಾಸ್ (ಶಿವಮೊಗ್ಗ).—ಸನ್ಮಾನ್ಯ ಅಧ್ಯಕ್ಷರೆ, ತಾವು ಈ ಸಂದರ್ಭ ದಲ್ಲಿ ರಾಜ್ಯದ ಕೈಗಾರಿಕೆಗಳ ಪರಿಸ್ಥಿತಿ ಬಗ್ಗೆ ವಿವರವಾಗಿ ಚರ್ಚಿಸುವುದಕ್ಕೆ ಅವಕಾಶ ಮಾಡಿಕೊಟ್ಟಿದ್ದೀರಿ. ಈಗಾಗಲೇ ಹಲವಾರು ಜನ ಸ್ನೇಹಿತರು ಕೆಲವೊಂದು ವಿಚಾರಗಳನ್ನು ಪ್ರಸ್ತಾಪ ಮಾಡಿದ್ದಾರೆ. ಮತ್ತೆ ಅದನ್ನೇ ಹೇಳುವುದಾಗಲಿ, ಅಥವಾ ತುಂಬಾ ವಿವರಣಾತ್ಮಕವಾಗಿ ವಿಷಯಗಳನ್ನು ಪ್ರಸ್ತಾಪ ಮಾಡುವುದಾಗಲಿ ನನ್ನ ಉದ್ದೇಶ ಇಲ್ಲ. ಕಳೆದ ಆಯವ್ಯಯ ಅಧಿವೇಶನದ ಸಂದರ್ಭದಲ್ಲಿ ಕೈಗಾರಿಕೆ ಇಲಾಖೆಯ ಬೇಡಿಕೆಗಳ ಬಗ್ಗೆ ಚರ್ಚೆಯನ್ನು ಪ್ರಾರಂಭಿಸತಕ್ಕ ಅವಕಾಶವನ್ನು ತಾವು ನನಗೆ ಕೊಟ್ಟಿದ್ದೀರಿ. ಆಗ ಸಾಕಷ್ಟು ವಿವರವಾಗಿ ಹಲವಾರು ವಿಚಾರಗಳನ್ನು ಪ್ರಸ್ತಾಪಿಸಿದ್ದೆ. ಕೈಗಾರಿಕೆ ಸಚಿವರೂ ವಿವರವಾಗಿ ಉತ್ತರಿಸಿದ್ದರು ಮತ್ತು ಹಲವಾರು ಭರವಸೆಗಳನ್ನು ಕೊಟ್ಟಿದ್ದರು. ಆದರೆ ಅವೆಲ್ಲ ಕೇವಲ ಭರವಸೆಗಳಾಗಿ ಉಳಿದಿವೆಯೇ ಹೊರತು ಯಾವುವೂ ಕೂಡ ವಿಶೇಷವಾದ ರೀತಿಯಲ್ಲಿ ಕಾರ್ಯಗತ ವಾಗಲಿಲ್ಲವೆಂಬ ಮಾತನ್ನು ಅವರ ಗಮನಕ್ಕೆ ತರಬಯಸುತ್ತೇನೆ. ರಾಜ್ಯದಲ್ಲಿ ಹಲವಾರು ಕೈಗಾರಿಕೆ ಗಳಿವೆ ಮತ್ತು ಒಂದೊಂದು ಕೈಗಾರಿಕೆಯ ಪರಿಸ್ಥಿತಿಯೂ ವಿಶಿಷ್ಟ ರೂಪದ್ದಾಗಿದೆ. ಒಂದು ಕೈಗಾರಿಕೆಯ ಬಗ್ಗೆ ಹೇಳುವ ಮಾತನ್ನೇ ಇನ್ನೊಂದು ಕೈಗಾರಿಕೆಯ ಬಗ್ಗೆ ಹೇಳುವುದಕ್ಕೆ ಸಾಧ್ಯವಿಲ್ಲ. ಒಂದೊಂದು ಬಗೆಯ ಕೈಗಾರಿಕೆಗಳು ಕೂಡ ಅವುಗಳ ಕಷ್ಟ ಸುಖಗಳು ಬೇರೆ ಬೇರೆ ಇವೆ, ಆ ಕೈಗಾರಿಕೆಗಳ ಲಾಭ ನಷ್ಟಗಳ ಸ್ವರೂಪ ಬೇರೆ ಬೇರೆ ರೀತಿಯಲ್ಲಿರುತ್ತದೆ ಆ ಕೈಗಾರಿಕೆ ಗಳನ್ನು ಹೇಗೆ ನಡೆಸಬೇಕು ಎಂಬುದನ್ನು ವಿಚಾರ ಮಾಡಬೇಕಾಗಿದೆ. ಒಂದೊಂದು ಕೈಗಾರಿಕೆಯ ಸೂಕ್ಷ್ಮತೆಗಳು ಕೂಡ ಬೇರೆ ಇರುತ್ತವೆ. ಒಂದೊಂದು ಕೈಗಾರಿಕೆಯೂ ವಿಶಿಷ್ಟ ಸ್ವರೂಪದವಾಗಿರುತ್ತವೆ. ಕೆಲವು ಕೈಗಾರಿಕೆಗಳು ರೋಗಗ್ರಸ್ತವಾಗಿರುತ್ತವೆ. ಇವೆಲ್ಲದರ ಬಗ್ಗೆ ಸಾಕಷ್ಟು ಪ್ರಜ್ಞೆಯನ್ನು ಇಟ್ಟು ಕೊಂಡು ನಾವು ಕೆಲಸ ಮಾಡದೆ ಇರತಕ್ಕದ್ದು ಬಹಳ ಮುಖ್ಯವಾದ ಕಾರಣವಾಗಿದೆ. ಎಲ್ಲಾ ಕೈಗಾರಿಕೆ ಗಳನ್ನು ಒಂದೇ ದೃಷ್ಟಿಯಲ್ಲಿ ನೋಡತಕ್ಕದ್ದು ಮುಖ್ಯ. ಸರ್ಕಾರ ಆ ಬಗ್ಗೆ ಮಾಡತಕ್ಕ ವ್ಯವಹಾರ ವನ್ನೆಲ್ಲ ಯಾವುದೋ ಒಂದು ಪದ್ಧತಿ ಪ್ರಕಾರ ಮಾಡುತ್ತದೆ. ಒಂದು ಕಾರ್ಖಾನೆಗೆ ಒಬ್ಬ ಎಂ. ಡಿ. ಯನ್ನು ಹಾಕಬೇಕೆಂದಾಗ ಯಾರೋ ತಮಗೆ ಬೇಕಾದವರು ಎಂದು ಹಾಕುವುದು, ಇಲ್ಲದಿದ್ದರೆ ಕೆಲಸಕ್ಕೆ ಬಾರದವನನ್ನು ಹಾಕುವುದು ಆಗಿದೆ. ಆ ಕೈಗಾರಿಕೆಯನ್ನು ನಡೆಸುವುದಕ್ಕೆ ಅವನಿಗೆ ಶಕ್ತಿ ಇದೆಯೋ ಇಲ್ಲವೇ ಎಂಬುದನ್ನು ನೋಡುವುದಿಲ್ಲ. ನನಗೆ ಬೇಕಾದವನು, ಅವನಿಗೆ ಜಾಗ ಕೊಡಬೇಕು, ಇಲ್ಲದಿದ್ದರೆ ನಮಗೆ ಕಷ್ಟ ಕೊಡುತ್ತಾನೆ, ಹೇಳಿದ್ದು ಕೇಳುವುದಿಲ್ಲವೆಂದು ಎಲ್ಲಿಯಾದರೂ ಇರಬೇಕಲ್ಲ ಡಿಸ್‌ಮಿಸ್ ಮಾಡುವುದಕ್ಕೆ ಸಾಧ್ಯವಿಲ್ಲ ಎಂದು ಅಲ್ಲಿಗೆ ಅವನನ್ನು ಹಾಕುವುದು. ಮಾನ್ಯ ಸ್ನೇಹಿತರು ಬಿಜಾಪುರದ ಬಗ್ಗೆ ಹೇಳಿದರು. ಬಿಜಾಪುರದ ಗಿರಣಿಯನ್ನು ಪ್ರಾರಂಭಿಸುವುದಕ್ಕೆ ಬೇಕಾದ ಹಣಕಾಸು ಮತ್ತೊಂದು ಎಲ್ಲಾ ಕೊಟ್ಟಿರಿ. ಆದರೆ ಆ ಗಿರಣಿಯನ್ನು ರೀಹ್ಯಾಬಿಲಿಟೇಟ್ ಮಾಡುವ ಜೊತೆಯಲ್ಲಿ ನಮ್ಮದು ರೀಹ್ಯಾಬಿಲೀಟೇಟ್ ಆಗಬಾರದೆಂದು ನಿವೃತ್ತ ಅಧಿಕಾರಿಯನ್ನು ರೀಹ್ಯಾಬಿಲಿಟೇಟ್ ಮಾಡುವು ದಕ್ಕೆ ಹೋದಿರಿ. ನನಗೆ ಬಂದಿರುವ ಎಲ್ಲಾ ಮಾಹಿತಿಗಳ ಪ್ರಕಾರ ಆ ಒಂದು ಅಧಿಕಾರಿಯ ಅದಕ್ಷತೆಯಿಂದ ಮತ್ತೆ ಆ ಗಿರಣಿ ಮುಚ್ಚಿದೆಯೋ ಹೊರತು, ಇಲ್ಲದಿದ್ದರೆ ಅದು ನಡೆದುಕೊಂಡು ಹೋಗುವ ಸಾಧ್ಯತೆ ಇತ್ತು. ಆ ಗಿರಣಿಯನ್ನು ರೀಹ್ಯಾಬಿಲಿಟೇಟ್ ಮಾಡಬೇಕೆಂಬ ಉದ್ದೇಶದಿಂದ ಕೆಲಸ ಮಾಡಿದ್ದರೆ ನೀವು ಏನು ಪ್ರಯತ್ನ ಮಾಡಿದಿರಿ ಅವು ಫಲ ಕೊಡುತ್ತಿದ್ದುವು. ತಮಗೆ ಬೇಕಾದವರನ್ನು, ರಿಟೈರ್ಡ್ ಆದವರನ್ನು, ಅಲ್ಲಿ ಅವರಿಗೊಂದು ಜಾಗ ಕೊಡಬೇಕೆಂದು ಹಾಕಿ ಅದರಿಂದ ಅನಾಹುತವಾಯಿತು. ಇವತ್ತು ಆ ಗಿರಣಿ ಮುಚ್ಚಿ ಹೋಗಿದೆ. ಹೀಗೆ ಯಾವುದೇ ಒಂದು ಕೈಗಾರಿಕೆಯನ್ನು ತೆಗೆದುಕೊಂಡರೂ

೩–೦೦ ಪಿ. ಎಂ.,

ಅದನ್ನು ನಡೆಸತಕ್ಕ ಶಕ್ತಿ ಸಾಮರ್ಥ್ಯಗಳು ಅವನಿಗೆ ಇದೆಯೇ ಇಲ್ಲವೇ ಎಂಬುದನ್ನು ನೋಡದೆ, ಅದರಲ್ಲೂ ಐ. ಎ. ಎಸ್. ಆಫೀಸರ್‌ಗಳನ್ನು ತಂದರೆ ಅವರು ಒಂದು ತರಹ ದೇವರು, ಸರ್ವಜ್ಞ ಮೂರ್ತಿ, ಎಲ್ಲವೂ ಅವನಿಗೆ ಗೊತ್ತಿರುತ್ತದೆ ಎಂದು ಕಬ್ಬಿಣದ ಕಾರ್ಖಾನೆಯಿಂದ ತಕ್ಷಣವೇ ಸಕ್ಕರೆ ಕಾರ್ಖಾನೆಗೆ ಹಾಕಬಹುದು, ಅಲ್ಲಿಂದ ಕಾಗದದ ಕಾರ್ಖಾನೆಗೆ ಹಾಕಬಹುದು ಎಂಬ ಭಾವನೆಯಲ್ಲಿ ಹಾಕುತ್ತಾರೆ. ೨೪ ತಾಸಿನಲ್ಲಿ ಅವರಿಗೆ ಕಬ್ಬಿಣದ ಬಗ್ಗೆ ಸಕ್ಕರೆ ಬಗ್ಗೆ ಎಲ್ಲಾ ಗೊತ್ತಾಗಿ ಬಿಡುತ್ತದೆ ಎಂದು ಹಾಕುತ್ತಾರೆ. ಹೇಗಾಗುತ್ತದೆ ? ಅವನೂ ಮನುಷ್ಯ ಅಲ್ಲವೆ ? ಒಂದು ಕೈಗಾರಿಕೆಯಲ್ಲಿ ನಾಲ್ಕೈದು ವರ್ಷ ಕೆಲಸ ಮಾಡುವುದಕ್ಕೆ ಬಿಟ್ಟರೆ ದಕ್ಷತೆಯಿಂದ ಕೆಲಸ ಮಾಡುವುದಕ್ಕೆ ಆಗಬಹುದು.

ಏಕೆಂದರೆ ಅವರಿಗೆ ಆಡಳಿತದ ಬಗ್ಗೆ ತಜ್ಞತೆ ಇರುವುದರಿಂದ. ಕೈಗಾರಿಕೆ ನಡೆಸುವುದಕ್ಕೆ ಅದೊಂದೇ ಸಾಲದು. ಅದರ ಸ್ವರೂಪದ ಬಗ್ಗೆ ತಜ್ಞತೆ ಇಲ್ಲದೇ ಹೋದರೆ ಅವರು ಏನು ಮಾಡುತ್ತಾರೆ? ಹೋದ ಕಡೆ ಎಲ್ಲಾ ಅವರದೊಂದು ಗುಂಪಿರುತ್ತದೆ. ಟೆಕ್ನಿಕಲ್ಲಾಗಿ ಕೆಲಸ ಮಾಡುವವರಿರುತ್ತಾರೆ. ಹಿಂದಿನವನ ಜೊತೆ ಇರುವವರನ್ನು ಬಿಟ್ಟು ಇವರೊಂದು ಗುಂಪು ಕಟ್ಟಿಕೊಳ್ಳುತ್ತಾರೆ. ಅವರು ಹೇಳಿದ್ದೇ ಇವರಿಗೆ ವೇದ. ಸರ್ಕಾರದಲ್ಲೂ ಕೂಡ ಏನಾಗಿದೆ? ಐ.ಎ.ಎಸ್. ಅಧಿಕಾರಿಗಳನ್ನು ಮ್ಯಾನೇಜಿಂಗ್ ಡೈರೆಕ್ಟರಾಗಿ ಹಾಕಿಬಿಟ್ಟರೆ ಮುಗಿದು ಹೋಯಿತು ನಮ್ಮ ಜವಾಬ್ದಾರಿ ಎಂಬ ಮನೋಸ್ಥಿತಿ ಇದೆ. ಸರ್ಕಾರ ಕೈಗಾರಿಕೆಗಳ ಬಗ್ಗೆ ಏನೂ ಮಾಡುತ್ತಿಲ್ಲ, ಉಡುಪಿ ಪಾರುಪತ್ತೆ ಬಿಟ್ಟರೆ ಇನ್ನೇನೂ ನೀವು ಮಾಡುವುದಿಲ್ಲ ಎಂದು ಎರಡು ವರ್ಷಗಳಿಂದ ನಾನು ಹೇಳುತ್ತಲೇ ಇದ್ದೇನೆ, ಮಾನ್ಯ ಮಂತ್ರಿಗಳು ಉತ್ತರ ಕೊಡುತ್ತೇನೆ ಎಂದು ಹೇಳುತ್ತಿದ್ದಾರೆ, ಆದರೆ ಕೊಡುತ್ತಿಲ್ಲ, ಯಾರು ಯಾರಿದ್ದಾರೆ, ಏನೇನು ಮಾಡುತ್ತಿದ್ದಾರೆ ಎಂಬುದನ್ನು ನೋಡುತ್ತಿಲ್ಲ. ಹೀಗೆ ಮಾಡಿದರೆ ಹಾಗೆ ಮಾಡಿದೆಯಾ ಎಂದು ಹೇಳುವುದು, ಹಾಗೆ ಮಾಡಿದರೆ ಹೀಗೆ ಮಾಡಿದೆಯಾ ಎಂದು ಹೇಳುವುದು, ಅದು ಬಿಟ್ಟರೆ ಸರ್ಕಾರದ ಮಟ್ಟದಿಂದ ನೀವು ಅದನ್ನು ನಿಕಟವಾದ ರೀತಿಯಲ್ಲಿ ಯಾವುದೇ ನಿಯಂತ್ರಣಕ್ಕೆ ಒಳಪಡಿಸಿಲ್ಲ. ಮಾನ್ಯ ಮುಖ್ಯಮಂತ್ರಿಗಳು ವಿಧಾನ ಪರಿಷತ್ತಿನ ವಿರೋಧಪಕ್ಷದ ನಾಯಕರಾಗಿದ್ದಾಗ ಭಾಷಣ ಮಾಡಿದ್ದನ್ನು ನಾನು ಓದಿ ಹೇಳಿದೆ. ಅವರು ಏನು ಹೇಳಿದರು ಎಂದರೆ ಟಾಟಾ ಬಿರ್ಲಾ ಅವರಿಗೆ ಪ್ರತಿದಿವಸ ರಾತ್ರಿ ೧೦ ಗಂಟೆಗೆ ಎಲ್ಲಾ ಫ್ಯಾಕ್ಟರಿಗಳ ಬ್ಯಾಲೆನ್ಸ್ ಷೀಟ್ ಕಂಪ್ಯೂಟರ್ ಆಗಿ ಬರುತ್ತದೆ, ಆದರೆ ನಮ್ಮಲ್ಲಿ ಆ ಪದ್ಧತಿ ಇಲ್ಲ ಎಂದು ಹೇಳಿದರು. ನಮ್ಮಲ್ಲಿ ಪ್ರತಿದಿವಸ ಇರಲಿ ವರ್ಷಾನುಗಟ್ಟಲೆ ಆದರೂ ಇದು ಬರುವುದಿಲ್ಲ. ನಮ್ಮಲ್ಲಿ ಪಬ್ಲಿಕ್ ಅಂಡರ್ ಟೇಕಿಂಗ್ ಕಮಿಟಿ ಇದೆ. ಬ್ಯೂರೊ ಆಫ್ ಪಬ್ಲಿಕ್ ಎಂಟರ್‌ಪ್ರೈಸಸ್ ಇದೆ.

ಆದರೂ ಕೆಲಸ ಆಗುತ್ತಿಲ್ಲ. ಬ್ಯೂರೊ ಆಫ್ ಪಬ್ಲಿಕ್ ಎಂಟರ್‌ಪ್ರೈಸಸ್ ಸಮರ್ಪಕವಾಗಿ ಕೆಲಸ ಮಾಡದೇಹೋದರೆ ಏನು ಪ್ರಯೋಜನ? ಅವರು ಏನು ಮಾಡುತ್ತಿದ್ದಾರೆ? ಐದಾರು ವರ್ಷಗಳಿಂದ ಬ್ಯಾಲೆನ್ಸ್ ಷೀಟ್ ಮತ್ತು ವರದಿ ಕೊಡದೇ ಇರತಕ್ಕ ಕೈಗಾರಿಕೆಗಳಿವೆ. ಈಗಿರುವ ಪರಿಸ್ಥಿತಿಯಲ್ಲಿ ವಿಧಾನಸಭೆಯಲ್ಲಿ ಕೈಗಾರಿಕಾ ಪರಿಸ್ಥಿತಿಯ ಬಗ್ಗೆ ಚರ್ಚೆ ಮಾಡತಕ್ಕದ್ದೇ ಒಂದು ರೀತಿಯಲ್ಲಿ ಸಂಪೂರ್ಣವಾದ ಅರ್ಥವನ್ನು ಕಳೆದುಕೊಂಡಿದೆ. ಇದೆಲ್ಲಕ್ಕಿಂತ ಹೆಚ್ಚಾಗಿ ರಾಜ್ಯಕ್ಕೆ ಸಾಕಷ್ಟು ಕಷ್ಟ ಇದೆ. ವಿದ್ಯುಚ್ಛಕ್ತಿ ಪ್ರಶ್ನೆ ಇದೆ, ಮತ್ತೊಂದಿದೆ. ಕೆಲವು ಸಂದರ್ಭದಲ್ಲಿ ನಮ್ಮ ಕೈಮೀರಿದಂಥ ಪರಿಸ್ಥಿತಿಗಳಿರಬಹುದು. ಆದರೆ ಅಂಥ ಪರಿಸ್ಥಿತಿಯಲ್ಲಿ ಇಲ್ಲದೇ ಇರುವ ಕಡೆಗಳಲ್ಲೂ ಎಷ್ಟೊಂದು ಅದ್ವಾನವಾಗಿ ವರ್ತನೆ ಮಾಡುತ್ತಿದ್ದಾರೆ ಎಂಬುದಕ್ಕೆ ಉದಾಹರಣೆ ಮಂಗಳೂರು ಫರ್ಟಿಲೈಸರ್ಸ್ ಮತ್ತು ಕೆಮಿಕಲ್ ಕಾರ್ಖಾನೆ. ನಿಜವಾಗಿ ಅಲ್ಲಿ ಕಷ್ಟ ಏನೂ ಇಲ್ಲ. ಕಷ್ಟ ಬಂದಿರತಕ್ಕದ್ದು ಲೇಬರ್ ಯೂನಿಯನ್ ರೀ-ಆರ್ಗನೈಸ್ ಮಾಡುವ ವಿಚಾರದಲ್ಲಿ ಅದೊಂದು ಸರಳವಾದ ಪ್ರಶ್ನೆ. ಅದಕ್ಕೆ ಬೇಕಾದಷ್ಟು ಕೋಷ್ಟಕಗಳು, ಕ್ರಮಗಳು ಇವೆ. ಮನಸ್ಸು ಮಾಡಿದರೆ ೨೪ ತಾಸಿನಲ್ಲಿ ಅಥವಾ ೪೮ ತಾಸಿನಲ್ಲಿ ಆ ಸಮಸ್ಯೆ ಬಗೆಹರಿಸುವುದಕ್ಕೆ ಶಕ್ತಿ ಇದೆ. ಆದರೆ ೬೦-೬೫ ದಿವಸವಾದರೂ ಇದೊಂದು ಸಣ್ಣ ಪ್ರಶ್ನೆಗೋಸ್ಕರವಾಗಿ ಸಮಸ್ಯೆ ಹಾಗೇ ಇಟ್ಟುಕೊಂಡಿದ್ದಾರೆ. ನಿಮಗೆ ಅದರಿಂದ ಏನಾಗಬೇಕಾಗಿದೆ? ಒಂದು ಕೈಗಾರಿಕೆಯಲ್ಲಿ ಈ ಯೂನಿಯನ್ ಇದ್ದರೆ ಏನು? ಆ ಯೂನಿಯನ್ ಇದ್ದರೆ ಏನು? ಈ ಯೂನಿಯನ್ ಇದ್ದರೆ ಏನು? ಅದರಿಂದ ಯಾವುದೇ ಸರ್ಕಾರ ಉಳಿಯುವುದಿಲ್ಲ, ಹೋಗುವುದಿಲ್ಲ. ಒಂದು ಸರ್ಕಾರ ಬರುತ್ತದೆ, ಒಂದು ಸರ್ಕಾರ ಹೋಗುತ್ತದೆ. ರಾಜಕೀಯ ವಾತಾವರಣದ ಮೇಲೆ ಜನ ಓಟು ಮಾಡುತ್ತಾರೆ. ಎಚ್.ಎಂ.ಎಸ್.ನಲ್ಲಿರುವವರು ಕಾಂಗ್ರೆಸ್ಸಿಗೆ ಓಟು ಹಾಕಬಹುದು, ಕಾಂಗ್ರೆಸ್ಸಿನಲ್ಲಿರುವವರು ಜನತಾ ಪಕ್ಷಕ್ಕೆ ಓಟು ಹಾಕಬಹುದು, ಯಾರನ್ನೂ ಬೀಗ ಹಾಕಿ ಇಟ್ಟುಕೊಳ್ಳುವುದಕ್ಕಾಗುವುದಿಲ್ಲ. ಪೈಪೋಟಿ ಎಂಬ ತಕ್ಕಂಥದ್ದು ಎಲ್ಲಾ ಕಡೆ ಇರುತ್ತದೆ. ಆದರೆ ಅದಕ್ಕೂ ಒಂದು ಸ್ಥಾನ ಇದೆ. ಒಂದು ಕೈಗಾರಿಕೆಯನ್ನು ೬೫ ದಿವಸ ಮುಚ್ಚಿ ೪೦-೪೫ ಕೋಟಿ ರೂಪಾಯಿಗಳು ಲುಕ್ಸಾನಾದರೂ ಪೈಪೋಟಿ ಮಾಡಿಕೊಂಡು ತಮಾಷೆ ನೋಡುತ್ತಾರೆಂದರೆ ನಾನು ಸರ್ಕಾರದ ಮೇಲೆ ಆಪಾದನೆ ಮಾಡಬೇಕಾಗುತ್ತದೆ. ವ್ಯಕ್ತಿಗಳ ಬಗ್ಗೆ ಇರುವ ಗೌರವಕ್ಕೂ, ಈ ಆಪಾದನೆಗೂ ಸಂಬಂಧ ಇಲ್ಲ. ಮಾನ್ಯ ಅಧ್ಯಕ್ಷರು ಅವರ ಬಗ್ಗೆ ಸದ್ಭಾವನೆ ವ್ಯಕ್ತಪಡಿಸಿದ್ದಾರೆ. ಅದಕ್ಕೂ ಇದಕ್ಕೂ ಸಂಬಂಧ ಇಲ್ಲ. ಆದರೆ ಒಂದು ಸರ್ಕಾರವಾಗಿ ೬೫ ದಿವಸಗಳ ಕಾಲ ಕ್ಷುಲ್ಲಕವಾದ ಸಮಸ್ಯೆಯನ್ನು ಬಗೆಹರಿಸುವ ಬಗ್ಗೆ ತಾತ್ಸಾರ ಮತ್ತು ನಿರ್ಲಕ್ಷ್ಯ ಮಾಡಿ ೪೦-೪೫ ಕೋಟಿ ರೂಪಾಯಿ ಉತ್ಪಾದನೆಗೆ ತೊಂದರೆಯಾಗುವಂತೆ ಮಾಡಿರುವುದು ಖಂಡಿತವಾಗಿ ಬೇಜವಾಬ್ದಾರಿತನದ ಹೊಣೆಗೇಡಿತನದ ವರ್ತನೆ ಎಂದು ಆಪಾದಿಸುವುದಕ್ಕೆ ಇಚ್ಛೆಪಡುತ್ತೇನೆ. ಈ ಒಂದು ಆಪಾದನೆಯನ್ನು ತಾವು ಬಹಳ ಗಂಭೀರವಾಗಿ ತೆಗೆದುಕೊಳ್ಳ

ಬೇಕು. ಈಗೇನೋ ತಾವು ಮನಸ್ಸು ಮಾಡಿದ್ದೀರೆಂದು ಕಾಣುತ್ತದೆ. ಅಸೆಂಬ್ಲಿ ಮುಗಿಯುವರೆಗೂ ಮನಸ್ಸು ಮಾಡಿದ್ದೇವೆಂದು ಇದ್ದುಕೊಂಡು ಕೊನೆಗೆ ನಿದ್ರೆ ಹೋದರೆ ಏನು ಮಾಡುವುದು ? ಎಲ್ಲಾ ಕಾರ್ಖಾನೆಯೂ ಹೀಗೇ ಇದೆ ಎನ್ನುವ ಧಾಟಿಯಲ್ಲಿ ವ್ಯವಹಾರ ಮಾಡಿದರೆ ಮತ್ತೆ ಪರಿಸ್ಥಿತಿ ಬಿಗಡಾಯಿಸಿಕೊಳ್ಳುತ್ತದೆ. ಈ ಒಂದು ಸಮಸ್ಯೆಯನ್ನು ಬಗೆಹರಿಸುವುದಕ್ಕೆ ನಿಜವಾಗಿಯೂ ೨೪ ತಾಸು ಸಾಕು. ಇವತ್ತು ಸಂಜೆಯೇ ಮಾನ್ಯ ಡಿಸೋಜರವರು ಹೇಳಿದ ಹಾಗೆ ಸಂಬಂಧಪಟ್ಟವರನ್ನು ಮಾತುಕತೆಗೆ ಕರೆದು ಸಮಸ್ಯೆಯನ್ನು ಇತ್ಯರ್ಥ ಮಾಡುವುದರ ಬಗ್ಗೆ ಇವತ್ತೇ ಚರ್ಚೆಯನ್ನು ಪ್ರಾರಂಭ ಮಾಡಿ. ಕೊನೆಯಪಕ್ಷ ಬರಗಾಲ ಪರಿಸ್ಥಿತಿಯಲ್ಲಿ ಇನ್ನೂ ಹಲವಾರು ಕಠಿಣ ಪ್ರಶ್ನೆಗಳು ಮುಂದೆ ಬರುತ್ತವೆ. ಇರುವಂತಹ ಹಲವಾರು ಕೈಗಾರಿಕೆಗಳು ಮುಚ್ಚಿಹೋಗುವಂತಹ ಮಟ್ಟಕ್ಕೆ ಬಂದಿವೆ. ಮೊನ್ನೆ ತಾವು ಅನೌನ್ಸ್ ಮಾಡಿರತಕ್ಕ ವಿದ್ಯುಚ್ಛಕ್ತಿ ಖೋತಾದಿಂದ ಎಷ್ಟು ಕೈಗಾರಿಕೆಗಳು ಈ ಒಂದು ದುರಂತದಿಂದ ಉಳಿಯುತ್ತವೆ ಎಂಬುದನ್ನು ಯಾರೂ ಹೇಳುವುದಕ್ಕೆ ಸಾಧ್ಯ ಇಲ್ಲ. ಅಂತಹ ಒಂದು ಕಷ್ಟ ಪರಿಸ್ಥಿತಿ ಬಂದಿದೆ. ಸಧ್ಯ ಉತ್ಪಾದನೆ ಹೋಗಲಿ, ನಡೆಯುವ ಕೈಗಾರಿಕೆಗಳನ್ನು ನಡೆಸುವುದಕ್ಕೆ ಪ್ರಯತ್ನ ಮಾಡದಿದ್ದರೆ ನೀವು ದೊಡ್ಡ ಬೇ-ಜವಾಬ್ದಾರಿ ಮಾಡಿದಂತಾಗುತ್ತದೆ. ಇದರ ಬಗ್ಗೆ ತಕ್ಷಣ ಕ್ರಮ ಕೈಗೊಳ್ಳಬೇಕೆಂದು ನಾನು ಸರ್ಕಾರವನ್ನು ತೀವ್ರ ರೀತಿಯಲ್ಲಿ ಒತ್ತಾಯಿಸುತ್ತೇನೆ.

ಶ್ರೀ ಎಸ್.ಕೆ. ಕಾಂತ (ಕಾರ್ಮಿಕ ಸಚಿವರು).—ಮಾನ್ಯ ಅಧ್ಯಕ್ಷರೇ, ಕಾರ್ಮಿಕರ ಬಗ್ಗೆ ಮುಖ್ಯವಾಗಿ ಎಂ.ಸಿ.ಎಫ್. ಕಾರ್ಖಾನೆಯಲ್ಲಿ ಸುಮಾರು ೬೦ ದಿವಸಗಳಿಂದ ನಡೆಯುತ್ತಿರತಕ್ಕ ಮುಷ್ಕರದ ಬಗ್ಗೆ ಸರ್ಕಾರ ಆಸಕ್ತಿ ವಹಿಸಿಲ್ಲ, ಮತ್ತು ಬೇ-ಜವಾಬ್ದಾರಿಯಿಂದ ಮತ್ತು ಕೆಲವು ಮೇಲಿನ ಒತ್ತಡದಿಂದ ಸರಿಯಾದ ರೀತಿಯಲ್ಲಿ ಇದನ್ನು ನಿರ್ವಹಿಸಲಿಲ್ಲ ಎನ್ನತಕ್ಕ ಮಾತನ್ನು ಮಾನ್ಯ ಸದಸ್ಯರು ಹೇಳಿದ್ದಾರೆ. ನಾನು ಮುಖ್ಯವಾಗಿ ಹೇಳತಕ್ಕಂಥದ್ದೇನು ಎಂದರೆ ಇದರಲ್ಲಿ ಯಾವುದೇ ರೀತಿಯ ಒತ್ತಡ ನಮ್ಮ ಮೇಲೆ ಬಂದಿಲ್ಲ ಎಂದು ಸ್ಪಷ್ಟಪಡಿಸುತ್ತಿದ್ದೇನೆ. ನಿಜವಾಗಿಯೂ

(ಶ್ರೀಮತಿ ಪುಷ್ಪಾವತಿಯವರು-ಸಭಾಧ್ಯಕ್ಷರ ಸ್ಥಾನವನ್ನಲಂಕರಿಸಿದರು)

ಅಂತಹ ಒಂದು ಒತ್ತಡ ಬಂದಿದ್ದರೆ, ನಾವು ನಮ್ಮ ಇಲಾಖೆಯ ಮತಿಯಿಂದ ಆ ಒಂದು ಮುಷ್ಕರ ಏನು ನಡೆದಿದೆ ಅದು ಕಾನೂನು ಬಾಹಿರವಾಗಿರತಕ್ಕಂಥದ್ದು, ಎಂದು ಅದೇ ಸಮಯದಲ್ಲಿ ಅದನ್ನು ತಡೆಯಬಹುದಾಗಿತ್ತು. ಆದರೆ ನಾನು ಹಾಗೆ ಮಾಡದೆ ಈ ವಿಚಾರದಲ್ಲಿ ಕೂಲಂಕುಷವಾಗಿ ಚರ್ಚೆಯಾಗಿ ಒಂದು ಇತ್ಯರ್ಥಕ್ಕೆ ಬರುವಂಥದ್ದಕ್ಕೆ ಎಡೆ ಮಾಡಿದ್ದೇನೆ. ಆ ಒಂದು ದೃಷ್ಟಿಯಿಂದ ನಾನು ಕಾರ್ಮಿಕ ಇಲಾಖೆಯ ಆಯುಕ್ತರನ್ನು ಮತ್ತು ಸಂಬಂಧಪಟ್ಟ ಅಧಿಕಾರಿಗಳನ್ನು ಅಲ್ಲಿಗೆ ಕಳುಹಿಸಿ ಈ ವಿಷಯವನ್ನು ಚರ್ಚೆಯ ಮೂಲಕ ಬಗೆಹರಿಸತಕ್ಕ ಕೆಲಸ ಮಾಡಿದ್ದೇನೆಂದು ಈಗಾಗಲೇ ನಾನು ಹೇಳಿಕೊಂಡಿದ್ದೇನೆ. ಅದೇ ಪ್ರಕಾರ ಇಲ್ಲಿ ನನಗೆ ಬಂದಿರುವ ವರದಿ ಪ್ರಕಾರ ೩ನೇ ತಾರೀಖು ಯಾವ ಒಂದು ಸಭೆಯನ್ನು ಮಂಗಳೂರಿನಲ್ಲಿರುವ ಅಸಿಸ್ಟೆಂಟ್ ಲೇಬರ್ ಕಮೀಷನರ್ ಕರೆದಿದ್ದರು. ಆ ಸಮಯದಲ್ಲಿ ಕಾರ್ಮಿಕರ ಪತಿಯಿಂದ ಯಾರೂ ಹಾಜರಾಗಲಿಲ್ಲ ಎನ್ನತಕ್ಕ ಮಾತನ್ನು ತಾವು ಕೂಡ ಹೇಳಿದ್ದೀರಿ. ಈ ವಿಚಾರದಲ್ಲಿ ಅವರಿಗೆ ಸಮಯಕ್ಕೆ ಸರಿಯಾಗಿ ಪತ್ರ ಬಾರದೆ ಇರುವ ಕಾರಣ ಅವರು ಹಾಜರಾಗಲಿಲ್ಲ ಎಂದು ಹೇಳಿದ್ದಾರೆ. ಅದರನಂತರ ೭-೭-೮೭ ರಂದು ಒಂದು ಸಭೆ ನಡೆದಾಗ ಕಾರ್ಮಿಕರ ಪತಿಯಿಂದ ಶ್ರೀ ಸುಬ್ಬರಾವ್, ಶ್ರೀ ವಿನೋದ್ ಡಿಸೋಜ, ಶ್ರೀ ಲಾರೆನ್ಸ್ ಡಿಸೋಜ ಹಾಗೂ ದಕ್ಷಿಣ ಕನ್ನಡ ಜಿಲ್ಲೆಯ ಇಂಟಕ್‌ನ ಜನರಲ್ ಸೆಕ್ರೆಟರಿ ಶ್ರೀ ಉಮೇಶಚಂದ್ರರವರೂ ಕೂಡ ಹಾಜರಾಗಿದ್ದರು. ನಂತರ ಅವರು ಒಂದು ಸ್ಟೇಟ್‌ಮೆಂಟನ್ನೂ ಕೂಡ ಕೊಟ್ಟಿದ್ದಾರೆ ಅದು ಏನೆಂದರೆ, ನಾವು ಕೆಲಸಕ್ಕೆ ಹೋಗುವುದಕ್ಕೆ ತಯಾರಿದ್ದೇವೆ, ಆದರೆ ಕೆಲಸಕ್ಕೆ ತೆಗೆದುಕೊಳ್ಳುತ್ತಿಲ್ಲ ಎನ್ನುವ ವಿಚಾರವನ್ನು ಕೂಡ ತಮ್ಮ ಸ್ಟೇಟ್‌ಮೆಂಟ್‌ನಲ್ಲಿ ವರದಿ ಮಾಡಿದ್ದಾರೆ. ನಿನ್ನೆ ಮಾತನಾಡಿದಾಗ ಅವರು ಹೇಳಿದ್ದಾರೆ. ಕನ್ಸಿಲಿಯೇಷನ್ ಮೀಟಿಂಗನ್ನು ಏನು ಅಸಿಸ್ಟೆಂಟ್ ಲೇಬರ್ ಕಮೀಷನರ್ ಕರೆದಿದ್ದರು, ಆ ಸಭೆಯ ವರದಿ ಕೂಡ ನಮಗೆ ಬಂದಿದೆ. ಆ ವರದಿಯಲ್ಲಿ ಅವರು ಹೇಳತಕ್ಕ ವಿಷಯ ಏನು ಎಂದರೆ ಕಾರ್ಮಿಕರ ಬೇಡಿಕೆಯ ಬಗ್ಗೆ ವಿವಾದ ಯಾವುದೂ ಇಲ್ಲ, ಮುಖ್ಯವಾಗಿ ಅಲ್ಲಿ ಉದ್ಭವಿಸಿರತಕ್ಕಂಥದ್ದು ಅಧ್ಯಕ್ಷರು ಯಾರು ಎನ್ನತಕ್ಕಂಥದ್ದರ ಬಗ್ಗೆ ಎಂದು. ಮಾನ್ಯ ಸದಸ್ಯರಾದ ಅಡ್ಯಂತಾಯರವರೂ ಕೂಡ ಹೇಳಿದರು. ಅದರ ನಂತರ ೭ನೇ ತಾರೀಖು ನನ್ನ ಕಚೇರಿಯಲ್ಲಿ ಈ ಒಂದು ಸಮಸ್ಯೆಯನ್ನು ಬಗೆಹರಿಸುವುದಕ್ಕೋಸ್ಕರ ಒಂದು ಸಭೆಯನ್ನು ಈಗಾಗಲೇ ಕರೆದಿದ್ದೇನೆ. ಅದಕ್ಕೆ ಪೂರ್ವದಲ್ಲಿ ನಾನು ಹೇಳುವಂಥದ್ದು ಇಷ್ಟೆ. ಇದನ್ನು ಯಾವುದೇ ರೀತಿಯಿಂದ ನಾವು ಇತ್ಯರ್ಥಗೊಳಿಸಬೇಕು ಎನ್ನತಕ್ಕಂಥದ್ದರಲ್ಲಿ ನಾವು ಕಡಿಮೆ ಕೆಲಸ

ಮಾಡಿಲ್ಲ ಎಂಬುದನ್ನು ಸ್ಪಷ್ಟಪಡಿಸುತ್ತಿದ್ದೇನೆ. ೭ನೇ ತಾರೀಖಿನ ನಂತರ ೨೧ನೇ ತಾರೀಖು ನಮ್ಮ ಲೇಬರ್ ಕಮೀಷನರ್‌ವ ಹೇಳಿ ಶ್ರೀ ಲೋಕಯ್ಯ ಶೆಟ್ಟಿಯವರನ್ನು ಕರೆಯಿಸಿ ಅವರ ಹತ್ತಿರ ಮಾತನಾಡಿದು ಹೇಳಿದ್ದೇವೆ. ಇದರಲ್ಲಿ ಏನು ವಿವಾದ ಇದೆ ? ಅವರ ಬೇಡಿಕೆ ಏನು ? ಏಕೆಂದರೆ ಸಸ್‌ಪೆನ್ಸ್‌ನಲ್ಲಿರತಕ್ಕ ವರ್ಕ್‌ರ್ಸ್ ಯಾರು ಇದ್ದಾರೆ ಅವರನ್ನು ಕೆಲಸಕ್ಕೆ ವಾಪಸ್ಸು ತೆಗೆದುಕೊಳ್ಳಬೇಕಾಗಿದೆಯೇ ? ಅಥವಾ ಕೆಲಸಕ್ಕೆ ತೆಗೆದುಕೊಳ್ಳಬಾರದೇ ? ಏಕೆಂದರೆ suspension is not a termination. ಅದರ ಬಗ್ಗೆ ಮುಂದೆ ವಿಚಾರಣೆ ಮಾಡಿ ಯಾವ ರೀತಿ ಇತ್ಯರ್ಥ ಮಾಡಬಹುದೋ ಅದರಂತೆ ಮಾಡಬಹುದು ಎಂದು ತಿಳಿಸಿದೆ. ಅಲ್ಲಿ ಏನು ೨ನೇ ತಾರೀಖು ಮುಷ್ಕರ ಪ್ರಾರಂಭವಾಯಿತು ಅದರ ಬಗ್ಗೆ ಕೇಳಿದರೆ, ಕಾರ್ಮಿಕ ವರ್ಗದವರು ಮುಷ್ಕರವನ್ನು ನಾವು ಪ್ರಾರಂಭ ಮಾಡಿಲ್ಲ, ಆದರೆ ಅವರು ನಮ್ಮನ್ನು ಕೆಲಸದ ಮೇಲೆ ತೆಗೆದುಕೊಳ್ಳುತ್ತಿಲ್ಲ ಎನ್ನುವ ವಾದವನ್ನು ೭ನೇ ತಾರೀಖು ನಡೆದಂತಹ ಮೀಟಿಂಗ್‌ನಲ್ಲಿ ನಿಮ್ಮ ಐ.ಎನ್.ಟಿ ಯು.ಸಿ. ಗುಂಪಿನ ಪತಿಯಿಂದ ಹಾಜರಿದ್ದಂತಹ ಶ್ರೀ ಸುಬ್ಬರಾವ್ ಅವರು ತಮ್ಮ ಸ್ಟೇಟ್‌ಮೆಂಟ್‌ನಲ್ಲಿ ಹೇಳಿದ್ದಾರೆ. ಆದರೆ ಮಾಲೀಕ ವರ್ಗದವರು ಮುಷ್ಕರ ಮಾಡಿದ್ದಾರೆ ಎನ್ನುವವಾದವನ್ನು ಅವರು ಇಟ್ಟಿದ್ದಾರೆ. ಈ ವಿಚಾರದಲ್ಲಿ ನಾನು ೨೧ನೇ ತಾರೀಖಿನ ದಿವಸ ಲೇಬರ್ ಕಮೀಷನರ್‌ರವರ ಹತ್ತಿರ ಹೇಳಿದಾಗ, ಅವರು ಮಾನ್ಯ ಸದಸ್ಯರಾದ ಅಡ್ಯಂತಾಯ ಅವರನ್ನು ಕರೆಯಿಸಿ ಮಾತನಾಡಿದಾಗ, ಮಾನ್ಯ ಸದಸ್ಯರಾದ ಅಡ್ಯಂತಾಯರವರು ಕೆಲವು ಕೆಲವು ಬೇಡಿಕೆಗಳನ್ನು ಇಟ್ಟಿದ್ದಾರೆ. ಅವು ಏನೆಂದರೆ, ರಹಸ್ಯ ಮತದಾನವನ್ನು ಮಾಡಬೇಕು. ನಾಯಕತ್ವದ ಪ್ರಶ್ನೆಯನ್ನು ಬಗೆಹರಿಸಬೇಕು. ಮತ್ತೆ ಯಾರ ಮೇಲೂ ಯಾವುದೇ ರೀತಿಯ ಶಿಸ್ತಿನ ಕ್ರಮವನ್ನು ತೆಗೆದುಕೊಳ್ಳಬಾರದು ಎನ್ನತಕ್ಕ ವಿಚಾರವನ್ನೂ ಕೂಡ ಅವರು ಹೇಳಿದ್ದಾರೆ, ಮತ್ತೆ ಬೆಂಗಳೂರು ಕೋರ್ಟಿನ ಮುಂದೆ ತೆಗೆದುಕೊಂಡಿರತಕ್ಕ ತಾತ್ಕಾಲಿಕ ತಡೆಯಾಜ್ಞೆಯನ್ನು ವಾಪಸ್ಸು ಪಡೆಯಬೇಕೆಂಬ ಕೆಲವು ಷರತ್ತುಗಳನ್ನಿಟ್ಟಿದ್ದಾರೆ. ಇದಾದ ನಂತರ ಕನ್ಸಿಲಿಯೇಷನ್ ಫೇಲ್ಯೂರ್ ಆದ ವರದಿ ಬಂತು, ಆ ವರದಿ ಬಂದ ನಂತರ ಯಾವ ರೀತಿಯಾಗಿ ಅದನ್ನು ರೆಫರ್ ಮಾಡಬೇಕೆಂಬ ಪ್ರಶ್ನೆ ಬರುತ್ತದೆ. ಕಾರ್ಮಿಕರ ವಿವಾದ ಮುಷ್ಕರವನ್ನು ಮತ್ತು ಕಾರ್ಮಿಕರ ಬೇಡಿಕೆಗಳನ್ನೂ ಸೇರಿಸಿ ಕೋರ್ಟಿಗೆ ರೆಫರ್ ಮಾಡಬೇಕಾಗುತ್ತದೆ.

ಶ್ರೀ ಎನ್. ಎಂ. ಅಡ್ಯಂತಾಯ.—ಇದೊಂದು ಪ್ರಮುಖವಾದುದು ಮುಷ್ಕರ ಎಂದು ಹೇಳೇ ಇಲ್ಲ. ಅದನ್ನು ಕ್ಲಿಯರಾಗಿ ಹೇಳಿದ್ದೇವೆ, It is a work stopage. ಅಷ್ಟು ದಿವಸಗಳ ಸಂಬಳವನ್ನು ಕೊಡಬೇಕೆಂದು ಕೇಳಿದೇವೆ.

ಶ್ರೀ ಎಸ್. ಕೆ. ಕಾಂತ.—ಇದರಲ್ಲಿ ಕೊಟ್ಟಿಲ್ಲ. ಆದರೂ ಕೂಡ ತಾವು ಹೇಳಿದ್ದೀರಿ ಇದಾದ ನಂತರ ನಮ್ಮ ಲೇಬರ್ ಕಮೀಷನರ್ ಲೋಕಯ್ಯ ಶೆಟ್ಟಿಯವರನ್ನೂ ಕೂಡ ಕರೆಯಿಸಿ ಮಾತನಾಡಿದ್ದಾರೆ. ಮಾನ್ಯ ಸದಸ್ಯರಾದ ಅಡ್ಯಂತಾಯವರು ಕೊಟ್ಟಿರತಕ್ಕ ವಿಷಯವನ್ನು ಅವರ ಮುಂದಿಟ್ಟು ಇದನ್ನು ಯಾವ ರೀತಿ ಬಗೆಹರಿಸುವುದು, ಚುನಾವಣೆಯನ್ನು ಸೀಕ್ರೆಟ್ ಬ್ಯಾಲೆಟ್ ಪ್ರಕಾರ ಮಾಡಬೇಕೆಂಬುದಕ್ಕೆ ಅಡ್ಯಂತಾಯರವರೂ ಕೂಡ ಒಪ್ಪಿದ್ದಾರೆ ನೀವು ಒಪ್ಪಿ ಎಂದು ಕೇಳಿದಾಗ, ಅವರು ಎಕ್ಸಿಕ್ಯುಟೀವ್ ಬಾಡಿ ಮೀಟಿಂಗ್ ಆದಮೇಲೆ ಬಂದು ಹೇಳುತ್ತೇನೆಂದೂ, ಸಿವಿಲ್ ಕೋರ್ಟ್‌ನಲ್ಲಿ ಕೇಸ್ ಹಾಕಿದ್ದೇವೆಂದು ಹೇಳಿ ಹೋದವರು ಬರಲಿಲ್ಲ. ಇದರಲ್ಲಿ, ನನ್ನ ಮಟ್ಟಿಗೆಯಾಗಲೀ ಅಥವಾ ಮಾನ್ಯ ಪಟೇಲರ ಮಟ್ಟಿಗೆಯಾಗಲೀ ತಾವು ಹೇಳಿದ ಹಾಗೆ ಯಾವುದೇ ರೀತಿಯಾದ ಒತ್ತಡಕ್ಕೆ ಮಣಿಯುವುದಿಲ್ಲ. ಕಾರ್ಮಿಕರ ಹಿತದೃಷ್ಟಿಯಿಂದ ಕೆಲಸ ಮಾಡುತ್ತೇನೆ. ಕಾರ್ಮಿಕರಿಗೆ ಯಾವುದೇ ರೀತಿಯಿಂದ ಅನ್ಯಾಯವಾಗುತ್ತದೆಂದು ಯಾರೇ ಹೇಳಿದರೂ ಅದು ೫೦ ಕಾರ್ಮಿಕರಿಗೆ ಸಂಬಂಧಪಟ್ಟಿದ್ದು ಇರಬಹುದು, ೨ ಸಾವಿರ ಕಾರ್ಮಿಕರಿಗೆ ಸಂಬಂಧಪಟ್ಟಿದ್ದು ಇರಬಹುದು ಆದಷ್ಟು ತೀವ್ರವಾಗಿ ಸಂಧಾನ ನಡೆಸಿ ಅವರ ಕೆಲಸವನ್ನು ಮಾಡುತ್ತೇನೆ. ಆ ಕೆಲಸವನ್ನು ನಾನು ಇತ್ತೀಚೆಗೆ ಮಾಡಿದ್ದೇನೆ. ನಾನು ಆ ವಿವರಣೆಯನ್ನು ಕೊಡಲು ಹೋಗುವುದಿಲ್ಲ. ಐಎನ್‌ಟಿಯು, ಸಿಐಟಿಯೂ, ಎಐಟಿಯುಸಿ ಮತ್ತು ಹೆಚ್‌ಎಂಎಸ್ ಯಾವುದೇ ಕಾರ್ಮಿಕ ಧುರಣರು ಬರಲಿ ನಾನು ಕೆಲಸ ಮಾಡುತ್ತೇನೆ. ಹೆಚ್‌ಎಂಎಸ್‌ನವರು ಇದುವರೆಗೆ ಬರಲಿಲ್ಲ. ನಾನು ಒಂದು ಕಾಲದಲ್ಲಿ ಹೆಚ್‌ಎಂಎಸ್‌ನ ಅಧ್ಯಕ್ಷನಾಗಿದ್ದೆ. ನಾನು ಅವರ ಪರವಾಗಿ ಸಹಾಯ ಮಾಡುತ್ತಿದ್ದೇನೆಂದು ನಿಮ್ಮ ಕಲ್ಪನೆಯಲ್ಲಿದ್ದರೆ ಅದನ್ನು ತೆಗೆದುಹಾಕಬೇಕು. ಯಾರದೋ ಒತ್ತಡ ತಂದಿದ್ದಾರೆ, ಯಾರದೋ ಒತ್ತಡಕ್ಕೆ ಮಣಿದಿದ್ದಾರೆ ಎನ್ನುವ ಕಲ್ಪನೆಯನ್ನು ನೀವು ಮಾಡಿಕೊಳ್ಳಬಾರದು ಈ ಸಂದರ್ಭದಲ್ಲಿ ಹೇಳುತ್ತಿದ್ದೇನೆ. ಈ ವಿಷಯದಲ್ಲಿ ಹೆಚ್ಚಾಗಿ ಹೇಳತಕ್ಕದ್ದು ಅವಶ್ಯವಿಲ್ಲ. ನಾನು ಈಗಾಗಲೆ ಹೇಳಿದ್ದೇನೆ. ಸಂಧಾನ ಮಾಡತಕ್ಕದ್ದು ಇದೆ, ನಾನು ಈಗಾಗಲೇ ಮಾಲೀಕ ವರ್ಗದವರಿಗೆ ಕಾರ್ಮಿಕ ವರ್ಗದವರಿಗೂ ಕೂಡ ತಂತಿ ಮೂಲಕ ಆದೇಶ ಕೊಟ್ಟಿದ್ದೇನೆ. ೭ನೇ ತಾರೀಖು ೪ ಗಂಟೆಗೆ ನಮ್ಮ ಕಛೇರಿಯಲ್ಲಿ ಒಂದು ಸಭೆಯನ್ನು ಕರೆಯುತ್ತೇನೆಂದು

ಈ ಸಂದರ್ಭದಲ್ಲಿ ಆಶ್ವಾಸನೆಯನ್ನು ಕೊಟ್ಟು, ತಾವು ಹೇಳಿದ ಹಾಗೆ ಯಾವುದೇ ಒತ್ತಡಕ್ಕೆ ಮಣಿಯುವುದಿಲ್ಲವೆಂದು ಇನ್ನೊಂದು ಸಲ ಹೇಳಿ, ಇಲ್ಲಿಗೆ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಬಿ. ಎ. ಉಮರಬ್ಬ.—ಮಾನ್ಯ ಸಚಿವರು ಈಗ ಯಾರ್ಯಾರನ್ನು ಸಭೆಗೆ ಕರೆದಿದ್ದಾರೆ ಅವರ ಜೊತೆಗೆ ನಮ್ಮೆಲ್ಲರ ಪರವಾಗಿ ವೀರಪ್ಪ ಮೊಯಿಲಿಯವರನ್ನು ಕರೆಯಬೇಕೆಂದು ಹೇಳುತ್ತೇನೆ.

ಶ್ರೀ ಜೆ. ಎಚ್. ಪಟೇಲ್.—ಆ ಸಭೆಗೆ ನಾನೂ ಹೋಗುತ್ತೇನೆ, ಮಾನ್ಯ ವೀರಪ್ಪ ಮೊಯಿಲಿಯವರು ಹೋಗುತ್ತಾರೆ.

ಶ್ರೀ ಎನ್. ಎಂ. ಅಡ್ಯಂತಾಯ.—ಮಾನ್ಯ ವೀರಪ್ಪ ಮೊಯಿಲಿಯವರು, ಉಮರಬ್ಬರವರು ವಸಂತಸಾಲಿಯಾನರವರು, ಬ್ಲೇಸಿಯಸ್ ಎಂ. ಡಿಸೌಜರವರು ಎಲ್ಲರನ್ನು ಕರೆಯಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಜೆ. ಹೆಚ್. ಪಟೇಲ್.—ಒಳ್ಳೆಯ ಕೆಲಸ ಮಾಡುವುದಕ್ಕೆ ಎಷ್ಟು ಜನ ಆದರೂ ಒಳ್ಳೆಯದು. ಎರಡು ಘಟನೆಗಳನ್ನು ಎರಡು ಸ್ಥಳಗಳಲ್ಲಿ ಆದ ಪರಿಸ್ಥಿತಿಯನ್ನು ಸದನದ ಮುಂದೆ ಚರ್ಚೆ ಮಾಡುವ ಉದ್ದೇಶದಿಂದ ಇಡೀ ರಾಜ್ಯದ ಉದ್ಯೋಗ ಪರಿಸ್ಥಿತಿಯನ್ನು ಚರ್ಚೆ ಮಾಡುವಂತಹ ವ್ಯವಸ್ಥೆಯಾಯಿತು. ಒಂದು ದಾವಣಗೆರೆ ಟೆಕ್ಸ್‌ಟೈಲ್ಸ್ ಬಗ್ಗೆ, ಮತ್ತು ಎಂ. ಸಿ. ಎಫ್. ಎರಡೂ ಜ್ವಲಂತ ಸಮಸ್ಯೆಗಳು. ಇವತ್ತು ಇಡೀ ರಾಜ್ಯದಲ್ಲಿರತಕ್ಕ ಉದ್ಯೋಗ ಸಮಸ್ಯೆಗಳ ಬಗ್ಗೆ ಚರ್ಚೆ ಮಾಡಲಿಕ್ಕೆ ಕಾಲ ಕೊಟ್ಟಿದ್ದು ಒಳ್ಳೆಯದು. ಅದರ ಜೊತೆಗೆ ಕೆಲವು ಸೈದ್ಧಾಂತಿಕ ವಿವರಗಳ ಉಲ್ಲೇಖಗಳು ಆಗಿವೆ. ಎಲ್ಲದಕ್ಕೂ ಸರ್ಕಾರ ಜವಾಬ್ದಾರಿ ಎಂದು ಆಲೋಚನೆ ಮಾಡುವ ಒಂದು ಸಿದ್ಧಾಂತವಿದೆ. ಮಗು ಹುಟ್ಟಿದಾಗಿನಿಂದ ಸತ್ತುಹೋಗುವ ತನಕ ಅದು ಹೆಣ್ಣು ಇರಲಿ, ಗಂಡು ಇರಲಿ ಅದರ ಮೇಲಿನ ಜವಾಬ್ದಾರಿ ಸರ್ಕಾರದ್ದು ಎನ್ನುವ ಒಂದು ಸಿದ್ಧಾಂತವಿದೆ. ಅದು ಕೂಲಿ ಸಂಬಂಧ ಇರಬಹುದು, ಬೆಲೆ ಸಂಬಂಧವಿರಬಹುದು ಇದನ್ನು ಸರ್ಕಾರ ನಿರ್ವಹಿಸ ಬೇಕಾಗುತ್ತದೆ. ಆ ವ್ಯವಸ್ಥೆ ಮತ್ತು ಅಂಥ ಸಿದ್ಧಾಂತದಲ್ಲಿ. ನಂಬಿಕೆ ಇಟ್ಟಿರತಕ್ಕಂಥ ಮಿತ್ರರಾದ ಶ್ರೀ ಕೃಷ್ಣನ್‌ರವರು, ಶ್ರೀ ಭೂಪತಿಯವರು ಪ್ರತಿಯೊಂದಕ್ಕೂ ಸರ್ಕಾರ ಕಾರಣ ಎಂದು ಹೇಳುತ್ತಾರೆ. ಎಲ್ಲಿಯಾದರೂ ರಸ್ತೆಯಲ್ಲಿ ಸೈಕಲ್ ಆಕ್ಸಿಡೆಂಟ್ ಆಗಿ ಒಬ್ಬ ಸತ್ತರೆ ಅದಕ್ಕೆ ಸರ್ಕಾರ ಕಾರಣ. ಮತ್ತೆ ಯಾರೋ ಹೆಣ್ಣುಮಕ್ಕಳಿಗೆ ಹೆರಿಗೆ ಆಗಾಗದ್ದರೆ ಅದಕ್ಕೆ ಸರ್ಕಾರ ಕಾರಣ. ಎಲ್ಲದಕ್ಕೂ ಸರ್ಕಾರ ಕಾರಣ ಎಂದು ಹೇಳುವುದು ಅದು ಅವರ ವಾದ. ಅದು ಅವರು ನಂಬಿರತಕ್ಕಂಥ ಸಿದ್ಧಾಂತ ಆ ದೇಶಗಳಲ್ಲಿ ಹಾಗೆ ನಡೆಯುತ್ತದೆ. ಅಲ್ಲಿ ಪ್ರತಿಯೊಂದನ್ನೂ ಸರ್ಕಾರವೇ ನೋಡಿಕೊಳ್ಳುತ್ತದೆ. ಆ ತತ್ವದಲ್ಲಿ ನನಗೆ ವಿಶ್ವಾಸ ಇಲ್ಲ. ಎಲ್ಲವನ್ನೂ ಸರ್ಕಾರವೇ ಮಾಡಬೇಕು ಎನ್ನುವುದು ಸಮಾಜವಾದಿ ವಾದವೇ ಅಲ್ಲ. ನಮ್ಮದು ಮೂಲಭೂತವಾಗಿ ಪಾರ್ಲಿಮೆಂಟರಿ ಡೆಮೊಕ್ರಸಿ ಪದ್ಧತಿಯಲ್ಲಿ ಓಟಿನಿಂದ ಸರ್ಕಾರ ಆಗಬೇಕು, ಈ ವಿಶ್ವಾಸ ಇರತಕ್ಕಂಥ ಕಾಂಗ್ರೆಸ್ ಗೆಳೆಯರು ಸಹ ಭೂಪತಿ, ಕೃಷ್ಣನ್ ತರಹ ಎಲ್ಲದಕ್ಕೂ ಸರ್ಕಾರ ಕಾರಣ ಎಂದು ಹೇಳಿದರೆ ನನಗೆ ದುಃಖ ಅಥವಾ ಆಶ್ಚರ್ಯ ಆಗುವುದಿಲ್ಲ. ತುಂಗಭದ್ರಾ ಪಾಲಿಫೈಬರ್ ಕಂಪನಿ ನಮ್ಮದಲ್ಲ, ಬೇರೆಯವರ ಕಂಪನಿ. ಜಪಾನ್‌ನಿಂದ ತಂದ ಯಂತ್ರಗಳನ್ನು ನಾವು ತನಿಖೆ ಮಾಡಬೇಕಾಗುತ್ತದೆ, ಅಲ್ಲಿ ಯಾರು ಕಮಿಷನ್ ಕೊಟ್ಟರು ಎಂದು ನಾವು ನೋಡಬೇಕಾಗುತ್ತದೆ. ಅಲ್ಲಿ ಒಬ್ಬ ಸರ್ಕಾರಿ ಚೇರ್ಮನ್ ಇದ್ದಾರೆ. ಅವರು ಫುಲ್ ಟೈಮ್ ಚೇರ್ಮನ್ ಅಲ್ಲ, ಇಲ್ಲಿಂದ ಕಳಿಸರತಕ್ಕಂಥ ಐ.ಎ.ಎಸ್. ಅಧಿಕಾರಿ, ಅಲ್ಲಿ ನಾಮಿನಲ್ ಚೇರ್ಮನ್ ಆಗಿದ್ದಾರೆ ಎಂದರೆ, ಈ ವ್ಯವಸ್ಥೆ ನಮ್ಮ ಮಿತ್ರರಿಗೆ ಅರ್ಥವಾಗುವುದಿಲ್ಲ. ಅಧ್ಯಕ್ಷರೇ, ರಾಜ್ಯದಲ್ಲಿ ೫೮ ಕಾರ್ಖಾನೆಗಳ ಪೈಕಿ ಸರ್ಕಾರಕ್ಕೆ ಗೊತ್ತಿರುವ ಹಾಗೆ ಸುಮಾರು ೧೬ ಕಾರ್ಖಾನೆಗಳು ಚೆನ್ನಾಗಿ ಕೆಲಸ ಮಾಡುತ್ತಿವೆ. ನಮ್ಮ ಸರ್ಕಾರ ಬಂದಮೇಲೆ ಬಹಳ ಕೆಟ್ಟ ಸ್ಥಿತಿಯಲ್ಲಿದ್ದು ಉತ್ತಮ ಸ್ಥಿತಿಗೆ ಬಂದಿರತಕ್ಕಂಥ ಕಾರ್ಖಾನೆಗಳು ಎಷ್ಟು ? ನಮ್ಮ ಸರ್ಕಾರ ಬಂದಮೇಲೆ ಚೆನ್ನಾಗಿದ್ದದ್ದು ಅದರ ಬಗ್ಗೆ ಆಲೋಚನೆ ಮಾಡಿ ಎಂದು ಕೇಳಿದರೆ ಪ್ರತಿಯೊಂದಕ್ಕೂ, ಸುಬ್ರಹ್ಮಣ್ಯ ಪಾರುಪತ್ಯ, ಸರ್ಕಾರ ಏಕೆ ಮಾಡುತ್ತದೆ ಎಂದರೆ ನಮ್ಮ ವಾದವೇ ಸುಬ್ರಹ್ಮಣ್ಯ ಪಾರುಪತ್ಯ. ಇದು ಮಾಸ್ಕೊ ಅಲ್ಲ, ಚೈನಾ ಅಲ್ಲ. ಇದು ಭಾರತ ನಮ್ಮ ವ್ಯವಸ್ಥೆ ಎಂತಹ ಚಿಂತಜನಕ ಆಗಿದೆ.......

ಶ್ರೀ ಕೆ. ಹೆಚ್. ಶ್ರೀನಿವಾಸ್.—ನೀವು ಮಂತ್ರಿಗಳಾಗಿ ಏನು ಕೆಲಸ ಮಾಡುವುದಕ್ಕೆ ಸಾಧ್ಯ ಇದೆಯೆಂದು ಹೇಳಿಬಿಡಿ.

ಶ್ರೀ ಜೆ. ಹೆಚ್. ಪಟೇಲ್.—ಈಗ ನಮ್ಮ ಜವಬ್ದಾರಿ ಏನು ? ಯಾವುದೇ ಒಂದು ಕಾರ್ಖಾನೆ ನಡೆಯುತ್ತಿರುತ್ತದೆ ಮತ್ತು ಅದರ ಮಾಲೀಕ ಖಾಸಗಿಯಾದವನು ಇರುತ್ತಾನೆ, ಆತನು ಷೇರುದಾರರ

ಹಣ ತಿಂದು ಜತರಿಗೆ ಮೋಸಮಾಡಿ ಕೂಲಿ ಕೊಡದೇ ಹೋದರೆ, ಪ್ರಾವಿಡೆಂಟ್ ಫಂಡ್ ಕೊಟ್ಟಿಲ್ಲದ್ದಿದ್ದರೆ, ಸರ್ಕಾರಕ್ಕೆ ತೆರಿಗೆ ಕೊಡದಿದ್ದರೆ ಕಾನೂನು ಪ್ರಕಾರ ಕ್ರಮತೆಗೆದುಕೊಂಡು ಆಗ ಪ್ರಾಸಿಕ್ಯೂಟ್ ಮಾಡಬಹುದು. ಆತನ ಮೇಲೆ ಕಂಪನಿ ಲಾ ಅಥವಾ ಕಾರ್ಪೊರೇಷನ್ ಲಾ ಇರಬಹುದು ಅದರ ಪ್ರಕಾರ ಕೇಸ್ ಹಾಕಬಹುದು. ನನಗೆ ದುಃಖವಾಗುತ್ತದೆ ಏನೆಂದರೆ, ಶ್ರೀ ಪಂಪಾಪತಿಯವರು ಮೂರು ಖಾಸಗಿ ಕಾರ್ಖಾನೆಗಳನ್ನು ಓಪನ್ ಮಾಡದಿದ್ದರೆ ಉಪವಾಸದಿಂದ ಸಾಯುತ್ತೇನೆ ಎಂದು ಹೇಳಿದರೆ, ಇದನ್ನು ಯಾವ ಸರ್ಕಾರ ಮಾಡುವುದಕ್ಕೆ ಸಾಧ್ಯವಿದೆ ? ಹಿಂದೆ ಯಾವುದೇ ಸರ್ಕಾರ ಮಾಡಿದೆಯೇ ? ಮುಂದೆ ಯಾವುದೇ ಸರ್ಕಾರ ಮಾಡುವುದಕ್ಕೆ ಸಾಧ್ಯವಿದೆಯೇ ? ಖಾಸಗಿ ಕಾರ್ಖಾನೆಗಳು ಮುಚ್ಚಲ್ಪಟ್ಟರೆ ಆತನನ್ನು ಕರೆಯಿಸಿ ಅಂತಹ ದುರಾವಸ್ಥೆ ಏಕೆ ಬಂತು ಎಂದು ಕೇಳಿ ಬೇಕಾದಂಥ ಕಾನೂನಿನ ರಕ್ಷಣೆ ಕೊಡುತ್ತೇವೆ, ನಮ್ಮ ಪೋಲೀಸ್ ವ್ಯವಸ್ಥೆಯು ಸಹಾಯ ಕೊಡುತ್ತೇವೆ, ಸರ್ಕಾರದಿಂದ ಹಣಕಾಸಿನ ವ್ಯವಸ್ಥೆ ಬೇಕು ಎಂದರೆ ಬ್ಯಾಂಕ್ ಗ್ಯಾರಂಟಿ ಕೊಡುತ್ತೇವೆ. ಎಷ್ಟರ ಮಟ್ಟಿಗೆ ಎಂದರೆ, ಮೇಲೆ ಹತ್ತಿದವನಿಗೆ ಸ್ವಲ್ಪ ಬೆಂಬಲ ಕೊಡಬಹುದು, ಔಷಧಿ ಕೊಡಬಹುದೇ ಹೊರತು ಬೇರೆ ಏನು ಮಾಡುವುದಕ್ಕಾಗುವುದಿಲ್ಲ, ಇದು ಭಾರತದಲ್ಲಿರತಕ್ಕಂಥ ವ್ಯವಸ್ಥೆ ಅದು ಯಾವುದೇ ಸರ್ಕಾರ ಆಗಿರಲಿ, ಜ್ಯೋತಿಬಸು ಸರ್ಕಾರ ಆಗಿರಬಹು. ರಾಜೀವಗಾಂಧಿ ಸರ್ಕಾರ ಇರಬಹುದು, ಅಥವಾ ರಾಮಕೃಷ್ಣ ಹೆಗಡೆ ಸರ್ಕಾರ ಇರಬಹುದು. ಇದು ವ್ಯವಸ್ಥೆ. ಈಗ ಯಾವುದೇ ಕಾರ್ಖಾನೆ ರೋಗಗ್ರಸ್ಥವಾಗಿದೆಯೆಂದರೆ ಅದರ ಮಾಲೀಕರನ್ನು ಕರೆಯಿಸಿ ನಾವು ದುಡ್ಡು ಕೊಡುವುದಿಲ್ಲ ದುಡ್ಡು ಕೊಡುವವರು ಯಾರಾದರೂ ಇದ್ದರೆ ನಾವು ಗ್ಯಾರಂಟಿ ಕೊಡುತ್ತೇವೆ ಎಂದು ಹೇಳುತ್ತೇವೆ. ಇನ್ನು ಕೆ. ಆರ್. ಮಿಲ್ಸ್ ಬಗ್ಗೆ, ಅವರು ಹೇಳಿದರು, ಇಂಥಿಂಥ ಡೇಟ್‌ನಲ್ಲಿ, ಇಂಥ ಎಲೆಕ್ಷನ್‌ಲ್ಲಿ ಹೋದಾಗ ಇಂಥ ಭಾಷಣ ಮಾಡಿದರು ಮತ್ತೇನೋ ಎಂದು. ನಾವು ಪ್ರಯತ್ನ ಮಾಡುವುದು ಎಂದರೆ ಏನು ಮಾಡುವುದು ? ಆತನನ್ನು ಪೋಲೀಸ್ ಕಸ್ಟಡಿಯಲ್ಲಿ ಇಡೋದು ಒಂದು ಬಿಟ್ಟಾರೆ ಅದು ಇಡಬೇಕಾಗುತ್ತದೆ. ಕಾನೂನು ಪ್ರಕಾರ ಜೈಲಿಗೆ ಹೋಗುವುದಾದರೆ ಹೋಗಿಯೇ ಹೋಗುತ್ತಾನೆ. ಕಳಿಸಬೇಕಾಗುತ್ತದೆ. ಅವನಿಗೆ ಬೇಲಬೆಲ್‌ವಾರೆಂಟ್, ನಾನ್ ಬೇಲಬಲ್‌ವಾರೆಂಟ್ ಕೊಟ್ಟು, ಕೋರ್ಟ್‌ನಿಂದ ಅರೆಸ್ಟ್ ಮಾಡಿಸುತ್ತಾರೆ. ಕೆ. ಆರ್. ಮಿಲ್ ಮಾಲೀಕ ಸರ್ಕಾರ ಕೊಡುವ ಸವಲತ್ತನ್ನು ಉಪಯೋಗಿಸಿಕೊಂಡಿದ್ದಾರೆ. ಕಾರ್ಮಿಕರು ಎಲ್ಲಾ ರೀತಿಯ ಸಹಕಾರ ಕೊಡುತ್ತಾರೆ. ಈ ಸಮಯದಲ್ಲಿ ಹೇಳುತ್ತೇನೆ, ಕಾರ್ಮಿಕರ ಸಹಕಾರ ಸಿಕ್ಕದೇ ಎಲ್ಲೂ ಫೇಲ್ ಆಗಿಲ್ಲ. ಕಾರ್ಮಿಕರ ಸಹಕಾರ ಎಲ್ಲಾ ಕಡೆ ಸಿಕ್ಕಿದೆ, ನಾವು ಕಾನೂನಿನ ಚೌಕಟ್ಟಿನಲ್ಲಿ ಏನು ಮಾಡಬಹುದೋ ಅದನ್ನು ಮಾಡುತ್ತೇವೆ. ಕೆಲವುಸಾರಿ ಆಶ್ಚರ್ಯವಾಗುತ್ತದೆ, ಯಾವುದೋ ಕಾರಣದಿಂದ ಮಹದೇವ ಟೆಕ್ಸ್‌ಟೈಲ್ ಮಿಲ್ಲನ್ನು ಈಗಿನ ಸರ್ಕಾರದವರು ಅದನ್ನು ವಹಿಸಿಕೊಂಡರು. ಅಲ್ಲಿರತಕ್ಕಂಥ ಕಾರ್ಮಿಕರಿಗೆ ತೊಂದರೆಯಾಗುತ್ತದೆಂದು ನಾವು, ಬಂಡವಾಳವನ್ನೂ ಕೊಟ್ಟು ನಡೆಸಿದ್ದೇವೆ, ಇದೇ ಸದನದಲ್ಲಿ ಹೇಳಿದರು. ಖಾಸಗಿ ಮಾಲೀಕರಿಗೆ ಸಹಾಯ ಮಾಡುವುದಕ್ಕೋಸ್ಕರ, ಅದರಲ್ಲೂ ನಮ್ಮ ಸಂಬಂಧಿ ಎಂದು ಹೇಳಿ, ಮಹದೇವ ಟೆಕ್ಸ್‌ಟೈಲ್ ಮಿಲ್ ತೆಗೆದುಕೊಂಡರು ಎಂದು. ಯಾವುದೋ ಕಾರಣದಿಂದ ಹಿಂದಿನ ಸರ್ಕಾರ ಮಾಡಿದ್ದಕ್ಕೆ ನಾವು ಹಾಲು ಹಾಕಿ ಬೆಳೆಸಿದರೆ, ನಮ್ಮ ಸಂಬಂಧಿ ಎಂದು ಹೇಳುತ್ತಿದ್ದಾರೆ ಈಗ ಇದಕ್ಕೂ ಕೊಡು, ಅದಕ್ಕೂ ಕೊಡು, ಕೆ. ಆರ್. ಮಿಲ್‌ಗೂ ಕೊಡು, ಗಣೇಶ ಮಿಲ್ಲಿಗೂ ಕೊಡು ಎಂದು ಹೇಳಿದರೆ, ಸರ್ಕಾರ ನಡೆಸುವುದಕ್ಕೆ ಸಾಧ್ಯವಾಗುತ್ತದೆಯೇ ? ನಾವು ಸ್ಟ್ಯಾಚುಟರಿ ಪವರ್ಸ್‌ನ್ನು ನಾವು ಎಕ್ಸರ್‌ಸೈಸ್ ಪ್ರಕಾರ ಏನು ಮಾಡಬಹುದೋ ಅದನ್ನು ಮಾಡಬಹುದು. ಇನ್ನು ಕಾರ್ಮಿಕರ ವ್ಯವಸ್ಥೆ ಬಗ್ಗೆ ಒಂದೆರಡು ಮಾತು ಹೇಳಬೇಕಾಗಿದೆ. ನಮ್ಮ ದೇಶದಲ್ಲಿ according to most of the Trade Union Leaders Sri Dange, Sri George Fernandes_trade unionism is limited to a few prospectives. ರೈತ ಕೃಷಿ ಕಾರ್ಮಿಕರಿಗೆ ಕೂಲಿ ಸಿಕ್ಕದೇ ಹೋದರೆ, ಅವನಿಗೆ ಸಿಗುವುದಕ್ಕೆ ಏನು ಬೇಕೋ ಅದನ್ನು ಬೆಳೆಯುತ್ತಾನೆ. ಅವನ್ನು ತನಗೋಸ್ಕರ ಆಹಾರಬೆಳೆಯುತ್ತಾನೆ ಎಂದರೆ, ಇಲ್ಲ ರೈತ ಬೆಳೆಯುವುದು ತನ್ನ ದೇಶಕ್ಕೋಸ್ಕರ ಎಂದು ಹೇಳುತ್ತಾರೆ. ಇದನ್ನೇ ನಿಷ್ಕಾಮ ಕರ್ಮ ಎಂದು ಹೇಳುವುದು. ಹಾಗೆಯೇ ಮಾಲೀಕರೂ ಕೆಲಸ ಮಾಡುತ್ತಾರೆ, ಅವನು ಮಾಡಲೇಬೇಕು. ರೈತ ತನ್ನ ಅನ್ನಕೋಸ್ಕರ ದುಡಿಯುತ್ತಾನೆ, ಇದು ದೇಶಕ್ಕೆ ಆಸ್ತಿಯವಾತ್ತದೆ. ಹಾಗೆಯೇ ಕಾರ್ಮಿಕ ತನ್ನ ಹೊಟ್ಟೆಗೋಸ್ಕರ ದುಡಿಯುತ್ತಾನೆ. ಅದು ದೇಶಕ್ಕೆ ಸೇರುತ್ತದೆ. ಇದು ವ್ಯವಸ್ಥೆ. ಅದಕ್ಕೋಸ್ಕರ ಮಾಡುತ್ತೇವೆ, ಇದಕ್ಕೋಸ್ಕರ ಮಾಡುತ್ತೇವೆ ಎನ್ನುವುದಲ್ಲ. ಇಂತಹ ವಿಚಾರವನ್ನು

ಟ್ರೇಡ್ ಯೂನಿಸಮ್ ಇದ್ದರೂ ಕೂಡ ನಾಲ್ಕೂವರೆ ಬೋನಸ್ ಕೊಟ್ಟರೆ ನನ್ನ ಕೈಯಲ್ಲಿ, ೫ ರೂಪಾಯಿ ಕೊಟ್ಟರೆ ಇನ್ನೊಬ್ಬರ ಕೈಯಲ್ಲಿ ಎಂದು ಹೇಳಿದರೆ. ನಮ್ಮ ಕಾರ್ಖಾನೆಗಳು ಉಳಿಯುತ್ತವೆಯೇ ? ಟ್ರೇಡ್ ಯೂನಿಸಮ್ ಯಾವ ಉದ್ದೇಶಕ್ಕೆ ಮಾಡುತ್ತೇವೆ ಅದು ಉಳಿಯುತ್ತದೆಯೇ ಟ್ರೇಡ್‌ಯೂನಿಸಮ್‌ಗೆ ನ್ಯಾಷನಲ್ ಪರ್ಸ್‌ಫೆಕ್ಟೀವ್ ಬೇಕು. ಎಷ್ಟು ಈ ದೇಶದ ಅರ್ಥ ವ್ಯವಸ್ಥೆಯಲ್ಲಿ ಈ ದೇಶದಲ್ಲಿರತಕ್ಕ ಆರ್ಥಿಕ ವ್ಯವಸ್ಥೆಯಲ್ಲಿ ಏನು ಆಗುವುದಕ್ಕೆ ಸಾಧ್ಯ. ಇದನ್ನು ನಾವು ಬಹಳ ಸಾರಿ ಚರ್ಚೆ ಮಾಡಿದ್ದೇವೆ. ಪ್ರೊಡಕ್ಟಿವಿಟಿ ಇಲ್ಲದೇ ಹೋದರೆ ಹೇಗೆ ? ಇಡೀ ರಾಷ್ಟ್ರಕ್ಕೆ ಆಪತ್ತು ಬಂದಾಗ ವ್ಯಕ್ತಿ ತನ್ನದೇ ಆದಂಥ ಒಂದು ಡಿಸಿಪ್ಲೀನ್ ಹಾಕಿಕೊಳ್ಳದೇ ಹೋದರೆ ಹೇಗೆ ? ಬರೀ ನನಗೆ ಸಂಬಳ ಜಾಸ್ತಿ ಕೊಡಿ ಎಂದು ಕೇಳಿದರೆ ಹೇಗಾಗುತ್ತದೆ ? ಅದಕ್ಕೆ ಎಲ್ಲೋ ಒಂದು ಕಡೆ ಟೋಟಲ್ ಪರ್‌ಪೋಸ್‌ನ್ನು ಮರೆಯುತ್ತಿದ್ದೇವೆ. ಎಲ್ಲರೂ ಒಂದೇ. ಆ ಪಾರ್ಟಿ, ಈ ಪಾರ್ಟಿ ಸುದ್ದಿ ಅಲ್ಲ. we are missing our target for very purpose for what we are here, ಇದನ್ನು ಸರಿಮಾಡಿಕೊಳ್ಳಬೇಕು. ೪ ತಿಂಗಳು ಕೂಲಿ ಬರದೇಹೋದರೂ ಬರೀ ತತ್ವ ಹೇಳಿಬಿಟ್ಟರೆ ಆಗುತ್ತದೆಯೇ ? ಏನಾದರೂ ವ್ಯವಸ್ಥೆ ಮಾಡಬೇಕು. ಸುಮ್ಮನೇ ಮಿಲ್ ತೆಗೆದು ಕೊಂಡು, ಬಿಡಿ ಎಂದು ಹೇಳಿದರೆ ಆಗುವುದಿಲ್ಲ. ಈ ತರಹ ಇರತಕ್ಕ ಮಿಲ್ಲುಗಳನ್ನು ತೆಗೆದುಕೊಳ್ಳುವುದಿಲ್ಲ ಎಂದು ಮಾನ್ಯ ರಾಜೀವ್ ಗಾಂಧಿಯವರೇ ಎಷ್ಟೋಸಾರಿ ಹೇಳಿದ್ದಾರೆ, ಮಹಾರಾಷ್ಟ್ರದಲ್ಲಿ ಟೆಕ್ಸ್‌ಟೈಲ್ ಮಿಲ್ ಕ್ಲೋಸ್ ಆದಾಗ ಹೇಳಿದರು. ಬಿಹಾರದ ಗಣಿ ಸಮಸ್ಯೆ ಬಂದಾಗ ಹೇಳಿದರು. **Government is not a garrage for sick industries and I am not going to waste the peoples money over this Even Mr. Gorbachev. who is such a powerful man of such a Powerful country which has different system—he himself said I am going to close sick industries.**

೩–೩೦ ಪಿ. ಎಂ.

ಸಿಕ್ ಇಂಡಸ್ಟ್ರೀಸ್ ವಿಚಾರದಲ್ಲಿ ಒಂದು ಸರ್ವಕಾಲೀಕವಾದ ಹಾಗೂ ಸರ್ವದೇಶಿಕ ಅಪ್ಲೈ ಆಗತಕ್ಕಂಥ ಒಂದು ಸಿದ್ಧಾಂತ ಎಲ್ಲೂ ಇಲ್ಲ. ಯಾವುದಾದರೂ ಒಂದು ಕೋ ಆಪರೇಟೀವ್ ಶುಗರ್ ಮಿಲ್ ಹಾಳಾಗುತ್ತದೆ. ಅದನ್ನು ಹರಾಜು ಹಾಕಿ ಮಾರಾಟ ಮಾಡುತ್ತೇವೆ ಎಂದ ಕೂಡಲೇ ಖೋಡೆಗೆ ಕೊಟ್ಟಿರುತ್ತೀರಾ ಎನ್ನುವುದು. ಹಾಗೆಯೇ ಬಿಟ್ಟರೆ ಇನ್ನೊಂದು ಹೇಳುವುದು. ಏನಾದರೂ ಅದನ್ನು ಮಾರಾಟ ಮಾಡಿ ಇನ್ನು ಯಾವುದಾದರೂ ಇಂಡಸ್ಟ್ರೀಸ್‌ಗೆ ಅದನ್ನು ಇನ್‌ವೆಸ್ಟ್ ಮಾಡೋಣ ಎಂದರೆ ಇನ್ನೊಂದು ಹೇಳುವುದು. ಹೀಗೆಪ್ರತಿ ಒಂದೊಂದಕ್ಕೂ ಇಂಟರ್‌ಪ್ರಿಟ್ ಮಾಡುತ್ತಾ ಹೋದರೆ ಹೇಗೆ ? how law any body operates ? ನಮಗೆ ಅವರು ಬೇರೆ, ಇವರು ಬೇರೆ ಎಂದು ಇಲ್ಲ, ಇನ್ನು ಎಂ. ಸಿ. ಎಫ್. ವಿಷಯ ನನ್ನ ಗಮನಕ್ಕೆ ಬಂದ ತಕ್ಷಣ ನಾನು ಕೇಳಿದೆ. ಸೀಕ್ರೇಟ್ ರಿಪೋರ್ಟ್, ಇಂಟಲಿಜೆನ್ಸ್ ರಿಪೋರ್ಟ್, ಡಿ. ಸಿ. ಹಾಗೂ ಇತರ ಆಫೀಸರ್ಸ್ ಎಲ್ಲರನ್ನು ಕರೆಯಿಸಿ ಕೇಳಿದೆ. ಅಲ್ಲಿರುವ ವಿಷಯ ಏನು ? ಮ್ಯಾನೇಜಮೆಂಟ್‌ಗೂ ವರ್ಕರ್ಸ್‌ಗೂ ನೇರವಾಗಿ ಇರತಕ್ಕ ಕ್ಲಾಷ್ ಅಲ್ಲ. ಮ್ಯಾನೇಜ್‌ಮೆಂಟ್‌ಗೂ ವರ್ಕರ್ಸ್‌ಗೂ ಒಳ್ಳೆಯ ಬಾಂದವ್ಯ ಇದೆ. ಕಾರಣಾಂತರ ದಿಂದ ಯೂನಿಯನ್ ಅವರದ್ದೇ, ಇವರದ್ದೇ ಎಂಬ ಭಿನ್ನಾಭಿಪ್ರಾಯ ಬಂತು. ಅಲ್ಲೊಂದೇ ಕಡೆ ಅಲ್ಲ, ಎಲ್ಲಾ ಕಡೆ ಬರುತ್ತದೆ. ಈ ಟ್ರೇಡ್ ಯೂನಿಸಮ್ ಹೇಗೆ ಎಂದರೆ, ಎರಡೂಕಡೆ ಜಗ್ಗುತ್ತಾ ಜಗ್ಗುತ್ತಾ ಎಷ್ಟು ಬೇಗ ಹರಿಯುತ್ತದೆ. ಅಷ್ಟು ಬೇಗ ಹರಿಯುವುದಕ್ಕೆ ಹೋಗುತ್ತಾರೆ. ಈ ರೀತಿ ನೂರಾರು ಇನ್‌ಸ್ಟೆನ್‌ಸಸ್ ಇದೆ. ಅದನ್ನು ಏನಾದರೂಮಾಡಿ ಸೆಟಲ್‌ಮೆಂಟ್ ಮಾಡಬೇಕೆಂದು ಹೇಳಿದೆ. ಮಾನ್ಯ ಅಂಡ್ಯತಾಯ ಅವರ ಲೀಡರ್‌ಶಿಪ್ ನಮಗೆ ಬೇಕೆಂದು ಜಾಸ್ತಿ ಜನ ಹೇಳಿದರೆ ಇದರಲ್ಲಿ ನನಗೆ ಹಾಗೂ ನಮ್ಮ ಸರಕಾರಕ್ಕೆ ಯಾವುದೇ ಪಾಯಿಂಟ್ ಇಲ್ಲ. ನಮ್ಮ ಪಾರ್ಟಿ ಜನತಾ ಪಾರ್ಟಿನೇ ಇರಬಹುದು, ನಮಗೆ ಏನೂ ಬೇರೆ ವಿಚಾರ ಇಲ್ಲ. ಜಾಸ್ತಿಜನ ಯಾರು ಹಿಂದೆ ಇದ್ದಾರೋ ಅದನ್ನು ಅಸೆಸ್ ಮಾಡುವುದಕ್ಕಾದರೂ ಸಹ ಒಳ್ಳೆಯ ವಾತಾವರಣ ಬೇಕಲ್ಲ. ಅಲ್ಲಿ ಸಮಸ್ಯೆ ಏನಿತ್ತು ಎಂದರೆ, ಅಶಿಸ್ತು ಹಾಗೂ ಮತ್ತೊಂದರ ಮೇಲೆ ಐದು ಜನ ತಪ್ಪು ಮಾಡಿದಂಥ ಕಾರ್ಮಿಕರನ್ನು ಶಿಸ್ತಿನ ಕ್ರಮಕ್ಕೆ ಒಳಪಡಿಸಿದರು. ಅವರು ಮಾಡಿದಂಥ ಒಂದೇ ಒಂದು ಕೆಲಸವನ್ನು ನಾನು ನಿಮಗೆ ಹೇಳುತ್ತೇನೆ. ಹೇಳದೇ ಕೇಳದೇ ಪ್ಲಾಂಟ್ ಕ್ಲೋಸ್ ಮಾಡದೆ, ಹೊರಟು ಹೋದರು. ಯಾರ ಮೇಲಿನ ಸಿಟ್ಟನ್ನು ಯಾರ ಮೇಲೋ ತೋರಿಸುವಹಾಗೆ. ಹೈಡ್ರೋಜನ್ ಪ್ಲಾಂಟ್ ಇರಬಹುದು ಬಹಳ ಬೇಗ ಬೆಂಕಿ ಹತ್ತಿಕೊಳ್ಳತಕ್ಕದ್ದು, ಒಳ್ಳೆಯ ಪ್ರೆಜರ್ ಇರತಕ್ಕ, ಹೈಡ್ರೋಜನ್ ಪ್ಲಾಂಟ್ ಇನ್ನೊಂದೆರಡು ಟೆಕ್ನಿಕಲ್ ನೇಮ್ ಇದೆ, ನಾನು ಎಂಜಿನಿಯರ್ ಅಲ್ಲ ನನಗೆ

ಸರಿಯಾಗಿ ಗೊತ್ತಿಲ್ಲ. ಇನ್ನೊಂದೆರಡು ಪ್ಲಾಂಟ್‌ಗಳನ್ನು ಕ್ಲೋಸ್ ಮಾಡದೇ ಹಾಗೆ ಕೈಬೀಸಿಕೊಂಡು ಹೊರಟು ಹೋದರು. ದುರಾದೃಷ್ಟವಶಾತ್ ಏನಾದರೂ ಒಂದು ಕಿಡಿ ಬಿದ್ದಿದ್ದರೆ ಅರ್ಧ ಮಂಗಳೂರು ಸುಟ್ಟು ಹೋಗುತ್ತಿತ್ತು, ಸಾವಿರಾರು ಜನ ಭೂಪಾಲ್‌ನಲ್ಲಿ ಯಾವರೀತಿ ಸತ್ತರು ಆ ರೀತಿ ಸಾಯುತ್ತಿದ್ದರು. ದೊಡ್ಡ ಟ್ರಾಜಿಡಿ ಆಗಿಹೋಗುತ್ತಿತ್ತು. ಈ ರೀತಿ ಬೇಜವಾಬ್ದಾರಿಯಿಂದ ವರ್ತನೆ ಮಾಡಿದರೆ ಶಿಸ್ತಿನ ಕ್ರಮ ತೆಗೆದುಕೊಳ್ಳದೆ ಮುತ್ತು ಕೊಡುತ್ತಾರೆಯೆ ? ಶಿಸ್ತಿನ ಕ್ರಮ ತೆಗೆದು ಕೊಳ್ಳಲೇಬೇಕು. ಆಫೀಸ್‌ಗೆ ನುಗಿ ಆಫಿಸರ್‌ಗೆ ಬೆದರಿಸುವುದು.

ಶ್ರೀ ಎನ್. ಎಂ. ಅಡ್ಯಂತಾಯ.—ಮಿಥೈಲ್ ಐಸೋಸಿಯನೇಟ್ ಆಗಿದ್ದರೆ ಭೂಪಾಲ್ ಪರಿಸ್ಥಿತಿ ಬರುತ್ತಿತ್ತು. ಆದರೆ ಇದು ಅಮೋನಿಯಾ. ಆದರೆ ಇವತ್ತಿನದಿವಸ ಅಲ್ಲಿ ಕೇವಲ ೮.೩೨ ಪರ್ಸೆಂಟ್ ವರ್ಕರ್ಸ್ ಇದ್ದು ಅಪ್ರೆಂಟೀಸ್‌ಗಳಿಂದ ಅವರು ಪ್ಲಾಂಟ್ ಸ್ಟಾರ್ಟ್ ಮಾಡುವುದಕ್ಕೆ ಯಾವಾಗ ಟ್ರೈ ಮಾಡುತ್ತಾರೆ ಆಗ ಈ ಪರಿಸ್ಥಿತಿ ಉದ್ಭವವಾಗುತ್ತದೆ, ಅದು ಏನಾದರೂ ಬರ್ಸ್ಟ್ ಆದರೆ ಸಂಪೂರ್ಣ ಮಂಗಳೂರು ಪಟ್ಟಣ ನಾಶವಾಗಿ ಹೋಗುತ್ತದೆ. ಅದಕ್ಕೋಸ್ಕರ ನಾನು ಹೇಳಿದ್ದು, ಅವರು ಪ್ಲಾಂಟ್ ಸ್ಟಾರ್ಟ್ ಮಾಡುವುದಕ್ಕೆ ಪ್ರಯತ್ನ ಮಾಡುತ್ತಿದ್ದಾರೆ. ಅಲ್ಲಿ ಶೇಕಡಾ ೮.೩೨ ಪರ್ಸೆಂಟ್ ವರ್ಕರ್ಸ್ ಮಾತ್ರ ಇದ್ದಾರೆ. ಅದೂ ಟೆಕ್ನಿಕಲಿ ಕಾಂಪಿಟೆಂಟ್ ಪರ್ಸನ್ಸ್ ಅಲ್ಲಿ ಇಲ್ಲ. ಟೆಕ್ನಿಕಲಿ ಕಾಂಪಿಟೆಂಟ್ ಪರ್ಸನ್ಸ್ ಯಾರಿದ್ದಾರೆ ಅವರು ಒಂದು ಸಲ ಸ್ಟಾರ್ಟ್ ಮಾಡಿದರೆ ಇದು ಕಂಟಿನ್ಯೂಯಸ್ ಪ್ರೊಸೆಸ್. ೩೦ ದಿನಗಳ ಕಾಲ ರನ್ ಆಗಬಹುದು. ಒಬ್ಬನೇ ಇದ್ದರೂ ಸಾಕು ರನ್ ಮಾಡಿಕೊಂಡು ಹೋಗಬಹುದು, ಅದನ್ನು ಸಂಪೂರ್ಣವಾಗಿ ತಿಳಿದುಕೊಂಡಿರುವಂತಹ ವರ್ಕರ್ಸ್ ಇದ್ದರೆ ಏನೂ ತೊಂದರೆ ಇಲ್ಲ. ಆದರೆ ಅಲ್ಲಿ ಅದನ್ನು ತಿಳಿಯದೇ ಇರುವಂತಹ ವರ್ಕರ್ಸ್ ಇದ್ದಾರೆ. ಅದನ್ನು ತಿಳಿಯದಂಥ ವರ್ಕರ್ಸ್ ಇಲ್ಲದ ಪಕ್ಷದಲ್ಲಿ ಪ್ಲಾಂಟ್ ಬರ್ಸ್ಟ್ ಆಗುವ ಸಂಭವ ಇದ್ದು ಇಡೀ ಮಂಗಳೂರು ಪಟ್ಟಣ ನಾಶವಾಗುತ್ತದೆ.

ಶ್ರೀ ಜೆ. ಹೆಚ್. ಪಟೇಲ್.—ಆ ಅಪಾಯ ಬರದಹಾಗೆ ಯೋಚನೆ ಮಾಡುವುದು ನಮ್ಮ ಹಾಗೂ ನಿಮ್ಮ ಇಬ್ಬರ ಕರ್ತವ್ಯ. ಎಲ್ಲರದ್ದೂ ಕೂಡಾ. ಅಂತಹ ಅಪಾಯ ಆಗಬೇಕೆಂಬ ವಿಚಾರ ಮಾಡಿದರೆ ಅದಕ್ಕಿಂತ ಅಮಾನುಷವಾದ ವಿಚಾರ ಮತ್ತೊಂದಿಲ್ಲ. ಇದು ನಾವು ನೀವು ಎಲ್ಲರೂ ಯೋಚನೆ ಮಾಡಬೇಕಾದ ವಿಚಾರ. ಯಾರೋ ಆಫಿಸ್‌ಗೆ ಹೋಗಿ ಆಫೀಸರ್‌ಗೆ ಚಾಕು ಹಾಕುವುದು.

೩–೩೦ ಪಿ. ಎಂ.

ಕಾರ್ಮಿಕರಲ್ಲಿ ಒಂದು ಕಡೆ ಅಶಿಸ್ತು ಬೆಳೆಯುವುದಕ್ಕೆ ಬಿಟ್ಟರೆ, ಪರಿಸ್ಥಿತಿ ಟ್ರೇಡ್ ಯೂನಿಯನ್‌ಗಳ ಕೈಮೀರಿ ಹೋಗುತ್ತದೆ. ಮ್ಯಾನೇಜ್‌ಮೆಂಟ್ ಕೈಮೀರಿ ಹೋಗುತ್ತದೆ, ಸರಕಾರದ ಕೈಮೀರಿ ಹೋಗುತ್ತದೆ. ನಮ್ಮಪಕ್ಷದ ಲೀಡರ್ ಏನೂ ಮಾಡುವುವಕ್ಕೆ ಆಗುವುದಿಲ್ಲ, ನಿಮ್ಮ ಪಕ್ಷದ ಲೀಡರ್ ಏನೂ ಮಾಡುವುದಕ್ಕೆ ಆಗುವುದಿಲ್ಲ. ಐ. ಎನ್. ಟಿ. ಯು. ಸಿ. ಯಲೀಡರ್ ಸಹ ಏನೂ ಮಾಡು ವುದಕ್ಕೆ ಆಗುವುದಿಲ್ಲ. ಇದು ಆಗಬಾರದು. ಆ ರೀತಿ ಆಗ

(ಮಾನ್ಯ ಅಧ್ಯಕ್ಷರು ಅಧ್ಯಕ್ಷ ಪೀಠದಲ್ಲಿ ಉಪಸ್ಥಿತರಾದರು)

ಬಾರದು. ಸಾವಿರಾರು ಜನರು ಇರುವಂತಹ ಜಾಗದಲ್ಲಿ ಇಂತಹ ಒಂದೆರಡು ಇಷ್ಯೂಗಳನ್ನು ತೆಗೆದುಕೊಂಡು ಸ್ಟ್ರೈಕ್ ಮಾಡಬಾರದಾಗಿತ್ತು. ತಪ್ಪುಮಾಡಿದವರನ್ನು ಮ್ಯಾನೇಜ್‌ಮೆಂಟ್ ಸಸ್ಪೆಂಡ್‌ಮಾಡಿದ್ದಾರೆ, ಪುನಃ ಬೇಕಾದರೆ ಅವರನ್ನು ಕ್ಷಮಿಸಬಹುದಿತ್ತು. ಅಲ್ಲಿ ಬೇರೆ ಯಾವ ಒಂದು ಡಿಮ್ಯಾಂಡ್ ಸಹ ಇರಲಿಲ್ಲ. ಆ ರೀತಿ ಏನಾದರೂ ಇದ್ದಿದ್ದರೆ ಅದನ್ನು ವಿಚಾರ ಮಾಡಬಹುದಿತ್ತು. ಮಾನ್ಯ ಸದಸ್ಯರಾದಂಥ ಉಮರಬ್ಬನವರು ಹೇಳಿದಹಾಗ ಅಲ್ಲಿ ಒಂದು ಪ್ರಿಸ್ಟೀಜ್ ಪ್ರಶ್ನೆ ಉದ್ಭವವಾಗಿತ್ತು, ನಮ್ಮದು ನಡೆಯಬೇಕು, ನಮ್ಮದು ನಡೆಯಬೇಕೆನ್ನುವುದು. ಈ ಒಂದು ಇಷ್ಯೂವನ್ನು ಬರೀ ಇಂಟಕ್‌ನವರೇ ಮಾಡಿದರು ಎಂದು ನಾನು ಹೇಳುವುದಿಲ್ಲ. ಪೋಲೀಸ್ ರಿಪೋರ್ಟ್ ಪ್ರಕಾರ ಕೋರ್ಟಿನಲ್ಲಿ ಎಷ್ಟು ಕೇಸ್‌ಗಳನ್ನು ಹಾಕಿದ್ದಾರೆಂದರೆ ೧೫ ಕ್ರಿಮಿನಲ್ ಕೇಸ್‌ಗಳನ್ನು ಹಾಕಿದ್ದಾರೆ. ಇದರಲ್ಲಿ ಮರ್ಡರ್ ಕೇಸ್‌ಗಳು ಸೇರಿವೆ, ಅಸಾಲ್ಟ್ ಕೇಸ್‌ಗಳು ಸಹ ಸೇರಿವೆ. ಯಾವ್ಯಾವ ಸೆಕ್ಷನ್ ಬೇಕೋ ಆ ಎಲ್ಲಾ ಸೆಕ್ಷನ್‌ಗಳಲ್ಲಿ ಕೇಸ್‌ಗಳನ್ನು ಹಾಕಿದ್ದಾರೆ. ಆದರೆ ಐ. ಪಿ. ಸಿ. ಸೆಕ್ಷನ್ಸ್‌ನಲ್ಲಿ ಕೇಸ್‌ಗಳನ್ನು ಮಾತ್ರ ಹಾಕಿಲ್ಲ, ಕೆಲವು ಕೇಸ್‌ಗಳಲ್ಲಿ ಮಚ್ಚಿನಿಂದ ಸಹ ಒಡೆದಿದ್ದಾರೆಂದು ರಿಪೋರ್ಟ್‌ನಲ್ಲಿದೆ, ಇಂತಹ ಕೆಲಸಗಳನ್ನು ಕಾರ್ಮಿಕರು ಫ್ಯಾಕ್ಟರಿ ಏರಿಯಾದಲ್ಲಿ ಮಾಡಿದ್ದಾರೆ. ಫ್ಯಾಕ್ಟರಿ ಏರಿಯಾ ಸೆನ್ಸಿಟೀವ್ ಏರಿಯಾ. ಅಲ್ಲಿ ಮಂಗಳೂರು ಪೋರ್ಟ್ ಸಹ ಇದೆ, ಅಲ್ಲದೇ ಅದು ಇಂಡಸ್ಟ್ರೀಯಲ್ ಏರಿಯಾ. ಅಲ್ಲಿ ಉತ್ಕೃಷ್ಟವಾದ ಕೈಗಾರಿಕೆಗಳು ಬರುವುದಕ್ಕೆ ಒಳ್ಳೆಯ ವಾತಾವರಣ

ವಿರತಕ್ಕಂಥ ಪ್ರದೇಶ. ಈಗಾಗಲೇ ಈ ಮಂಗಳೂರು ಏರಿಯಾವನ್ನು ಸಾಕಷ್ಟು ಡೆವಲಪ್‌ಮೆಂಟ್ ಮಾಡಬೇಕೆಂದಿದ್ದಾರೆ. ಇಲ್ಲಿ ಆಯಿಲ್ ರಿಫೈನರಿ ಬರಬಹುದು. ಸೂಪರ್ ಥರ್ಮಲ್ ಪ್ಲಾಂಟ್ ಬರಬಹುದು, ಬೇರೆ ದೇಶದವರು ಸಹ ಇಲ್ಲಿಗೆ ಬಂದು ಕೈಗಾರಿಕೆಗಳನ್ನು ಸ್ಥಾಪನೆ ಮಾಡಬಹುದು. ಇಂತಹ ಸಂದರ್ಭದಲ್ಲಿ ಇಲ್ಲಿನ ವಾತಾವರಣವನ್ನು ಕೆಡಿಸಿದರೆ ಇದರಿಂದ ಇಡೀ ರಾಷ್ಟ್ರಕ್ಕೆ ನಷ್ಟವಾಗುತ್ತದೆ. ಇಲ್ಲಿ ಯಾರೂ ಹಠ ಮಾಡಬಾರದು. ಈ ವಿಚಾರವಾಗಿ ನಾನು ಮಾನ್ಯ ವೀರಪ್ಪ ಮೊಯಿಲಿಯವರಿಗೂ ಫೋನ್ ಮಾಡಿ ಹೇಳಿದ್ದೇನೆ. ಮಾನ್ಯ ಪೂಜಾರಿಯವರಿಗೂ ಹೇಳಬೇಕೆಂದು ಫೋನ್ ಮಾಡಿದ್ದೆ ಆದರೆ ಅವರು ಸಿಗಲಿಲ್ಲ. ಮತ್ತೆ ಮಾನ್ಯ ಪ್ರಭುರವರಿಗೂ ಹೇಳಿದ್ದೇನೆ. ಮಾನ್ಯ ಮುಖ್ಯ ಮಂತ್ರಿಗಳು ಪ್ರಧಾನ ಮಂತ್ರಿಗಳಿಗೆ ಕಾಗದ ಬರೆದು ತಿಳಿಸಿದ್ದಾರೆ. ಜೊತೆಗೆ ಅವರು ಡೆಲ್ಲಿಗೆ ಹೋದಾಗ ಈ ವಿಚಾರವಾಗಿ ಪ್ರಸ್ತಾಪ ಮಾಡಬಹುದು. ಈ ರೀತಿಯ ವಾತಾವರಣವನ್ನು ಅಲ್ಲಿ ನಾವು ಈಗಾಗಲೇ ಸೃಷ್ಟಿ ಮಾಡಿಕೊಂಡರೆ ನಮ್ಮ ಇಂಡಸ್ಟ್ರೀಗಳು ಬೆಳೆಯುವುದಕ್ಕೆ ತಡವಾಗುತ್ತದೆ. ಅಲ್ಲಿ ಸೆನ್ಸಿಟೀವ್ ವಾತಾವರಣವಿರಬೇಕು. ಸೆನ್ಸಿಟೀವ್ ವಾತಾವರಣವನ್ನು ಕದಡಿಸಲು ಯಾವುದೇ ರೀತಿಯ ರಾಜಕೀಯ ಒತ್ತಡಗಳಿಗೂ ಮಣಿಯಬಾರದೆಂದು ನಾವು ಪೋಲೀಸಿನವರಿಗೂ ಹೇಳಿದ್ದೇವೆ. ಆ ರೀತಿ ಏನಾದರೂ ರಾಜಕೀಯ ಒತ್ತಡಗಳಿಗೆ ಮಣಿದರೆ ನಿಮ್ಮನ್ನು ಅಲ್ಲಿಂದ ಬೇರೆ ಕಡೆಗೆ ಕಳುಹಿಸಿಕೊಡುತ್ತೇವೆಂದು ಸಹ ಹೇಳಿದ್ದೇನೆ. ಯಾವುದೇ ಒಂದು ಒಳ್ಳೆಯ ಕೆಲಸವಾಗಬೇಕಾದರೆ ಅದಕ್ಕೆ ಕಾಲ ಒಂದೇ ಸಿದ್ಧಪಡಿಸದ ಆ ಕಾಲ ಈಗ ಬಂದಿದ್ದರೂ ಬಂದಿರಬಹುದು. ಈಗ ಪೋಲೀಸಿನವರು ಹಾಕಿರತಕ್ಕಂಥ ಕೇಸ್‌ಗಳಲ್ಲಿ ಇಂಡಸ್ಟ್ರೀಗೆ ಸಂಬಂಧಪಟ್ಟ ಇಷ್ಯೂ ಒಂದೂ ಇನ್‌ವಾಲ್ವ್ ಆಗಿಲ್ಲ. the first issue is the disciplinary action taken by the management Whether the it has to upheld or not? Then, the leadership of that union; how is that to be settled, by musicle power or votes. We always believe in ballot system and not bullet system. ಮಾನ್ಯ ಉಮರಬ್ಬರವರು ಹೇಳಿದಹಾಗೆ ಸೀಕ್ರೆಟ್ ಬ್ಯಾಲೆಟ್ ಸಿಸ್ಟಂನ್ನು ಮಾಡೋಣ. ಅದಕ್ಕಿಂತ ಮುಂಚಿತವಾಗಿ ಅಲ್ಲಿನ ವಾತಾವರಣವನ್ನು ತಿಳಿ ಮಾಡೋಣ. ನಾನು ಇಲ್ಲಿ ಯಾರಮೇಲೂ ಆಪಾದನೆಯನ್ನು ಮಾಡುತ್ತಿಲ್ಲ. ಟ್ರೇಡ್ ಯೂನಿಯನ್ ನಾಯಕರೇ ರಿವಾಲ್‌ವಾರ್ ಇಟ್ಟುಕೊಂಡು ಹೋಗತಕ್ಕಂಥ ಪರಿಸ್ಥಿತಿ ಉದ್ಭವವಾಗಿದೆ.

ಶ್ರೀ ಎನ್. ಎಂ. ಅಡ್ಯಂತಾಯ.—ಆ ಸಂದರ್ಭ ಯಾವ ರೀತಿ ಇತ್ತು. ಈ ಹಿಂದೆ ನನ್ನನ್ನು ಕೊಲೆ ಮಾಡಲು ಸಹ ಪ್ರಯತ್ನಗಳು ನಡೆಯುತ್ತಿದ್ದವು. ನಾನು ಪೋಲೀಸಿನವರಿಗೂ ದೂರು ಕೊಟ್ಟಿದ್ದೆ.

ಶ್ರೀ ಜೆ. ಹೆಚ್. ಪಟೇಲ್.—ಅವರು ಮಚ್ಚು ಹಿಡಿದುಕೊಂಡು ಓಡಾಡಿದರೆ ನೀವು ರಿವಾಲ್ವಾರ್ ಇಟ್ಟುಕೊಂಡು ಓಡಾಡಿದಿರಿ ಅಷ್ಟೇ.

ಶ್ರೀ ಎನ್. ಎಂ. ಅಡ್ಯಂತಾಯ.—ಈ ಹಿಂದೆ ಜಿಲ್ಲಾ ಪೋಲೀಸ್ ಅಧಿಕಾರಿಗೆ ಕಲ್ಲು ಹೊಡೆದರು ನನಗೂ ಕಲ್ಲು ಒಡೆದರು.

ಶ್ರೀ ಜೆ. ಹೆಚ್. ಪಟೇಲ್.—ಈಗ ಲೋಕಯ್ಯಶೆಟ್ಟಿಯವರು ನಮ್ಮ ಪಾರ್ಟಿ ಲೀಡರ್. ಅವರ ಮಗ ಕೂಡ ಕ್ರಿಮಿನಲ್ ಕೇಸಿನಲ್ಲಿ ಇನ್‌ವಾಲ್ವ್‌ವಾಗಿದ್ದಾರೆಂದು ಗೊತ್ತಾದ್ದರಿಂದ ಅವರ ಮೇಲೂ ಸಹ ಕೇಸ್ ಬುಕ್ ಮಾಡಿದ್ದಾರೆ. ನಮ್ಮ ಪಕ್ಷದವರೇ ಆದರೂ ಸಹ ನಾವು ಸ್ಪೇರ್ ಮಾಡಿಲ್ಲ. We have not spared any body. ಅಲ್ಲಿ ಒಂದು ರೀತಿಯ ಕ್ರಿಮಿನಲ್ ವಾತಾವರಣ ಬಂದಿದೆ. ಅಲ್ಲಿ ಮೊದಲು ಶಾಂತ ಪರಿಸ್ಥಿತಿ ಆಗಲಿ. ಆಮೇಲೆ ಕಂಪೆನಿಯನ್ನು ಚಾಲೂ ಮಾಡೋಣ. ಡಿಸಿಪ್ಲೀನರಿ ಆಕ್ಷನ್ ಬಗ್ಗೆ ಅನಂತರ ಮಾತನಾಡೋಣ. ಯೂನಿಯನ್ ಲೀಡರ್ ಶಿಪ್ ಸಮಸ್ಯೆಯನ್ನು ಬಗೆಹರಿಯಬೇಕು. ಅದಂ ೮ ದಿನದಲ್ಲಿ ಆಗಬಹುದು ಅಥವಾ ೧೫ ದಿನಗಳಲ್ಲಿ ಆಗಬಹುದು. ಒಟ್ಟಿನಲ್ಲಿ ಪರಿಸ್ಥಿತಿ ಶಾಂತ ಪರಿಸ್ಥಿತಿ ಆದಾಗ ಎಲ್ಲಾ ತನ್ನಷ್ಟಕ್ಕೆ ತಾನೇ ಇತ್ಯರ್ಥವಾಗುತ್ತದೆ. ಇಂಥ ಉದ್ವೇಗ ಪರಿಸ್ಥಿತಿಯಲ್ಲಿ ನಾವು ಏನೂ ತೀರ್ಮಾನ ಮಾಡುವುದು ಬೇಡ. ಸಿಚುಯೇಷನ್ ಕಂಟ್ರೋಲ್‌ಗೆ ಬರಲಿ. ಕಂಟ್ರೋಲ್‌ಗೆ ಬಂದ ತಕ್ಷಣ ಎಲ್ಲಾ ಎಫೆಕ್ಟೀವ್ ಮೆಷರ್‌ಮೆಂಟ್ ತೆಗೆದುಕೊಳ್ಳೋಣ. ನಮ್ಮ ಪಕ್ಷದವರು ಲೀಡರ್ ಆಗಲಿ ಎಂದು ನಮಗೆ ಏನೂ ಇಲ್ಲ, ನಿಮ್ಮ ಪಕ್ಷದವರೇ ಲೀಡರ್ ಆಗಲಿ. ಡೆಮಾಕ್ರೆಟಿಕ್ ವ್ಯವಸ್ಥೆಯಲ್ಲಿ ಸಮಾಜದಲ್ಲಿ ಯಾರು ಬೇಕಾದರೂ ಲೀಡರ್‌ಶಿಪ್‌ನ್ನು ವಹಿಸಿಕೊಳ್ಳಬಹುದು. ಯಾರಿಗೆ ಸ್ಟೈ ಹೆಚ್ಚಾಗಿ ಇರುತ್ತದೆಯೋ ಅವರು ಲೀಡರ್ ಆಗುತ್ತಾರೆ. ಅದನ್ನು ನಾವು

ಅಕ್ಸೆಪ್ಟ್ ಮಾಡೋಣ. ಅದರಲ್ಲಿ ಅನುಮಾನ ಬೇಡ. ಸಮಸ್ಯೆಯನ್ನು ಇತ್ಯರ್ಥ ಮಾಡಿಕೊಳ್ಳುವುದಕ್ಕೆ ಅಪೀಲ್ ಮಾಡಿಕೊಂಡಿರುವುದರಿಂದ ಕಾರ್ಮಿಕ ನಾಯಕರುಗಳಿಗೆ ನಾನು ವಂದಿಸುತ್ತೇನೆ ಕಾರ್ಮಿಕರುಗಳಿಗೆ ವಂದಿಸುತ್ತೇನೆ. ಗಲಾಟೆ ಆದರೆ ಏನಾಗುತ್ತದೆ ಎಂದರೆ, ಗಲಾಟೆಯಲ್ಲಿ ಯಾರೋ ಒಬ್ಬ ಸತ್ತು ಹೋದ ಅಂತಿಟ್ಟುಕೊಳ್ಳಿ ಆಗ ಎಷ್ಟು ತೊಂದರೆಯಾಗುತ್ತದೆ ಎಂದು ನೀವೇ ಊಹಿಸಿಕೊಳ್ಳಿ. ಒಬ್ಬ ಮುಸಲ್ಮಾನ ಸತ್ತ ಅಂದರೆ ಅದಕ್ಕೆ ಒಂದು ತರಹ ಬಣ್ಣ ಕಟ್ಟಿಕೊಂಡು ಉದ್ರೇಕ ಸ್ಥಿತಿ ಉಂಟಾಗುತ್ತದೆ. ಹಿಂದೂ ಸತ್ತರೆ ಇನ್ನೊಂದು ತರಹ ಬಣ್ಣ ಕಟ್ಟಿಕೊಂಡು ಸಮಸ್ಯೆ ಉದ್ಭವವಾಗುತ್ತದೆ. ಕ್ರಿಶ್ಚಿಯನ್ ಸತ್ತರೆ ಇನ್ನೊಂದು ತರಹ ಆಗುತ್ತದೆ. ಆದ್ದರಿಂದ, ಯಾರೂ ಗಲಾಟೆಗೆ ಅವಕಾಶ ಕೊಡಬಾರದು. ನಿಧಾನವಾಗಿ ಶಾಂತಯುತವಾಗಿ ಚರ್ಚೆ ಮಾಡಿ ಸಮಸ್ಯೆಯನ್ನು ಬಗೆಹರಿಸೋಣ. ಮಾನ್ಯ ಪಂಪಾಪತಿಯವರು ಸತ್ಯಾಗ್ರಹವನ್ನು ಮಾಡುತ್ತಿದ್ದಾರೆ. ಅವರು ಸತ್ಯಾಗ್ರಹವನ್ನು ಅಂತ್ಯ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ. ಈಗ ನೋಡಿ ದಾವಣಗೆರೆಯಲ್ಲಿ ಉದ್ರಿಕ್ತ ಪರಿಸ್ಥಿತಿ ಉಂಟಾಗಿದೆ. ಎರಡು ಕೆ.ಎಸ್.ಆರ್.ಟಿ.ಸಿ. ಬಸ್‌ಗಳನ್ನು ಕಾರ್ಮಿಕರು ದಾವಣಗೆರೆಯಲ್ಲಿ ಸುಟ್ಟು ಹಾಕಿದ್ದಾರೆ ಬಸ್ಸು ಸುಟ್ಟು ಹಾಕುವುದರಿಂದ ಸಮಸ್ಯೆ ಇತ್ಯರ್ಥ ಆಗುವ ಹಾಗಿದ್ದರೆ, ನಾನು ಬೇಕಾದರೆ ನಾಲ್ಕು ಬಸ್‌ಗಳನ್ನು ಕಳುಹಿಸುತ್ತೇನೆ, ಸುಟ್ಟು ಸಮಸ್ಯೆಯನ್ನು ಇತ್ಯರ್ಥ ಮಾಡಿಕೊಳ್ಳಲಿ. ಬಸ್‌ಗಳನ್ನು ಸುಡುವುದರಿಂದ, ಸಾರ್ವಜನಿಕ ಆಸ್ತಿಪಾಸ್ತಿಗಳನ್ನು ನಾಶ ಮಾಡುವುದರಿಂದ ಯಾವ ಸಮಸ್ಯೆಯೂ ಇತ್ಯರ್ಥವಾಗುವುದಿಲ್ಲ ಅದರ ಜೊತೆಗೆ ಇನ್ನೂ ಸಮಸ್ಯೆ ಜಾಸ್ತಿಯಾಗುತ್ತದೆ. ಬೆಂಕಿ ಹಚ್ಚೋದು ಸುಲಭ. ಆದರೆ ಆರಿಸುವುದು ಬಹಳ ಕಷ್ಟ. ಅದರ ಅನುಭವ ನನಗೂ ಇದೆ. ವರ್ಕರ್ಸ್‌ಗಳನ್ನು ಕೆಲಸಕ್ಕೆ ಹೋಗಬೇಡಿ ಎಂದು ಹೇಳಿ ಕಾರ್ಮಿಕ ನಾಯಕನಾಗಿಬಿಡಬಹುದು. ಅದೇ ಕಾರ್ಮಿಕರನ್ನು ಕೆಲಸಕ್ಕೆ ಹೋಗಿ ಎಂದು ಹೇಳಿ ಕಾರ್ಮಿಕ ನಾಯಕರಾಗುವರು ಯಾರೂ ಇಲ್ಲ. ಕಾರ್ಮಿಕರನ್ನು ಕೆಲಸಕ್ಕೆ ಹೋಗಬೇಡಿ ಎಂದು ಹೇಳಿ ಫ್ಯಾಕ್ಟರಿಯನ್ನು ಮುಚ್ಚಿಸುವುದರಿಂದ ಯಾವ ಸಮಸ್ಯೆಯೂ ಬಗೆಹರಿಯುವುದಿಲ್ಲ ಎಂಬುದನ್ನು ಎಲ್ಲರೂ ತಿಳಿದುಕೊಳ್ಳಬೇಕು. ಈ ರೀತಿ ಫ್ಯಾಕ್ಟರಿಗಳನ್ನು ಮುಚ್ಚಿಸುವುದರಿಂದ ಏನಾಗುತ್ತದೆ ಎಂದರೆ ಒಂದು ಪಕ್ಷ ಫ್ಯಾಕ್ಟರಿಗಳು ಆರ್ಥಿಕವಾಗಿ ಕಷ್ಟದಲ್ಲಿದ್ದಾಗ ಬ್ಯಾಂಕರುಗಳು ಸಾಲವನ್ನು ಕೊಡುವುದಿಲ್ಲ. ನಾವೇ ಅನೇಕ ಬ್ಯಾಂಕರುಗಳಿಗೆ ಇಂತಿಂಥ ಫ್ಯಾಕ್ಟರಿಗಳಿಗೆ ಸ್ವಲ್ಪ ಧನ ಸಹಾಯವನ್ನು ಮಾಡಿ ಎಂದು ಕೇಳಿಕೊಂಡಾಗ, ಬ್ಯಾಂಕರುಗಳು ಹಣವನ್ನು ಕೊಡುವುದಕ್ಕೆ ಹಿಂದೇಟು ಹಾಕಿದರು. ಸಾಲವನ್ನು ಕೊಡುತ್ತೇವೆ ಆದರೆ, ಅದಕ್ಕೆ ಗ್ಯಾರಂಟಿ ಸರ್ಕಾರ ಕೊಡಬೇಕೆಂದು ಶರತ್ತು ಹಾಕುತ್ತಾರೆ. ಕೆಲವು ಸಂದರ್ಭಗಳಲ್ಲಿ ಸರ್ಕಾರ ಋಣ ಸಹಾಯವನ್ನೋ ಅಥವಾ ಇನ್ಯಾವುದಾದರೂ ಸಹಾಯವನ್ನು ಮಾಡುವುದಕ್ಕೆ ಸ್ವಲ್ಪ ವಿಳಂಬವಾಗಬಹುದು. ಅದನ್ನೇ ದೊಡ್ಡದು ಮಾಡಿಕೊಂಡು ಗಲಾಟೆ ಮಾಡುವುದನ್ನು ಬಿಡಬೇಕು. ಕಮ್ಯುನಿಸ್ಟ್ ದೇಶಗಳಲ್ಲೂ ಈ ತರಹ ಡಿಲೇಗಳು ಆಗುತ್ತವೆ. ಆದರೆ, ಅವುಗಳನ್ನು ಹೇಳುವುದಕ್ಕೆ ನಮಗೆ ಅರ್ಥವಾಗುವುದಿಲ್ಲ. ನಮ್ಮ ದೇಶದಲ್ಲಿ ಮಾತ್ರ ಈ ತರಹ ಡಿಲೇ ಸಮಸ್ಯೆ ಇಲ್ಲ. ಎಲ್ಲಾ ದೇಶಗಳಲ್ಲೂ ಇದೆ. ನಾನು ಮೊನ್ನೆ ನ್ಯೂಯಾರ್ಕಿಗೆ ಹೋಗಿದ್ದಾಗ ಅಲ್ಲಿ ಒಂದು ಕಡೆ ಮೂರ್ನಾಲ್ಕು ಗಂಟೆ ಕಾಯಬೇಕಾದ ಪರಿಸ್ಥಿತಿ ಉಂಟಾಯಿತು. ಅಂಥ ಮುಂದುವರಿದ ದೇಶಗಳಲ್ಲೇ ಡಿಲೇ ಆಗುತ್ತವೆ. ಅದು ಸಹಜ. ನಾನು ಚಿಕ್ಕ ವಯಸ್ಸಿನಲ್ಲಿದ್ದಾಗ ದಾವಣಗೆರೆಯಲ್ಲೇ ಇದ್ದೆ, ನಾನು ಅಲ್ಲೇ ಬೆಳೆದಿದ್ದುದು. ದಾವಣಗೆರೆಯಲ್ಲಿ ಒಂದು ಮಿಲ್ ಆದಾಗ ಎಲ್ಲರೂ ಸಂತೋಷಪಟ್ಟರು. ಹಾಗೆಯೇ ಒಂದೊಂದೇ ಮಿಲ್‌ಗಳು ಆದವು, ನಗರ ಬೆಳೆಯಿತು, ಜನರು ಸಂತೋಷಪಟ್ಟರು. ಬೆಳೆಸಿದ ನಗರವನ್ನು ನಾವೇ ಸುಟ್ಟು ಹಾಕಿ ನೋಡುವುದು ಸರಿಯಲ್ಲ. ಬೆಂಕಿ ಹಚ್ಚುವುದಕ್ಕೆ ಹೋಗಬಾರದು. ದೇಶವನ್ನು ಕಟ್ಟುವವರೇ ಸುಟ್ಟುಕೊಳ್ಳುತ್ತಾ ಹೋದರೆ ಹೇಗೆ ? ದಯವಿಟ್ಟು ಆ ಕೆಲಸವನ್ನು ಮಾಡಬೇಡಿ ಎಂದು ಎಲ್ಲರಲ್ಲೂ ಕೇಳಿಕೊಳ್ಳುತ್ತೇನೆ. ಒಂದು ಕಾರ್ಖಾನೆ ಮುಚ್ಚಿರುವುದರಿಂದ ಎರಡು ಸಾವಿರ ಜನರ ಜೀವನ ಸಮಸ್ಯೆ ನಮಗೆ ಅರ್ಥವಾಗುವುದಿಲ್ಲವೆ ? ಸರ್ಕಾರಕ್ಕೆ ಅರ್ಥವಾಗುತ್ತದೆ. ಅದನ್ನು ಹೇಗೆ ಬಗೆಹರಿಸುವುದು? ಎಲ್ಲಾ ನಿಂತು ಹೋಗಿರುವ ಮಿಲ್‌ಗಳಿಗೆ ದುಡ್ಡು ಕೊಡುವುದಕ್ಕೆ ನಮ್ಮ ಕೈಯಲ್ಲಿ ಆಗುವುದಿಲ್ಲ. ಅದು ನಮ್ಮ ಪಾಲಿಸಿಯೂ ಅಲ್ಲ. ಮತ್ತು ಇಂಥದ್ದು ಯಾರಿಂದಲೂ ಸಾಧ್ಯವೂ ಇಲ್ಲ. ಅದಕ್ಕಾಗಿ ಈ ಎರಡು ಉದ್ವಿಗ್ನವಾಗಿರತಕ್ಕಂಥ ವಿಷಯಗಳನ್ನು ಪ್ರಸ್ತಾಪ ಮಾಡಿದ್ದೇನೆ. ಉಳಿದುದನ್ನು ಪಾರುಪತ್ಯೆಯ ಹಾಗೆ, ಅಂದರೆ ಸುಬ್ರಮಣ್ಯ ಪಾರುಪತ್ಯ ಮಾಡುತ್ತಾರಲ್ಲ ಹಾಗೆ ಬಿಡುತ್ತೇನೆ. ಅಂದರೆ ಸುಬ್ರಮಣ್ಯ ಪಾರುಪತ್ಯ ಎಂದರೆ ಏನು ಎಂದು ಕೂಡ ಹೇಳುತ್ತೇನೆ. ಒಬ್ಬ ನಿಂತಿರುತ್ತಾನೆ. ಉಡುಪಿಯಲ್ಲಿ ಎಂದು ಇಟ್ಟುಕೊಳ್ಳಿ, ಅಲ್ಲಿ ದೇವಸ್ಥಾನಕ್ಕೆ ಬಂದ ಜನರು ಹೋಗುತ್ತಾ ಇರುತ್ತಾರೆ. ಅವರವರಿಗೆ ಸಂಬಂಧಪಟ್ಟ ಜಾಗಕ್ಕೆ ಹೋಗುತ್ತಿರುತ್ತಾರೆ. ಈ ಪಾರುಪತ್ಯಗಾರ ನಿಂತು ಹೋಗುವ ಬರುವವರನ್ನೆಲ್ಲಾ ಕೇಳುತ್ತಾ ಇರುವುದು. ಯಾರು ಊಟಕ್ಕೆ ಹೋಗುತ್ತಿರುತ್ತಾರೆ, ಯಾರು ಪೂಜೆಗೆ ಹೋಗುತ್ತಿರುತ್ತಾರೆ, ಹೀಗೆ ಎಲ್ಲರನ್ನೂ ಕೇಳುತ್ತಾ ಇರುವುದು, ಅವರು ಹೇಳಿದುದನ್ನು ಕೇಳಿ ಸಂ

ಹೋಗಿ ಎಂದು ಹೇಳುತ್ತಾ ನಿಂತಿರುವುದು ಇದು ಸುಬ್ರಮಣ್ಯ ಪಾರುಪತ್ಯದ ನೀತಿ. ನಿಂತವನು ಏನನ್ನೂ ಹೇಳುವುದಿಲ್ಲ, ಹೋಗ ಬೇಕಾದವರು ಎಲ್ಲಿಲ್ಲಿ ಹೋಬೇಕೋ ಹೋಗುತ್ತಿರುತ್ತಾರೆ.

ಶ್ರೀ ಯು. ಭೂಪತಿ.—ನೀವುಗಳು ಅದನ್ನೇ ಮಾಡುತ್ತಿದ್ದೀರಿ.

ಶ್ರೀ ಜೆ. ಹೆಚ್. ಪಟೇಲ್.—ಸುಬ್ರಮಣ್ಯ ಪಾರುಪತ್ಯ ಅಂದರೆ, That Government is best which governs least. That is my ideal, which is the Ideal of the Government.

ಶ್ರೀ ಕೆ. ಹೆಚ್. ಶ್ರೀನಿವಾಸ್.—ನೀವು ಅದನ್ನೇ ಮಾಡುತ್ತಾ ಇದ್ದೀರಿ.

ಶ್ರೀ ಜೆ. ಹೆಚ್ ಪಟೇಲ್.—ಅಂದರೆ ಅಷ್ಟೊಂದು ನಾಗರೀಕ ಜನ ಇರಬೇಕು. ಜನರನ್ನು ಹಿಡಿದು ಪೋಲೀಸ್ ಹಚ್ಚಿ ಕೆಲಸವನ್ನು ಮಾಡಿಸುವುದಿಲ್ಲ, ಒಬ್ಬೊಬ್ಬ ಮಂತ್ರಿ ಹೋಗಬೇಕಾದರೆ ಹಿಂದೊಂದು ಕಾರು, ಮುಂದೊಂದು ಕಾರು, ಜೀಪುಗಳು ಪೋಲೀಸರು ಇರುವುದು, ಹೀಗೆ ಅಲ್ಲ. ಸರಕಾರ ಅಂದರೆ. ಜನರೂ ಕೂಡ ಹಾಗೆಯೆ ಇರಬೇಕು ಅಂದರೆ ತಮ್ಮ ಷ್ಟಕ್ಕೆ ತಾವು ಇರುವುದು, ಊಟ ಮಾಡುವವರು ಊಟ ಮಾಡುವುದು, ಪೂಜೆ ಮಾಡುವವರು ಪೂಜೆ ಮಾಡುವುದು, ಹೋಗುವವರು ಹೋಗುವುದು ಬರುವವರು ಬರುವುದು. ಸರಕಾರ ಮಾತ್ರ ಸುಬ್ರಮಣ್ಯ ಹಾಗೆ ನಿಂತಿರುವುದು. ಅಂದರೆ ನಮ್ಮ ಸರಕಾರ ಅಲ್ಲ.

SRI K. H. SRINIVAS.—You have alredy put that into practice ನೀವು ಇದನ್ನು ಐಡಿಯಲ್ ಆಗಿ ಇಟ್ಟುಕೊಂಡು ಪರಶ್ಯೂ ಮಾಡಿದ್ದಾರೆ ನಮ್ಮ ಅಭ್ಯಂತರ ವಿರಲಿಲ್ಲ.

ಶ್ರೀ ಜೆ. ಎಚ್. ಪಟೇಲ್.—ಸರಕಾರ ಅವರನ್ನು ಒಳಗೆ ಹ ಕಿದರು, ಇವರನ್ನು ಒಳಗೆ ಹಾಕಿದರು ದೌರ್ಜನ್ಯ ಮಾಡಿದರು, ಎಂದರೆ ಅವೆರಡು ಕಾಂಟ್ರಡಿಕ್ಷನ್..............

ಶ್ರೀ ಎಂ. ವೀರಪ್ಪ ಮೊಯಿಲಿ.—ಅಧ್ಯಕ್ಷರೇ, ಸರಕಾರ ಸುಬ್ರಮಣ್ಯನ ಹಾಗೆ ಇರ ಲ್ಲ, ಗೋಮಟೇಶ್ವರನ ಹಾಗೆ ಇರಬೇಕು...............

ಶ್ರೀ ಜೆ. ಹೆಚ್. ಪಟೇಲ್.—ನೀವು ಗೋಮಟೇಶ್ವರನ ಹಾಗೆ ಇದ್ದೀರಿ. ನಾವು ಆ ಮೇಲೆ ಸ್ವಲ್ಪ ಬಟ್ಟೆ ಹಾಕಿಕೊಂಡು ಬಿಟ್ಟದ್ದೇವೆ.........ಇನ್ನು ವಿಷಯಕ್ಕೆ ಬದಲಾಗಿ, ಮಾನ್ಯ ಸದಸ್ಯರಾದ ಭೂಪತಿಯವರು ತುಂಗಭದ್ರಾ ಪಾಲಿಫೈಬರ್ಸ್ ತುಂಬಾ ಕಷ್ಟದಲ್ಲಿದೆ ಎಂದು ಹೇಳಿದ್ದಾರೆ. ಅದರ ಬಗ್ಗೆ ವಿವರಗಳನ್ನು ಹೇಳುತ್ತಾ ಇಲ್ಲಿಯ ಸಮಯವನ್ನು ಕಳೆಯುವುದು ಬೇಡ. ಅದು ನಮ್ಮ ಕಾರ್ಖಾನೆ ಅಲ್ಲ. ಸುಮ್ಮನೆ ಅದಕ್ಕೆ ನಾಮಕಾವಸ್ಥೆ ಚೇರ್‌ಮನ್ ಇದ್ದಾರೆ, ಎಂ.ಡಿ. ಯವರು ಇದ್ದಾರೆ. ಅಂತೆಯೇ ನೀವು ಹೇಳಿರತಕ್ಕಂಥ ಎಲ್ಲಾ ದುರ್ವ್ಯವಹಾರಗಳೂ ಅಲ್ಲಿ ನಡೆದಿವೆ. ಖಾಸಗೀ ಕಂಪನಿಯಲ್ಲಿ ಏನು ನಡೆಯುತ್ತದೆ ಅದನ್ನು ಇಲ್ಲಿ ಹೇಳುವುದು ಬೇಡ.

ಶ್ರೀ ಯು. ಭೂಪತಿ.—ನೀವು ಹೇಳಿದ ಪ್ರಕಾರ ಅದು ಹಂಡ್ರಡ್ ಪರ್ಸೆಂಟ್ ಖಾಸಗೀ ಆಗಿದ್ದರೆ ನಾನು ಕೇಳುತ್ತಾ ಇರಲಿಲ್ಲ. ಅಲ್ಲಿ ಆಗಿರತಕ್ಕಂಥ ದುರುಪಯೋಗದ ಹಣ ಸಾರ್ವಜನಿಕರ ಹಣವಾಗಿದೆ.. ...ಅದನ್ನು ಯಾರು ಕೇಳಬೇಕು ?.........

ಶ್ರೀ ಜೆ. ಹೆಚ್. ಪಟೇಲ್.—ತಾವುಗಳು ಖಾಸಗೀ ಕಂಪನಿ ವಿಚಾರ ಹೇಳುತ್ತಿದ್ದೀರಿ. ಟಾಟಾ ಆಗಲೀ, ಬಿರ್ಲಾ ಆಗಲೀ, ಯಾರೂ ತಮ್ಮ ಸ್ವಂತ ಹಣದಿಂದ ಮಾಡಲಿಲ್ಲ. ಅದಕ್ಕೇ ಕೃಷ್ಣಮೇನನ್ ನವರು ಹೇಳಿದ್ದರು. "How far these public undertakings are public and how for these private undertakings are private it is yet to be investigated." ಪ್ರೈವೇಟ್ ಕಾರ್ಖಾನೆಗಳು ಹೀಗೆಯೇ ? ದೊಡ್ಡವರು ಯಾರೂ ತಮ್ಮ ಸ್ವಂತ ಹಣವನ್ನು ಹೂಡುವುದಿಲ್ಲ. ಅದಕ್ಕೇ ತುಂಗಭದ್ರಾ ಪಾಲಿಫೈಬರ್ಸ್ ಬಗ್ಗೆ ವಿವರಗಳನ್ನು ಹೇಳುವಾಗ ಏನೇನು ಆಗಿದೆ, ಏನೇನು ಕ್ರಮ ತೆಗೆದುಕೊಂಡಿದ್ದೇವೆ, ಏನು ಮಾಡಿದೆ, ಇಂಥಾದ್ದು ಆಯಿತು ಇಂಥಾದ್ದು ಆಗಿಲ್ಲ, ಎಂದು ಎಲ್ಲಾ ಹೇಳಿದರೆ ಹೇಗೆ ? ಸರಕಾಲದಲ್ಲಿ ಕೆಲವು ಸಾಧ್ಯತೆಗಳು ಇವೆ. ಕೆಲವು ಇಲ್ಲ. ಸರಕಾರ ಏನೂ ಸರ್ವಶಕ್ತ ಎಂದು ಅಲ್ಲ.

SRI U. BHUPATHI.—It is not sick. It is the begining. ಅವರು ಇನ್ನು ಪ್ರಾಡಕ್ಟ್ ಶುರು ಮಾಡಿಲ್ಲ. ಅದು ಸಿಕ್ ಇಂಡಸ್ಟ್ರೀಯೂ ಅಲ್ಲ. ಅದೊಂದು ತರಹ ವಿಚಿತ್ರ !

ಶ್ರೀ ಎನ್.ಎಂ. ಅದ್ಯಂತಾಯ.—ಇಂಡಷ್ಟ್ರೀಗೆ ಸಿಕ್‌ನೆಸ್ ಬಂದಿದೆ, ಮಾಲೀಕರಿಗೆ ಸಿಕ್‌ನೆಸ್ ಬಂದಿಲ್ಲ.

ಶ್ರೀ ಜೆ.ಹೆಚ್. ಪಟೇಲ್.—ಸಾರ್ವಜನಿಕರ ಹಣದಿಂದ ಮಾಡಿದವರು ಇಂಡಸ್ಟ್ರೀ ಸಿಕ್ ಆಗುತ್ತದೆಯೇ ಹೊರತು ಮಾಡಿದವರಿಗೆ ಸಿಕ್ ಬರುವುದಿಲ್ಲ.

SRI U. BAUPATHY.—There is a peculiar situation in this industry. It is not sick. It is bigining. That Managing Director has not visited that plant since two years.

ಶ್ರೀ ಜೆ.ಹೆಚ್. ಪಟೇಲ್.—ಅವನು ಕೊಯಮುತ್ತೂರಿನಲ್ಲಿದ್ದಾನಂತೆ........ ದಾವಣಗೆರೆಯ ವಿಚಾರದಲ್ಲಿ ನಾವುಗಳು ಕುಳಿತು, ಮಾತುಕತೆ ನಡೆಸಿ, ಬ್ಯಾಂಕ್‌ನವರಿಗೆ ಕನ್‌ವಿನ್ಸ್ ಮಾಡಿ, ನಮ್ಮ ಕೆಲಸವನ್ನು ಮಾಡುವಲ್ಲಿ ನಾವು ನಿಗಾ ವಹಿಸಬೇಕು. ನಾವೆಲ್ಲವನ್ನೂ ಮಿಲ್‌ಗಳನ್ನೂ ನ್ಯಾಷನಲೈಸ್ ಮಾಡುವುದಿಲ್ಲ. ಕರ್ನಾಟಕ ರಾಜ್ಯದಲ್ಲಿ ಒಂದು ಟೆಕ್ಸ್‌ಟೈಲ್ ಕಾರ್ಪೊರೇಷನ್ ಇದೆ, ಅವರು ತೆಗೆದು ಕೊಳ್ಳಲಿ ಎಂದು ಕೃಷ್ಣನ್‌ರವರು ಹೇಳಿದರು. ಆದರೆ ಹಾಗೆ ತೆಗೆದುಕೊಳ್ಳುವುದಕ್ಕೆ ಆಗುವುದಿಲ್ಲ. ಅವಕ್ಕೆ ಕೆಲವು ಲಿಮಿಟೇಷನ್ಸ್ ಇವೆ. ಎಲ್ಲವೂ ನಮಗೆ ಸಾಧ್ಯತೆ ಇದೆ, ಎಲ್ಲವನ್ನೂ ನಾವು ಮಾಡುತ್ತೇವೆ ಎಂದು ನಾನು ಹೇಳುವುದಿಲ್ಲ. ಬ್ಯಾಲೆನ್ಸ್ ಶೀಟು ಸರ್ಕಾರದ ಕಂಪನಿಗಳಿಂದ ೯೦ ಪರ್ಸೆಂಟು ಬಂದುಬಿಟ್ಟಿವೆ. ಅಪ್‌ಟುಡೇಟ್ ಇವೆ. ಒಂಬೈನೂರು ಕಂಪೆನಿಗಳವು ಮಾತ್ರ ಸ್ವಲ್ಪ ತಡೆ ವಾಗಿದೆ.

ಶ್ರೀ ಕೆ.ಹೆಚ್. ಶ್ರೀನಿವಾಸ್.—ನೋಡಿ, ನಿಮ್ಮ ಪಬ್ಲಿಕ್ ಅಂಡರ್‌ಟೇಕಿಂಗ್ಸ್ ಕಮಿಟಿ ಚೇರ್ಮನ್ ರಮೇಶ್‌ಕುಮಾರ್‌ರವರು ತಲೆಆಡಿಸುತ್ತಿದ್ದಾರೆ.

ಶ್ರೀ ರಮೇಶ್‌ಕುಮಾರ್.—ನಾವು ತಲೆ ಆಡಿಸುತ್ತಿರುವುದು ನೀವು ಹೇಳುತ್ತಿರುವುದಕ್ಕೆ

ಶ್ರೀ ಕೆ.ಎಚ್. ಶ್ರೀನಿವಾಸ್.—ನಾನು ಕುಳಿತುಕೊಂಡು ಸುಮ್ಮನಿದ್ದೇನೆ. ನನ್ನ ಕಡೆ ನೋಡಿ ನೀವು ತಲೆ ಆಡಿಸಿದಿರಿ.

ಶ್ರೀ ಜೆ.ಹೆಚ್. ಪಟೇಲ್.—ಇರಲಿ, ನಮ್ಮಲ್ಲಿರುವ ದೋಷಗಳನ್ನು ನೋಡಿ ತೆಗೆದು ಹೇಳುವ ಗುಣ ನಮ್ಮ ಕಡೆಯುವರಿಗೆ ಇರುತ್ತದೆ, ನಿಮ್ಮ ಹತ್ತಿರ ಇಲ್ಲ. ಅದಕ್ಕಾಗಿ ಇನ್ನು ಹೆಚ್ಚು ಸಮಯ ಬೇಡ. ಅಧ್ಯಕ್ಷರೇ, ಒನೇ ತಾರೀಖು ನಮ್ಮ ಲೇಬರ್ ಮಿನಿಸ್ಟ್ರು ಬರುತ್ತಾರೆ. ತಾವೂ ಎಲ್ಲ ಬನ್ನಿ. ಉಮರಬ್ಬ ಅವರು ಹೇಳಿದ ಹಾಗೆ ಇಲ್ಲಿ ಯಾವುದೇ ಪ್ರಿಜ್ಯುಡೀಸ್ ಬೇಡ, ಪ್ರತಿಷ್ಠೆ ಬೇಡ. ಈ ಸಮಸ್ಯೆಯನ್ನು ಬಗೆಹರಿಸೋಣ.

ಶ್ರೀ ಯು. ಭೂಪತಿ.—ನೀವು ಟೆಕ್ಸಾನ್ ಸ್ಯಾಟಿಲೈಟ್ಸ್ ಬಗ್ಗೆ ಏನನ್ನೂ ಹೇಳಲಿಲ್ಲ ?

ಶ್ರೀ ಜೆ.ಹೆಚ್. ಪಟೇಲ್.—ಅದೇ, ಟೆಕ್ಸಾನ್ ಸ್ಯಾಟಿಲೈಟ್ಸ್ ಕಾಲದ ಇನ್‌ಫರ್ಮೇಷನ್ ಕೊಡುತ್ತಿದೆ. ನಮ್ಮ ಡಿಫೆನ್ಸ್ ಡಿಪಾರ್ಟ್‌ಮೆಂಟಿನವರು ೨೪ ಗಂಟೆಯೂ ಅವನ್ನು ರಿಸೀವ್ ಮಾಡಿಕೊಳ್ಳುತ್ತಿದ್ದಾರೆ.

ಶ್ರೀ ಯು. ಭೂಪತಿ.—ನೇರವಾಗಿ ಅವರು ಸ್ಯಾಟಿಲೈಟ್ಸ್‌ಗೆ ಇನ್‌ಫರ್ಮೇಷನ್ ಕಳುಹಿಸುತ್ತಿದ್ದಾರೆ ಎಂಬ ಸುದ್ದಿ ಇದೆ. ಎಕ್ಸ್‌ಟ್ರಾ ಇನ್‌ಫರ್ಮೇಷನ್ ಕಳುಹಿಸುತ್ತಿದ್ದಾರೆಂದು ಹೇಳಲಾಗುತ್ತಿದೆ.

ಶ್ರೀ ಜೆ.ಹೆಚ್. ಪಟೇಲ್.—ಇದನ್ನು ಪರ್ಮಿಟ್ ಮಾಡುವವರು ಗವರ್ನ್‌ಮೆಂಟ್ ಆಫ್ ಇಂಡಿಯಾದವರು ಇದು ಏಕೆ ಹೇಗೆ ನಮಗೆ ಗೊತ್ತಿಲ್ಲ. ನಮಗೆ ಗೊತ್ತಿದ್ದ ಹಾಗೆ ಅವರು ಆ ರೀತಿ ಇನ್‌ಫರ್ಮೇಷನ್ ಕಳಿಸುವುದಕ್ಕೆ ಆಗುವುದಿಲ್ಲ. ನಮಗೆ ಗೊತ್ತಿದ್ದ ಹಾಗೆ ಕಳಿಸುತ್ತಿರಬಹುದು.

೨೪ ಗಂಟೆಯೂ ಡಿಫೆನ್ಸ್‌ನವರು ಅವನ್ನು ರಿಸೀವ್ ಮಾಡಿಕೊಳ್ಳುತ್ತಾ ಇದ್ದಾರೆ. ಅದಕ್ಕೆ ನಾವೇನೂ ಮಾಡುವುದಕ್ಕಾಗುವುದಿಲ್ಲ. ನಮ್ಮ ಸರ್ಕಾರ ಬಂದ ಮೇಲೆ ದುಸ್ಥಿಯಲ್ಲಿದ್ದ ಅನೇಕ ಕಾರ್ಖಾನೆಗಳು ಸುಧಾರಿಸಿ ಚೆನ್ನಾಗಿ ಕೆಲಸ ಮಾಡುತ್ತಿರುವಂತೆ ನಾವೇನೂ ಜಾದು ಮಾಡಿದ್ದೇನೆ ಎಂದು ಅಲ್ಲ. ಮ್ಯಾನೇಜ್‌ಮೆಂಟಿನವರು ಕಾರ್ಮಿಕರನ್ನು ಕಾನ್‌ಫಿಡೆನ್ಸ್‌ಗೆ ತೆಗೆದುಕೊಂಡಿದ್ದಾರೆ. ಎಂ.ಸಿ.ಎಫ್. ನಷ್ಟದಲ್ಲಿದ್ದುದು ಪ್ರಾಫಿಟ್ ಮಾಡುತ್ತಿದೆ. ವಿಕ್ರಾಂತ್ ಟೈರ್ಸ್, ಎಂ.ಇ.ಐ. ಗಳೂ ಚೆನ್ನಾಗಿ ಲಾಭ ಮಾಡಿ ನಡೆಯುತ್ತಿವೆ. ಆದ್ದರಿಂದ ನಾನು ಈಗ ಸದನವನ್ನು ಇಷ್ಟೇ ವಿನಂತಿ ಮಾಡಿಕೊಳ್ಳುವುದು. ಸರ್ಕಾರವನ್ನು ಕ್ರಿಟಿಸೈಸ್ ಮಾಡುವ ಉತ್ಸಾಹದಲ್ಲಿ ಎಂಥ ಪರಿಸ್ಥಿತಿ ನಿರ್ಮಾಣ ಮಾಡಲಾಗುತ್ತಿದೆ ಎಂದರೆ ಇಲ್ಲಿ ಉದ್ಯಮಗಳೇ ಬೆಳೆಯುತ್ತಿಲ್ಲ. ನಾವು ಪದೇ ಪದೇ ಇಲ್ಲಿ ತೊಂದರೆಯಿದೆ ಎಂದರೆ ನಮಗೇ ಹಾನಿಯಾಗುತ್ತದೆ. ಅದೇ ಪಕ್ಕದ ಜನ ಏನು ಹೇಳುತ್ತಾರೆ ಗೊತ್ತೆ ? ತಮಿಳ್ನಾಡಿನವರು ಆಂಧ್ರದವರು ಉದ್ಯಮಗಳನ್ನು ನಮ್ಮ ಬಳಿ ಬನ್ನಿ, ವಿದ್ಯುತ್ತಿದೆ, ನೀರಿದೆ, ಎಲ್ಲಾ ಇದೆ ಎನ್ನುತ್ತಾರೆ. ನಮ್ಮಲ್ಲಿ ಏನಾಗಿದೆ ಎಂದರೆ ಎಷ್ಟೋ ಜನ ನನ್ನನ್ನು ಕೇಳುತ್ತಾರೆ, ಈಗಿರುವ ಉದ್ಯಮಗಳಿಗೆ We will be making our position very Valunerable ವಿದ್ಯುತ್ ಇಲ್ಲದಿರುವಾಗ ಎಸ್.ಎಲ್.ಐ.ಗಳನ್ನು ಇನ್‌ವೈಟ್ ಮಾಡುತ್ತಿದ್ದೀರಲ್ಲ ಎಂದು. ಅವರಿಗೆ ನಾನು ಹೇಳಿದ್ದು ಇಷ್ಟೇ ನಾವು ಇನ್‌ವೈಟ್ ಮಾಡಿರುವ ಉದ್ಯಮಗಳು ಯಾವುವೂ ತಮ್ಮ ವಿದ್ಯುತ್ ಅಗತ್ಯದ ೫೦ ರಷ್ಟನ್ನು ಅವೇ ಉತ್ಪಾದಿಸಿಕೊಳ್ಳಬೇಕಾಗುತ್ತವೆ. ಜೊತೆಗೆ ಅವು ಪವರ್ ಓರಿಯೆಂಟೆಡ್ ಅಲ್ಲ, ಕ್ಯಾಪಿಟಲ್ ಓರಿಯೆಂಟೆಡ್. ಇವುಗಳಿಂದ ದುಡ್ಡು ಬಹಳ ಬರುತ್ತದೆ. ಉದ್ಯಮಗಳನ್ನು ಹೊಸದಾಗಿ ಆರಂಭಿಸುವುದು ಗಂಡಾಂತರಕಾರಿಯೇನಲ್ಲ. Industrial growth and Economic growth, ಇದು ಒಂದು continues process ನಡೆಯುತ್ತಲೇ ಇರುತ್ತದೆ. ವಿದ್ಯುತ್ ಇಲ್ಲದಿರಲಿ ಇರಲಿ ಅದು ರಾಜ್ಯದ ಕೈಗಾರಿಕಾ ನೀತಿಗೆ ಬಾಧಕವಾಗಬಾರದು. ನಡು ನಡುವೆ ತೊಂದರೆಗಳು ಬರಬಹುದು ನಾವು ಹಾಕಿಕೊಂಡಿರುವಂತಹ ಗುರಿ ಮುಟ್ಟುವುದಕ್ಕೆ ಕೆಲವಾರು ಪ್ರಾಕೃತಿಕ ದಿಗ್ಬಂಧನಗಳಿಂದ ಆಗದೇ ಇರಬಹುದು. ಎಲ್ಲರೂ ಸೇರಿ ಪ್ರಯತ್ನ ಮಾಡೋಣ ಇಂತಹ ಸಂದರ್ಭದಲ್ಲಿ ಉದ್ದಿಮೆ ಉಳಿಯಲಿ ಎಂಬುದು ನಮ್ಮ ಮತ್ತು ನಿಮ್ಮ ಉದ್ದೇಶವಾಗಬೇಕೇ ಹೊರತು ಇದು ಹಾಳಾಗಿದೆ ಎಂದು ಹೇಳಿದರೆ ಉದ್ದಿಮೆಗೆ ತೊಂದರೆಯಾಗುತ್ತದೆ ಅಲ್ಲದೇ ಜನರು ಮುಂದೆ ಬರುವುದಿಲ್ಲ. ಉದಾಹರಣೆಗೆ ಮಂಗಳೂರಿನ ಉದ್ದಿಮೆ ಬಗ್ಗೆ ಹೇಳುವುದಾದರೆ ಅಲ್ಲಿ ಜನ ಮುಂದೆ ಬರುತ್ತೇವೆಂದು ಹೇಳಿದಾಗ ಅದು ಕೆಟ್ಟಿದೆ ಎಂದು ಹೇಳುತ್ತಾ ಹೋಗುವುದು ಸರಿಯಲ್ಲ.

ಶ್ರೀ ಯು. ಭೂಪತಿ.—ತುಂಗಭದ್ರಾ ಫೈಬರ್ಸ್ ಬಗ್ಗೆ ವಿವರವನ್ನು ಕೊಡುತ್ತೇನೆಂದು ಹೇಳಿದರು ಕೊಡಿ ಸಂತೋಷ. ಒಂದು ಕಡೆ ಹೇಳುತ್ತೀರಿ ಈ ಟೆಕ್ಸ್‌ಟೈಲ್ ಮಿಲ್‌ಗಳು ಸಂಪೂರ್ಣವಾಗಿ ಮುಚ್ಚಿಕೊಂಡು ಹೋಗಿರುವವರು ಇದ್ದರೂ ಕೂಡ ಇನ್ನೊಂದು ಕಡೆ ಹೊಸದಾಗಿ ಶುರು ಮಾಡುತ್ತೀರಿ ಎಂದು ಕೃಷ್ಣನ್‌ರವರು ಕೇಳಿದ್ದರು ಎಂದು ಅಟ್ಯಾಕ್ ಮಾಡಿದಿರಿ. ಮತ್ತೊಂದು ಕಡೆ ಈ ತುಂಗಭದ್ರಾ ಫೈಬರ್ಸ್ ಬಗ್ಗೆ ಏಕೆ ಸ್ಟ್ರೆಸ್ ಮಾಡಿದೆ ಎಂದರೆ It is not out dated technology ಅದನ್ನು ಎತ್ತುವುದಕ್ಕೆ ಸಾಧ್ಯವಿಲ್ಲ ಎನ್ನುವುದಲ್ಲ

ಶ್ರೀ ಜೆ.ಹೆಚ್. ಪಟೇಲ್.—ಅದನ್ನು ಎತ್ತುವುದಕ್ಕೆ ಸಾಧ್ಯವೇ ಇಲ್ಲವೆಂದು ಹೇಳುವುದಕ್ಕಾಗುವುದಿಲ್ಲ. ಅದು ಹತ್ತಿ ಕಾಳು ಬೀಜದ ಮೇಲಿರುವ ಸಿಪ್ಪೆಯಿಂದ ಫೈಬರ್ ಮಾಡುವುದು.

ಶ್ರೀ ಯು. ಭೂಪತಿ.—ಯಾವ ಪ್ರಾಡಕ್ಟ್‌ಗೆ ಡಿಮ್ಯಾಂಡ್ ಇದೆ, ಅಂಥ ಪ್ರಾಡಕ್ಟ್ ಅದು. Raw material is being imported from America. It is not a local raw material. He is producing first class fibre. ಅಮೇರಿಕದಿಂದ ಮೆಷಿನ್ ತರಿಸಿ ಫೈಬರ್ ಅನ್ನು ಪ್ರೊಡ್ಯೂಸ್ ಮಾಡುತ್ತಿದ್ದಾರೆ. ಉದಾಹರಣೆಗೆ ಹೇಳುವುದಾದರೆ ಒಂದು ಗುಂಡಿಯಲ್ಲಿ ವೇಸ್ಟ್ ಅನ್ನು ಹಾಕಿದ್ದರು ಇದು ಯಾವುದೂ ಕೆಲಸಕ್ಕೆ ಬರುವುದಿಲ್ಲ ಎಂದು ಬೇರೆ ಯಾವ ರಾಜ್ಯದವರೋ ಬಂದು ಅದನ್ನು ೧೮,೦೦೦ ಪರ್ ಟನ್‌ಗೆ ಕೊಟ್ಟು ಖರೀದಿ ಮಾಡಿಕೊಂಡು ಹೋಗಿದ್ದಾರೆ ಈ ಫೈಬರ್ ಇಂಡಸ್ಟ್ರೀಗೆ ೫೮ ಕೋಟಿ ರೂಪಾಯಿಗಳ ಬಂಡವಾಳ ಹಾಕಿದ್ದಾರೆ ಅದರ ಬಗ್ಗೆ ತಾವು ಏಕೆ ಗಮನಹರಿಸಲಿಲ್ಲ ? ಅವರಿಗೆ ಸಹಾಯ ಮಾಡಿ.

ಶ್ರೀ ಜೆ.ಹೆಚ್. ಪಟೇಲ್.—Even though it does not came undər our perview. ಅದರಲ್ಲಿ ನಮ್ಮ ಹಣವಿಟ್ಟಿರುವುದರಿಂದ ಈಗಾಗಲೇ ಅವನಿಗೆ ನೋಟೀಸ್ ಎಲ್ಲಾ

ಕೊಟ್ಟಾಗಿದೆ ಮತ್ತೊಂದು ಸಲ ಕರೆಯಿಸಿ ಏನು ಮಾಡೋಣ ಎಂದು ಅವನನ್ನು ಕೇಳುತ್ತೇನೆ ಆ ವಿಷಯವನ್ನು ನಿಮಗೆ ತಿಳಿಸುತ್ತೇನೆ.

SRI U. BHUPATHI.—It is not possible. Why can't you prosecute him ?

ಶ್ರೀ ಜೆ.ಹೆಚ್. ಪಟೇಲ್.—ಕಾನೂನು ಪ್ರಕಾರ ಪ್ರಾಸಿಕ್ಯೂಟ್ ಮಾಡುವುದಕ್ಕೆ ಅವಕಾಶ ವಿದ್ದರೆ ಮಾಡಿಯೇ ಮಾಡುತ್ತೇವೆ.

ಅಧ್ಯಕ್ಷರು.—ಈಗ ಚರ್ಚೆ ಉತ್ತರ, ವಿವರಣೆ ಮುಕ್ತಾಯವಾಯಿತು. ಈಗ ಸಭೆಯು ಮುಕ್ತಾಯಗೊಂಡು ಮತ್ತೆ ಸೋಮವಾರ ಬೆಳಿಗ್ಗೆ ೧೧-೦೦ ಗಂಟೆಗೆ ಸೇರುವುದು.

(ಸದನವು ೩-೫೫ಕ್ಕೆ ಮುಕ್ತಾಯವಾಗಿ ಮತ್ತೆ ಸೋಮವಾರ ೭ನೇ ಸೆಪ್ಟೆಂಬರ್ ೧೯೮೭ರಂದು ಬೆಳಿಗ್ಗೆ ೧೧-೦೦ ಗಂಟೆಗೆ ಸೇರಲು ನಿಶ್ಚಯಿಸಿತು).